
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಏಪ್ರಿಲ್ 20, 2011 ಪುಟ 20 ರೂ. 12/-


ಹಜಾರೆ ಮತ್ತು ವ್ಯವಸ್ಥಿತ ಭ್ರಷ್ಟಾಚಾರ



ಂಡ್ಯದಲ್ಲಿ
ನರ್ಜನ್ಮ!

ಾವಿರಾರು
ೋಟಿ ರೂ
ಸ್ತಿ

ುತ್ತರಾಧಿಕಾರಿ ಯಾರು?



ವೀರಶೈವ ಮಹಾಧಿವೇಶನ
ಲಿಂಗಾಯತರು ಮಾಡಬೇಕಾದ್ದೇನು?



ಬಿಜೆಪಿ ಹುತ್ತದೊಳಗೆ ಕಚ್ಚಾಡುವ ಹಾವುಗಳು

ಅಶೋಕ್ V/S ಸೋಮಣ್ಣ



ನೋ ಕಾಮೆಂಟ್ಸ್

"ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯೆಂಬುದು ಭಾರತದಲ್ಲಿ ತೆರಿಗೆ ಉಳಿಸುವ ಮಾರ್ಗವಾಗಿದೆಯಷ್ಟೆ. ಶಾರುಖ್ ಖಾನ್ ಮಾರಣಾಂತಿಕ ಕಾಯಿಲೆ ಇರುವವರ ಬಳಿ ಹೋಗಿ ಕೆಂಪು ಗುಲಾಬಿ ಕೊಡುವುದೂ ಸಹ ಮುಂದೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಒಂದು ಕಾರ್ಯಕ್ರಮವಾಗಿಬಿಡಬಹುದು. ಅದು ಬ್ರಾಂಡ್ ಇಮೇಜನ್ನು ಹೆಚ್ಚಿಸುವ ಪ್ರಯತ್ನವಾಗಿರಬಹುದಲ್ಲದೆ, ಅದಕ್ಕೆ ತೆರಿಗೆ ವಿನಾಯತಿಯೂ ದೊರೆತುಬಿಡಬಹುದು."

- ಸಂಜಯ್ ಝಾ, ಕಾರ್ಪೊರೇಟ್ ತರಬೇತುದಾರ

"ಭಾರತವು ವಿಶ್ವ ಕಪ್‌ನಲ್ಲಿ ಗೆಲ್ಲುವುದರ ಮೂಲಕ ಕ್ರಿಕೆಟ್ ಅಂತರರಾಷ್ಟ್ರಿಯ ಮಟ್ಟದಲ್ಲಿ ಮತ್ತೆ ಬಲ ಪಡೆಯಿತೆಂದೇ ಹೇಳಬೇಕು. ಕಾರಣ ಚೆಂಡು-ದಾಂಡಿನ ಈ ಆಟ ಆರ್ಥಿಕವಾಗಿ ಪ್ರಬಲವಾಗಿರುವುದೇ ಭಾರತ ಈ ಆಟದಲ್ಲಿರುವುದರಿಂದ. ಭಾರೀ ಸಂಖ್ಯೆಯಲ್ಲಿ ಕ್ರಿಕೆಟ್ ಪ್ರೇಮಿಗಳು ಇರುವ ದೇಶದ ತಂಡವು ವಿಶ್ವ ಕಪ್‌ನಿಂದ ಬೇಗನೇ ನಿರ್ಗಮಿಸಿ ಟೂರ್ನಿಯೇ ವಿಫಲವಾಗಬಾರದು ಎಂಬ ಕಾರಣಕ್ಕಾಗಿಯೇ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಈ ಬಾರಿಯ ವಿಶ್ವಕಪ್ ಸ್ವರೂಪವನ್ನೇ ಬದಲಿಸಿದ್ದು ಮುಚ್ಚಿಟ್ಟ ಗುಟ್ಟೇನಲ್ಲ."

- ಪ್ರಜಾವಾಣಿ ಸಂಪಾದಕೀಯದಲ್ಲಿ

"ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ ಅನ್ನು ಮೊದಲು ಇಂಪೀರಿಯಲ್ ಕ್ರಿಕೆಟ್ ಕಾನ್ಫರೆನ್ಸ್ ಎಂದೇ ಕರೆಯಲಾಗುತ್ತಿತ್ತು, ಏಕೆಂದರೆ ಅದರ ಸದಸ್ಯ ರಾಷ್ಟ್ರಗಳು ಬ್ರಿಟಿಷ್ ಸಾಮ್ರಾಜ್ಯದ ಮಾಹತುಗಳೇ ಆಗಿದ್ದವು. ಆದರೆ ಎರಡನೇ ಮಹಾಯುದ್ಧದ ನಂತರದಲ್ಲಿ ಹಲವಾರು ಸದಸ್ಯ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದುಕೊಂಡರೂ ಇಂಪೀರಿಯಲ್ ಹೆಸರೇ ಮುಂದುವರೆಯಿತು. 1965ರಲ್ಲಷ್ಟೇ ಅದರ ಹೆಸರು 'ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್' ಎಂದು ಬದಲಾಯಿತು. ಆದರೂ 1993ರವರೆಗೂ ಆ ಮಂಡಳಿಯಲ್ಲಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ವೀಟೋ ಚಲಾಯಿಸುತ್ತಿದ್ದವು. ಈಗ ಭಾರತ ತನ್ನ ಅಪಾರ ಕ್ರಿಕೆಟ್ ಪ್ರೇಮಿಗಳ ಸಂಖ್ಯೆ ಮತ್ತು ಅದರಿಂದ ಲಭ್ಯವಾಗುತ್ತಿರುವ ಟೀವಿ ಚಾನೆಲ್‌ಗಳ ಮಾರುಕಟ್ಟೆ ಹಾಗೂ ಅದರಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ ಲಭ್ಯವಾಗುತ್ತಿರುವ ಹಣ ಇತ್ಯಾದಿಗಳಿಂದಾಗಿ ಭಾರತ ಅನಧಿಕೃತವಾಗಿ ಅಂತರರಾಷ್ಟ್ರೀಯ ಕ್ರಿಕೆಟ್ಟನ್ನು ನಿಯಂತ್ರಿಸುತ್ತಿದೆ."

- ಸುರೇಶ್ ಮೆನನ್, ಲೇಖಕ

"ವಿಶ್ವ ಕಪ್ ಕ್ರಿಕೆಟ್ ಗೆದ್ದ ಕಲಿಗಳಿಗೆ ಬೆಂಗಳೂರಿನಲ್ಲಿ 50/80 ಸೈಟು ಕೊಡುವುದಾಗಿ ಯಡಿಯೂರಪ್ಪನವರು ಘೋಷಿಸಿದ್ದಾರೆ. ಆದರೆ ರಾಜ್ಯದ ಹೆಮ್ಮೆಯ ಕ್ರೀಡಾಳುಗಳಿಗೆ ಬಿಡಿಎ ಸೈಟು ನೀಡುವುದಾಗಿ ಘೋಷಿಸಿ ಮೂರು ವರ್ಷಗಳೇ ಕಳೆದಿವೆ. ಬಿಡಿಎ ಆಡಳಿತ ಮಂಡಳಿ 2008ರ ಫೆಬ್ರವರಿಯಲ್ಲಿ ರಾಜ್ಯದ 25ಕ್ಕೂ ಹೆಚ್ಚಿನ ಮಂದಿಗೆ ಸೈಟು ಹಂಚುವ ನಿರ್ಧಾರ ಕೈಗೊಂಡಿತ್ತು, ಅದೇ ಇನ್ನೂ ಹಂಚಿಲ್ಲ. ಈಗ 40 ಕೋಟಿ ರೂ.ಗೂ ಅಧಿಕ ಮೊತ್ತದ ಸೈಟನ್ನು ಈಗಾಗಲೇ ಲಕ್ಷ್ಮೀಪುತ್ರರಾಗಿರುವ ಕ್ರಿಕೆಟಿಗರಿಗೇ ಧಾರೆ ಎರೆಯುತ್ತಿರುವುದು ಸಾಕಷ್ಟು ಅನುಮಾನಗಳಿಗೆ ಕಾರಣವಾಗಿದೆ."

- ಪತ್ರಿಕಾ ವರದಿ

"ನೈಸರ್ಗಿಕ ವಿಕೋಪದಿಂದ ಜಪಾನ್‌ನಲ್ಲಿ ಸಂಭವಿಸಿರುವ ವಿಕಿರಣ ಸೋರಿಕೆಯ ಹಿನ್ನೆಲೆಯಲ್ಲಿ ದೇಶದ ಅಣುಸ್ಥಾವರಗಳ ಸುರಕ್ಷತೆಯ ಕುರಿತಂತೆ ಪರಾಮರ್ಶೆ ನಡೆಯಬೇಕಿದೆ."

- ಎಂ. ಆರ್. ಶ್ರೀನಿವಾಸನ್, ಭಾರತೀಯ ಅಣುಶಕ್ತಿ ಅಯೋಗದ ಮಾಜಿ ಅಧ್ಯಕ್ಷ

ನಂಬಿದ್ರೆನಂಬಿ ಬಿಟ್ರೆಬಿಡಿ

"ಆದಾಯ ತೆರಿಗೆ ಇಲಾಖೆಯ ಪ್ರಕಾರ ಭಾರತ ಕ್ರಿಕೆಟ್ ಮಂಡಳಿಯು ತನ್ನ ಆದಾಯದ ಶೇ.8ರಷ್ಟು ಭಾಗವನ್ನು ಮಾತ್ರ ಕ್ರಿಕೆಟ್ ಅನ್ನು ಉತ್ತೇಜನ ಹಾಗೂ ಪ್ರಚಾರ ಮಾಡುವುದಕ್ಕೆ ವ್ಯಯಿಸುತ್ತದೆ."

- ಸುರೇಶ್ ಮೆನನ್, ಲೇಖಕ

"ಜೆಡಿಎಸ್ ಅಭ್ಯರ್ಥಿಗಳನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿಕೊಟ್ಟರೆ ನನ್ನ ಮರಣದ ನಂತರ ಚೆನ್ನಪಟ್ಟಣದಲ್ಲೇ ಅಂತ್ಯಸಂಸ್ಕಾರ ಮಾಡುವಂತೆ ಸೂಚಿಸುವೆ."

- ಎಚ್.ಡಿ.ದೇವೇಗೌಡ

"ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬರುವ ಐವತ್ತು ವರ್ಷಗಳ ಕಾಲ ಆಳಲಿದೆ."

- ಯಡಿಯೂರಪ್ಪ

ಅಯ್ಯೋ ದೇವರೇ!

"ದೇವಮಾನವ ಸಾಯಿಬಾಬಾರವರು ಕಣ್ಣು ಬಿಡುತ್ತಿದ್ದಾರೆ, ಕೈಗಳನ್ನು ಆಡಿಸುತ್ತಿದ್ದಾರೆ, ಇದು ವೈದ್ಯರಲ್ಲಿ ತೃಪ್ತಿ ತಂದಿದೆ ಎಂದು ಅವರನ್ನು ನೋಡಿಕೊಳ್ಳುತ್ತಿರುವ ವೈದ್ಯರು ತಿಳಿಸಿದ್ದಾರೆ."

- ಪತ್ರಿಕಾ ವರದಿ


ಅಣ್ಣಾ ಹಜಾರೆಯವರ ವ್ಯಕ್ತಿಗತ ನಿರಶನ ಮತ್ತು ಭಾರತದ ವ್ಯವಸ್ಥಿತ ಭ್ರಷ್ಟಾಚಾರ

ಭಾರತದ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರವೆಂಬುದು ಭ್ರಷ್ಟಾಚಾರಿಗಳ ಇಮೇಜನ್ನು ಡ್ಯಾಮೇಜು ಮಾಡುವ ಶಕ್ತಿಯನ್ನು ಕಳೆದುಕೊಂಡಿದೆ ಎಂಬುದನ್ನು ಯಡ್ಡಿ ಸರ್ಕಾರವನ್ನು ನೋಡಿದರೆ ಗೊತ್ತಾಗುತ್ತದೆ. "ಭ್ರಷ್ಟಾಚಾರದ ಪ್ರಮಾಣ ಏನೇ ಇರಲಿ, ಜನ ಮತ್ತೆ ಚುನಾವಣೆಯಲ್ಲಿ ತಮ್ಮನ್ನು ಆಯ್ಕೆ ಮಾಡಿದರೆ ಸಾಕು. ಜನತೆಯೂ ತಮ್ಮ ಭ್ರಷ್ಟಾಚಾರವನ್ನು ಮನ್ನಿಸಿದ ಹಾಗೆ ಅಥವಾ ತಾವು ಭ್ರಷ್ಟಾಚಾರಿಗಳಲ್ಲ ಎಂದು ಜನರೇ ಸರ್ಟಿಫಿಕೇಟ್ ಕೊಟ್ಟ ಹಾಗೆ" ಎಂಬ ಹೊಸ ರಾಜಕೀಯ ನೀತಿಸಂಹಿತೆಯನ್ನು ಯಡ್ಡಿ ಈಗ ಜಾರಿಗೆ ತಂದಿದ್ದಾರೆ. ಇದು ಕೇವಲ ಬಿಜೆಪಿಗೆ ಮಾತ್ರ ಸೀಮಿತವಾಗಿಲ್ಲ, ಇಂದು ಕೇಂದ್ರದಲ್ಲಿರುವ ಯುಪಿಎ ಸರ್ಕಾರದ್ದೂ ಸಹ ಇದೇ ರಾಜಕೀಯ ಸಂಹಿತೆಯೇ. ಪ್ರಾಯಶಃ ಯುಪಿಎ ಸರ್ಕಾರದ ಹಯಾಮಿನಲ್ಲಿ ಬೆಳಕಿಗೆ ಬಂದಿರುವ ಭ್ರಷ್ಟಾಚಾರದ ಮೊತ್ತವನ್ನು ಲೆಕ್ಕ ಹಾಕಲು ಹೊಸ ಗಣಿತಶಾಸ್ತ್ರವನ್ನೇ ಹುಡುಕಬೇಕಾದೀತು.

ಜನರ ಹೆಸರಿನಲ್ಲಿ ಮಂಜೂರಾಗುವ ಒಂದು ರೂಪಾಯಿಯಲ್ಲಿ ಜನತೆಗೆ 1980ರಲ್ಲಿ 25 ಪೈಸೆ ತಲುಪುತ್ತಿದ್ದರೆ 2010ರಲ್ಲಿ ಅದರ ಪ್ರಮಾಣ ಕೇವಲ 6-10 ಪೈಸೆಗೆ ಇಳಿದಿದೆ ಎಂದು ಅಂದಾಜು ಮಾಡಲಾಗಿದೆ. ಇಂದು ಗ್ರಾಮೀಣ ಭಾರತದಲ್ಲಿ ಜನತೆಯ ಆಹಾರ ಬಳಕೆಯ ಪ್ರಮಾಣ 1950ರ ಪ್ರಮಾಣಕ್ಕಿಂತ ಕೆಳಗಿಳಿದಿದ್ದರೆ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು, ಆಡಳಿತಾರೂಢ ರಾಜಕಾರಣಿಗಳು ಮತ್ತು ದೊಡ್ಡ ಕಾರ್ಪೊರೇಟ್ ಅಧಿಪತಿಗಳ ಮೊತ್ತ ಬಿಲಿಯನ್ನುಗಳನ್ನು ದಾಟುತ್ತಿದೆ. ಸಾರ್ವಜನಿಕ ಭ್ರಷ್ಟಾಚಾರ ಶುರುವಾಗುವುದೇ ಜನತೆಗೆ ದಕ್ಕಬೇಕಾದ ಪಾಲನ್ನು ಕಸಿದುಕೊಳ್ಳುವುದರಿಂದ. ಹೀಗಾಗಿಯೇ ಭ್ರಷ್ಟಾಚಾರ ಕೇವಲ ಒಂದು ರಾಜಕೀಯ ನೈತಿಕತೆಯ ವಿಷಯ ಮಾತ್ರವಲ್ಲ, ಅದು ಜನತೆಯ ದೈನಂದಿನ ಬದುಕನ್ನು ಹಾಡುಹಗಲೇ ದರೋಡೆ ಮಾಡುವ ಬಂಡವಾಳಶಾಹಿ ವ್ಯವಸ್ಥೆಯ ಮತ್ತೊಂದು ಹುನ್ನಾರವೇ ಆಗಿದೆ.

ಆದರೆ ಭ್ರಷ್ಟಾಚಾರದ ಬಗ್ಗೆ ನಮ್ಮಲ್ಲಿ ಒಂದು ಕಡೆ ಮಾಧ್ಯಮಗಳು ಮತ್ತು ರಾಜಕಾರಣಿಗಳು ಒಂದು ಬಗೆಯ ಸಂವೇದನಾಶೂನ್ಯತೆಯನ್ನು ಹುಟ್ಟುಹಾಕಿದ್ದರೆ, ಭ್ರಷ್ಟಾಚಾರ ನಿವಾರಣೆಗೆಂದು ಹುಟ್ಟುಹಾಕಲಾಗಿರುವ ಸಂಸ್ಥೆಗಳು ಸಜ್ಜನರ ಹಪಹಪಿಕೆಯಷ್ಟೇ ಅಸಹಾಯಕವಾಗಿವೆ.

ಮೊನ್ನೆ ಖ್ಯಾತ ಗಾಂಧೀವಾದಿ ಹೋರಾಟಗಾರ ಅಣ್ಣಾ ಹಜಾರೆಯವರು ಜನಲೋಕಪಾಲ್ ಮಸೂದೆಯನ್ನು ಜಾರಿಗೆ ತರಬೇಕೆಂದು ದೆಹಲಿಯಲ್ಲಿ ಆಮರಣಾಂತ ನಿರಶನ ಸತ್ಯಾಗ್ರಹ ಕೈಗೊಂಡು ಕೂತಿದ್ದಾರೆ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಭ್ರಷ್ಟಾಚಾರ ಮತ್ತು ಅದರ ನಿಗ್ರಹದ ಬಗ್ಗೆ ದೇಶವ್ಯಾಪಿ ಚರ್ಚೆ ನಡೆಯುತ್ತಿದೆ. 2ಜಿ ಸ್ಪೆಕ್ಟ್ರಂ ಹಗರಣ, ಆಹಾರ ಧಾನ್ಯಗಳ ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣಗಳಲ್ಲಿ ಎಣಿಕೆಗೆ ಸಿಗದಷ್ಟು ಹಣವನ್ನು ಯುಪಿಎ ಸರ್ಕಾರದ ಮಂತ್ರಿಗಳು ಮತ್ತು ಅವರ ಆಶ್ರಿತರು ಕಬಳಿಸಿರುವುದು ಹೆಚ್ಚುಕಡಿಮೆ ಸಾಬೀತಾಗಿ ಯುಪಿಎಯ ಇಮೇಜಿಗೆ ಧಕ್ಕೆ ಬಂದಿರುವುದರಿಂದ ಅದನ್ನು ಹೇಗಾದರೂ ಹೋಗಲಾಡಿಸಿಕೊಳ್ಳಲು ಅದು 2010ರ ಅಕ್ಟೋಬರ್‌ನಲ್ಲಿ 1966ರಿಂದಲೂ ನೆನೆಗುದಿಗೆ ಬಿದ್ದಿದ್ದ ಲೋಕಪಾಲ್ ಮಸೂದೆಯನ್ನು ಜಾರಿಗೆ ತರುವ ಇಂಗಿತವನ್ನು ವ್ಯಕ್ತಪಡಿಸಿತು. ತಮ್ಮ ಸರ್ಕಾರದಲ್ಲಿ ಕೆಲವು ಮಂತ್ರಿಗಳು ಭ್ರಷ್ಟರಾಗಿದ್ದಿರಬಹುದಾದರೂ ತಮ್ಮದು ಭ್ರಷ್ಟಾಚಾರವನ್ನು ಹತ್ತಿಕ್ಕುವ ಸರ್ಕಾರ ಎಂಬ ಇಮೇಜನ್ನು ಮತ್ತೆ ಪಡೆದುಕೊಳ್ಳಲೆಂದೇ ಲೋಕಪಾಲ್ ಮಸೂದೆಯನ್ನು ಪ್ರಸ್ತಾಪಿಸಿದ ಯುಪಿಎ ಸರ್ಕಾರ ಅದರ ರೂಪುರೇಷೆಯನ್ನು ಸಿದ್ಧಪಡಿಸಲು ಆಂಟನಿ, ಚಿದಂಬರಂ, ಕಪಿಲ್ ಸಿಬಲ್, ಪ್ರಣಬ್ ಮುಖರ್ಜಿಯವರನ್ನು ಒಳಗೊಂಡ ಸಮಿತಿಯನ್ನು 2011ರ ಜನವರಿಯಲ್ಲಿ ನೇಮಿಸಿತು. ಅಲ್ಲಿಗೆ ಸರ್ಕಾರ ಮತ್ತು ಜನ ಇಬ್ಬರೂ ಲೋಕಪಾಲರನ್ನೂ ಮತ್ತು ಭ್ರಷ್ಟಾಚಾರವನ್ನೂ ಮರೆತರು. ಆದರೆ ಇದೀಗ ನಾಲ್ಕು ರಾಜ್ಯಗಳಲ್ಲಿ ಚುನಾವಣೆ



ಘೋಷಣೆಯಾಗುತ್ತಿದ್ದಂತೆ ವಿರೋಧ ಪಕ್ಷಗಳು ಯುಪಿಎ ಸರ್ಕಾರವನ್ನು ಹಣಿಯಲು ಭ್ರಷ್ಟಾಚಾರವನ್ನೇ ಪ್ರಬಲ ಅಸ್ತ್ರವನ್ನಾಗಿ ಬಳಸುತ್ತಿದ್ದಾರೆ. ಇದೇ ಸಂದರ್ಭಕ್ಕೆ ಸರಿಯಾಗಿ ಗಾಂಧೀವಾದಿ ಅಣ್ಣಾ ಹಜಾರೆಯವರೂ ಸರ್ಕಾರ ಪ್ರಸ್ತಾಪಿಸಿರುವ ಲೋಕಪಾಲ್ ಮಸೂದೆಯ ಸ್ವರೂಪವನ್ನು ವಿರೋಧಿಸುತ್ತಾ ತಾವು ಮತ್ತು ತಮ್ಮಂತೆ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿರುವ ಜನಪರ ಹೋರಾಟಗಾರರು ಮುಂದಿಟ್ಟಿರುವ ಜನಲೋಕಪಾಲ್ ಮಸೂದೆಯನ್ನು ಜಾರಿಗೆ ತರಬೇಕೆಂದು ಆಗ್ರಹಿಸುತ್ತಾ ಆಮರಣಾಂತ ನಿರಶನ ಕೂತಿದ್ದಾರೆ.

ವಾಸ್ತವವಾಗಿ ಹಜಾರೆ ಮತ್ತವರ ಸ್ನೇಹಿತರು ಮುಂದಿಡುತ್ತಿರುವ ಜನಲೋಕಪಾಲ್ ಮಸೂದೆಯಾದರೂ ಭ್ರಷ್ಟಾಚಾರದ ಬೇರುಗಳನ್ನು ನಿಜಕ್ಕೂ ಅಲ್ಲಾಡಿಸುತ್ತವೆಯೇ ಎಂಬ

ಶಿವಸುಂದರ್



ಚಾರ್ವಾಕ

ಪ್ರಶ್ನೆಯನ್ನು ಗಂಭೀರವಾಗಿ ಕೇಳಿಕೊಳ್ಳಬೇಕಾಗಿದೆಯಾದರೂ ಅದು ಯುಪಿಎ ಸರ್ಕಾರದ ಲೋಕಪಾಲ್ ಮಸೂದೆ ಎಂಥಾ ಮೋಸ ಎಂಬುದನ್ನು ಬಯಲಿಗೊಳಿಸುವಲ್ಲಿ ಯಶಸ್ವಿಯಾಗಿದೆ.

ಯುಪಿಎ ಸರ್ಕಾರ ಈ ಮಸೂದೆಯನ್ನು ಪ್ರಸ್ತಾಪಿಸಿದಾಗ ಭ್ರಷ್ಟಾಚಾರ ಮಾಡಿದ ಪ್ರಧಾನಿಯನ್ನೂ ಬಲಿಹಾಕಬಲ್ಲಂಥ ಮಸೂದೆ ಇದು ಎಂದು ಪ್ರಚಾರ ಮಾಡಲಾಗಿತ್ತು, ಆದರೆ ಈಗ ಸದನದಲ್ಲಿರುವ ಈ ಲೋಕಪಾಲ್ ಮಸೂದೆಯ ಪ್ರಕಾರ:

1. ಲೋಕಪಾಲ್ ಸಂಸ್ಥೆ ತಾನೇ ಖುದ್ದಾಗಿ ಯಾರ ಮೇಲೂ ತನಿಖೆ ನಡೆಸುವಂತಿಲ್ಲ, ಲೋಕಸಭೆಯ ಸ್ಪೀಕರ್ ಮತ್ತು ರಾಜ್ಯಸಭೆಯ ಅಧ್ಯಕ್ಷ ಯಾರ ಬಗ್ಗೆ ದೂರು ಕೊಡುತ್ತಾರೋ ಅವರ ಬಗ್ಗೆ ಮಾತ್ರ ತನಿಖೆ ನಡೆಸಬಹುದು. ಇವೆರಡೂ ಸ್ಥಾನಗಳಿಗೆ ಆಳುವ ಪಕ್ಷದ ಪ್ರತಿನಿಧಿಯೇ ಆಯ್ಕೆಯಾಗುತ್ತಾರಾದ್ದರಿಂದ ಸ್ಪೀಕರ್ ಪ್ರಧಾನಿಯ ಬಗ್ಗೆ ಇರಲಿ, ತನ್ನದೇ ಪಕ್ಷದ ಸದಸ್ಯನ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸುವುದನ್ನು ಊಹಿಸಲಾದರೂ ಸಾಧ್ಯವೇ? ಹೆಚ್ಚೆಂದರೆ ಅದು ವಿರೋಧಿ ಪಕ್ಷಗಳನ್ನು ಮಟ್ಟ ಹಾಕುವ ಆಯುಧಗಳಾಗಬಹುದು ಅಷ್ಟೆ.
2. ಈ ಲೋಕಪಾಲ್ ಸಂಸ್ಥೆಗೆ ಕನಿಷ್ಠ ಒಂದು ಪೊಲೀಸ್ ಸ್ಟೇಷನ್‌ಗೆ ಇರುವ ಅಧಿಕಾರವೂ ಇಲ್ಲ. ಇದು ಯಾರ ಬಗ್ಗೆಯೂ ಪ್ರಥಮ ಮಾಹಿತಿ ವರದಿ(ಎಫ್.ಐ.ಆರ್) ಯನ್ನೂ ದಾಖಲಿಸಿಕೊಳ್ಳುವಂತಿಲ್ಲ. ಅದು ಏನಿದ್ದರೂ ಒಂದು ಸಲಹಾ ಸಮಿತಿಯ ಮಾದರಿಯದ್ದು. ತನ್ನ ವಿಚಾರಣೆಯ ವರದಿಯನ್ನು ಅದು ಸಂಬಂಧಪಟ್ಟ ಸಂಸ್ಥೆಗಳಿಗೆ ಕೊಡಬೇಕು. ಅವರು ಈ ವರದಿಯನ್ನು ಸ್ವೀಕರಿಸಲೂಬಹುದು ಅಥವಾ ತಿರಸ್ಕರಿಸಲೂಬಹುದು. ಕ್ಯಾಬಿನೆಟ್ ಮಂತ್ರಿಗಳ ಬಗೆಗಿನ ತನಿಖಾ ವರದಿಯ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಪರಮಾಧಿಕಾರ ಪ್ರಧಾನಿಗೆ, ಹಾಗೂ ಪ್ರಧಾನಿ ಅಥವಾ ಇತರ ಸಂಸತ್ ಸದಸ್ಯರ ಮೇಲಿನ ದೂರಿನ ಮೇಲೆ ತೀರ್ಮಾನ ತೆಗೆದುಕೊಳ್ಳುವ ಪರಮಾಧಿಕಾರ ಸಂಸತ್ತಿನದು. ಹೀಗೆ ಇಲ್ಲಿಯೂ ಭಕ್ಷಕರ ಕೈಯಲ್ಲೇ ನ್ಯಾಯ ರಕ್ಷಣೆಯ ಜವಾಬ್ದಾರಿಯನ್ನು ನೀಡಲಾಗಿದೆ.
3. ಈ ಲೋಕಪಾಲ್ ಪರಿಧಿಯಿಂದ ರಕ್ಷಣಾ ಇಲಾಖೆ ಮತ್ತು ವಿದೇಶಾಂಗ ಇಲಾಖೆಯನ್ನು ಹೊರಗುಳಿಸಲಾಗಿದೆ. ಈ ಬಾರಿ ರಕ್ಷಣಾ ಇಲಾಖೆಗೆ ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ಅತಿ ಹೆಚ್ಚು ಅಂದರೆ 2 ಲಕ್ಷ ಕೋಟಿಯಷ್ಟು ಹಣವನ್ನು ನೀಡಲಾಗಿದೆ. ಅದರಲ್ಲಿ ಶೇ.70 ಭಾಗ ಶಸ್ತ್ರಾಸ್ತ್ರಗಳ ಖರೀದಿಗೆಂದೇ ವ್ಯಯವಾಗಲಿದೆ. ಜೇನ್ಸ್ ಡಿಫೆನ್ಸ್ ವೀಕ್ಲಿಯ ಪ್ರಕಾರ ಮುಂದಿನ ಐದು ವರ್ಷಗಳ ಕಾಲ ಶಸ್ತ್ರಾಸ್ತ್ರ ಖರೀದಿ ಯಲ್ಲಿ ಭಾರತವೇ ಜಗತ್ತಿನಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ. ಹಾಗೂ ಅತಿ ಹೆಚ್ಚು ಗೋಲ್‌ಮಾಲ್‌ಗಳು ಆಗುವುದು ರಕ್ಷಣಾ ವ್ಯವಹಾರದಲ್ಲೆ ಎಂಬುದು ಶವಪೆಟ್ಟಿಗೆ ಹಗರಣದಲ್ಲಿ ಸಾಬೀತಾಗಿದೆ. ಆದರೂ ರಕ್ಷಣಾ ಇಲಾಖೆ ಲೋಕಪಾಲರ ಪರಿಧಿಗೆ ಬರುವುದಿಲ್ಲ!
4. ಈ ಲೋಕಪಾಲಕ್ಕೆ ನಿವೃತ್ತ ನ್ಯಾಯಮೂರ್ತಿಗಳು ಮಾತ್ರ ಸದಸ್ಯರಾಗಬಹುದು. ಅವರನ್ನು ನೇಮಕ ಮಾಡಲು ವಿರೋಧ ಪಕ್ಷಗಳು ಇರುತ್ತಾವಾದರೂ ಅಂತಿಮ ತೀರ್ಮಾನ ಆಳುವ ಸರ್ಕಾರದ್ದೇ ಆಗಿರುತ್ತೆ. ಹೀಗಾಗಿ ನಿವೃತ್ತಿಯ ನಂತರದ ಆಶ್ರಯಕ್ಕಾಗಿ ವೃತ್ತಿ ಯಲ್ಲಿರುವಾಗಲೇ ನ್ಯಾಯಮೂರ್ತಿಗಳು ಆಳುವ ಸರ್ಕಾರದ ಪರ ವಾಲುವುದಕ್ಕಿಂತ ವಿಶೇಷ ಪ್ರಯೋಜನ ಇದರಿಂದೇನೂ ಆಗುವುದಿಲ್ಲ.

ಹೀಗೆ ಮೇಲ್ನೋಟಕ್ಕೆ ಗೊತ್ತಾಗುವಂತೆ ಸರ್ಕಾರ ಮಂಡಿಸುತ್ತಿರುವ ಲೋಕಪಾಲ್ ಮಸೂದೆ ಹಲ್ಲಿಲ್ಲದ ಹಾವು ಮಾತ್ರವಲ್ಲ, ಅದು ಭುಸುಗುಡುವುದೂ ಕಷ್ಟ. ಅದಕ್ಕೆ ಪ್ರತಿಯಾಗಿ ಹಜಾರೆ ಮತ್ತು ಇತರ ಜನಪರ ಗುಂಪುಗಳು ಲೋಕಪಾಲದಲ್ಲಿ ನ್ಯಾಯಮೂರ್ತಿಗಳು ಮಾತ್ರವಲ್ಲದೆ ಜನಪ್ರತಿನಿಧಿಗಳು ಇರಬೇಕೆಂದೂ, ಲೋಕಪಾಲಕ್ಕೆ ಯಾರ ಬಗ್ಗೆಯಾದರೂ ತಾನೇ ಸ್ವಯಂ ತನಿಖೆ ಮಾಡುವ ಹಾಗೂ ಶಿಕ್ಷಿಸುವ ಅಧಿಕಾರವೂ ಇರಬೇಕೆಂದೂ ಆಗ್ರಹಿಸುತ್ತಿದ್ದಾರೆ. ಈ ಆಗ್ರಹಗಳನ್ನು ಸರ್ಕಾರ ಜಾರಿಗೆ ತಂದರೆ ಲೋಕಪಾಲಕ್ಕೆ ಸ್ವಲ್ಪ ಹಲ್ಲುಗಳು ಬರಬಹುದು. ಹೀಗಾಗಿ ಅಷ್ಟಾದರೂ ಆಗಬೇಕು ಎಂದು ಅದನ್ನು ಬೆಂಬಲಿಸಬೇಕು.

ಆದರೆ ಈ ಎಲ್ಲಾ ಕ್ರಮಗಳು ಕಾನೂನು ವಿರೋಧಿ ಭ್ರಷ್ಟಾಚಾರಗಳನ್ನು ಮಾತ್ರ ಸ್ವಲ್ಪಮಟ್ಟಿಗೆ ತಡೆಯಬಹುದು. ಆದರೆ ಜಾಗತೀಕರಣ, ಉದಾರೀಕರಣದ ಪ್ರಕ್ರಿಯೆಯಲ್ಲಿ ಹಲವಾರು ಭ್ರಷ್ಟಾಚಾರಗಳು ಶಾಸನಬದ್ಧವೇ ಆಗಿಬಿಟ್ಟಿವೆ. ಉದಾಹರಣೆಗೆ ಈ ದೇಶದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದೇ 1991ರ ನಂತರದಲ್ಲಿ, ಉದಾರೀಕರಣ ಮತ್ತು ಖಾಸಗೀಕರಣದ ಹೆಸರಲ್ಲಿ ಸಾರ್ವಜನಿಕ ವಲಯದ ಆರ್ಥಿಕತೆಯಲ್ಲಿ ಖಾಸಗಿ ಲಾಭಕೋರರನ್ನು ಶಾಸನಬದ್ಧವಾಗಿ ಬಿಟ್ಟುಕೊಂಡಿದ್ದರಿಂದ. ಈಗ ಸರ್ಕಾರದ ಯಾವುದೇ ಯೋಜನೆಯಲ್ಲಿ ಕಡ್ಡಾಯವಾಗಿ ಲಾಭಕೋರ ಕಾರ್ಪೊರೇಟ್‌ಗಳು ಭಾಗವಹಿಸಬೇಕೆಂಬುದು ಶಾಸನ. ಇದು ಭಾರತದಲ್ಲಿ ರೂಪುಗೊಳ್ಳುತ್ತಿರುವ ಬಂಡವಾಳಶಾಹಿಯ ಸ್ವರೂಪ. ಇದೇ ಭ್ರಷ್ಟಾಚಾರದ ಗಂಗೋತ್ರಿ.

ಎಲ್ಲಿಯತನಕ ಭ್ರಷ್ಟಾಚಾರದ ಮೂಲಗಳನ್ನು ವ್ಯವಸ್ಥೆಯಲ್ಲಿ ಹುಡುಕದೇ ವ್ಯಕ್ತಿಗಳಲ್ಲಿ ಮಾತ್ರ ಹುಡುಕುತ್ತಿರುತ್ತೇವೆಯೋ ಅಲ್ಲಿಯತನಕ ಸಾವಿರ ಕಳ್ಳ ಸಿಗುತ್ತಾನೆ. ದರೋಡೆಕೋರ, ಲೂಟಿಕೋರ ಮಂತ್ರಿಯಾಗಿ, ಕಾರ್ಪೊರೇಟ್ ಅಧಿಪತಿಯಾಗಿ ನಮ್ಮೆದುರೇ ಮೆರೆಯುತ್ತಿರುತ್ತಾನೆ.


ದಗಲ್ಬಾಜಿ ಬಾಬಾ ಹಾಸಿಗೆ ಹಿಡಿದಾಗ...!



• ಗೌರಿ ಲಂಕೇಶ್
editorlankesh@gmail.com


ಕಂಡಹಾಗೆ

"ನನ್ನನ್ನು ಜುಜುಬಿ ಮಂತ್ರವಾದಿಗಳಿಗೆ ಹೋಲಿಸಬೇಡಿ. ನನಗೆ ದೈವಶಕ್ತಿ ಇದೆ. ಅದೆಷ್ಟು ಬಲಿಷ್ಠವಾದ ಶಕ್ತಿ ಎಂದರೆ ನಾನು ಆಕಾಶವನ್ನು ಭೂಮಿಯಾಗಿಯೂ, ಭೂಮಿಯನ್ನು ಆಕಾಶವಾಗಿಯೂ ಪರಿವರ್ತಿಸಬಲ್ಲೆ. ಆದರೆ ಅದನ್ನು ನಾನು ಮಾಡಲು ಹೋಗಿಲ್ಲ ಯಾಕೆಂದರೆ ಅದರ ಅವಶ್ಯಕತೆ ಇಲ್ಲ..." ಎಂದಿದ್ದ ಸಾಯಿಬಾಬಾ ಇವತ್ತು ತನ್ನ ದೈವಶಕ್ತಿಯನ್ನು ಉಪಯೋಗಿಸಿ ತನ್ನ ಕಿಡ್ನಿಯನ್ನೇ ರಿಪೇರಿ ಮಾಡಿಕೊಳ್ಳಲಾಗದೆ, ಸಹಜವಾಗಿ ಉಸಿರಾಡಲೂ ಸಾಧ್ಯವಾಗದೆ ಮಾನವ ನಿರ್ಮಿತ ಯಂತ್ರಗಳನ್ನು ಅವಲಂಬಿಸಿ ಜೀವನ್ಮರಣದ ನಡುವೆ ಹೊಯ್ದಾಡುತ್ತಿದ್ದಾನೆ.


ಡಾ.ಕೊವೂರ್

ಈ ಸಾಯಿಬಾಬಾನನ್ನು ನಾನು ಮೊದಲು ನೋಡಿದ್ದು ನಾನು ಓದುತ್ತಿದ್ದ ಹೋಮ್‌ಸ್ಕೂಲಿನವರು ಒಮ್ಮೆ ನಮ್ಮನ್ನೆಲ್ಲ ವೈಟ್‌ಫೀಲ್ಡ್‌ಗೆ ಟ್ರಿಪ್ ಕರೆದುಕೊಂಡು ಹೋಗಿದ್ದಾಗ. ಆಗ ನನಗೆ ಎಂಟೋ, ಒಂಭತ್ತೋ ವರ್ಷವಿರಬೇಕು. ಅಲ್ಲಿಯತನಕ ನಾನು ನೋಡಿದ್ದ ಮತ್ತೋರ್ವ ಖಾವಿಧಾರಿ ಎಂದರೆ ತುಮಕೂರಿನಲ್ಲಿದ್ದ ನಮ್ಮ ಸಂಬಂಧಿಕರ ಮನೆಗೆ ಸಿದ್ದಗಂಗಾ ಮಠದ ಶಿವಕುಮಾರಸ್ವಾಮಿಗಳು ಪಾದ ಪೂಜೆಗೆಂದು ಬಂದಿದ್ದಾಗ. ವೈಟ್‌ಫೀಲ್ಡಿನ ಗುಂಗುರು ಕೂದಲಿನ ಆ ವಿಚಿತ್ರ ಸ್ವಾಮಿಯನ್ನು ಸಿದ್ದಗಂಗಾಸ್ವಾಮಿಗಳೊಂದಿಗೆ ನನ್ನ ಮನಸ್ಸಿನಲ್ಲೇ ಹೋಲಿಸಿ ಈತ ಎಂತಹ ಸ್ವಾಮಿ ಇದ್ದಿರಬಹುದು ಎಂದು ಸೋಜಿಗ ಪಟ್ಟಿದ್ದೆ. ಆದರೆ ಅವತ್ತಿನ ಟ್ರಿಪ್ ನಂತರ ನನ್ನ ನೆನಪಿನಲ್ಲಿ ಉಳಿದದ್ದು ಈ ಸಾಯಿಬಾಬಾಗಿಂತಲೂ ಅದೇ ವೈಟ್‌ಫೀಲ್ಡಿನಲ್ಲಿದ್ದ ಅಲೆಂಬಿಕ್ ಗ್ಲಾಸ್‌ಫ್ಯಾಕ್ಟರಿಯಲ್ಲಿ ಗಾಜನ್ನು ವಿವಿಧ ಆಕಾರಗಳಲ್ಲಿ, ರೂಪಗಳಲ್ಲಿ ತಯಾರಿಸುವುದನ್ನು ನೋಡಿದ್ದು. ಅದು ನನಗೆ ಮಜಾ ಕೊಟ್ಟಿತ್ತು.

ನಮ್ಮ ಮನೆಯಲ್ಲಿ ಸ್ವಾಮಿ, ಬಾಬಾ, ಗುರು ಇತ್ಯಾದಿಗಳಿಗೆ ಜಾಗವೇ ಇಲ್ಲದ್ದರಿಂದ ನಾವು ಚಿಕ್ಕವರಾಗಿದ್ದಾಗ ಈ ಸಾಯಿಬಾಬಾ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಆದರೂ ಕಾಲಕ್ರಮೇಣ ಅಲ್ಲಲ್ಲಿಂದ ಈ ಸ್ವಾಮಿ ಗಾಳಿಯಿಂದ ಬೂದಿಯನ್ನು ಸೃಷ್ಟಿಸುತ್ತಾನಂತೆ, ಮಾಯದಲ್ಲಿ ಚಿನ್ನದ ಸರವನ್ನು ಪಡೆದು ತನ್ನ ಭಕ್ತರಿಗೆ ಕೊಡುತ್ತಾನಂತೆ, ಅಷ್ಟೇ ಯಾಕೆ, ಎಚ್‌ಎಂಟಿ ಮತ್ತು ಸ್ವಿಸ್ ವಾಚ್‌ಗಳನ್ನೂ ಕ್ಷಣಾರ್ಧದಲ್ಲಿ ತಯಾರಿಸುತ್ತಾನಂತೆ ಎಂದೆಲ್ಲ ಕೇಳಿದ್ದೆ. ಆದರೆ ಅಪ್ಪ ಮತ್ತು ಅಮ್ಮ 'ಅದೆಲ್ಲ ಕಪಟ ನಾಟಕ. ಅದನ್ನೆಲ್ಲ ನಂಬಬಾರದು' ಎಂದು ನಮಗೆ ಹೇಳುತ್ತಿದ್ದರು.



ಬಸವ ಪ್ರೇಮಾನಂದ

1976ರಲ್ಲಿ ನಡೆದದ್ದು ನನ್ನಲ್ಲಿ ರೋಮಾಂಚನ ಮೂಡಿಸಿತ್ತು. ಆಗ ಖ್ಯಾತ ವಿಚಾರವಾದಿಯಾಗಿದ್ದ ಅಬ್ರಹಾಮ್ ಕೊವೂರ್ ಎಂಬುವವರು ಸಾಯಿಬಾಬಾನಿಗೆ ನೇರ ಸವಾಲನ್ನು ಹಾಕಿದ್ದರು. "ಸಾಯಿಬಾಬಾನದ್ದು ಬರೀ ಕೈಚಳಕ. ಸಣ್ಣಪುಟ್ಟ ಮಂತ್ರವಾದಿಗಳು ಮಾಡುವ ಟ್ರಿಕ್‌ಗಳನ್ನೇ ಆತ ಮಾಡುವುದು. ಆತನಿಗಾಗಲಿ, ಬೇರೆ ಯಾರಿಗೇ ಆಗಲಿ ದೈವಶಕ್ತಿ ಇರಲು ಸಾಧ್ಯವಿಲ್ಲ" ಎಂದಿದ್ದ ಕೊವೂರ್ ಅವರು "ತಾಕತ್ತಿದ್ದರೆ ಈ ದೈವಶಕ್ತಿಯನ್ನು ಸಾಯಿಬಾಬಾ ನಮ್ಮ ಮುಂದೆ ಪ್ರದರ್ಶಿಸಲಿ" ಎಂದಿದ್ದರು. ಇದಕ್ಕೆ ಸಾಯಿಬಾಬಾನಿಂದ ಯಾವ ಪ್ರತಿಕ್ರಿಯೆಯೂ ಬಾರದಿದ್ದಾಗ ಅವರು ನೇರವಾಗಿ ವೈಟ್‌ಫೀಲ್ಡಿನಲ್ಲಿದ್ದ ಸಾಯಿಬಾಬಾನ ಆಶ್ರಮಕ್ಕೇ ಹೋಗಿದ್ದರು. ಆದರೆ ಇವರನ್ನು ಎದುರಿಸಲಾಗದೇ ಸಾಯಿಬಾಬಾ ಅಲ್ಲಿಂದ ಪೇರಿಕಿತ್ತಿದ್ದ.

ಆಗಲೇ ನನ್ನ ಸ್ನೇಹಿತ ಚಿದಾನಂದ ರಾಜಘಟ್ಟ ನನಗೆ ಕೊವೂರ್ ಅವರು ಬರೆದಿರುವ 'ಬಿಗೋನ್ ಗಾಡ್‌ಮೆನ್' ಪುಸ್ತಕವನ್ನು ಪರಿಚಯಿಸಿದ್ದು. ಅದನ್ನು ಓದಿದ ನಾನು ಕೊವೂರ್ ಅವರ ಪ್ರಭಾವಕ್ಕೆ ಒಳಗಾದೆ. ಅದಾದ ಮೇಲೆ ನಾನು ನ್ಯಾಷನಲ್ ಕಾಲೇಜನ್ನು ಸೇರಿ ಅಲ್ಲಿದ್ದ ಎಚ್.ನರಸಿಂಹಯ್ಯನವರ ಬಗ್ಗೆ ಅಪಾರ ಗೌರವವನ್ನು ಬೆಳೆಸಿಕೊಂಡೆ. ಕಾಲೇಜಿನಲ್ಲಿದ್ದ ನನ್ನ ಕೆಲವು ಮಿತ್ರರು 'ಎಚ್‌ಎನ್' ಅವರನ್ನು 'ಹುಚ್ಚು ನಾಯಿ' ಎಂದು ಲೇವಡಿ ಮಾಡಿದರೆ ನನಗೆ ಕೋಪ ಬರುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಎಚ್‌ಎನ್ ಅವರು ಕೂರುತ್ತಿದ್ದ ಕುರ್ಚಿಯ ಹಿಂದೆ ಗೋಡೆಯ ಮೇಲೆ '?' ಎಂದು ಬರೆಸಿದ್ದು ನನಗೆ ಇಷ್ಟವಾಗಿತ್ತು. ಎಚ್‌ಎನ್ ಪ್ರಕಾರ '?'ರ ಸೂಚನೆ ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಕೂಡದು ಎಂಬುದಾಗಿತ್ತು. ಎಚ್‌ಎನ್ ಅವರಿಂದಲೇ ಮೂಢನಂಬಿಕೆಗಳ, ಢೋಂಗಿ ಸ್ವಾಮಿಗಳ ಮತ್ತು ಗ್ರಹಣ/ಜ್ಯೋತಿಷ್ಯಗಳ ವಿರುದ್ಧ ನಾನು ಅರಿವನ್ನು ಮೂಡಿಸಿಕೊಂಡಿದ್ದು. ಅದೆಲ್ಲ ಇರಲಿ, ನನ್ನಲ್ಲಿ ತರ್ಕನಿಷ್ಠ ಚಿಂತನೆಗಳನ್ನು ಹುಟ್ಟುಹಾಕಿದ್ದು ಖಂಡಿತವಾಗಿಯೂ ಕೊವೂರ್ ಮತ್ತು ಗುರುಗಳಾಗಿದ್ದ ಎಚ್‌ಎನ್ ಅವರೇ.

ಆಗಿನ ಕಾಲದಲ್ಲಿ ಸಾಯಿಬಾಬಾನ ಆಪ್ತ ಶಿಷ್ಯರಲ್ಲಿ ಪ್ರಮುಖರಾಗಿದ್ದವರು ಡಾ. ಎಸ್.ಭಗವಂತಮ್ ಎಂಬುವವರು. ಕೇಂದ್ರ ಸರ್ಕಾರಕ್ಕೆ 'ಸೈಂಟಿಫಿಕ್ ಅಡ್ವೈಸರ್' ಆಗಿದ್ದ ಭಗವಂತಮ್ ತರಹದ ವಿಜ್ಞಾನಿ ಅದು ಹೇಗೆ ಇಂತಹ ಬೂಸಿ ಬಾಬಾನ ಭಕ್ತರಾಗಿದ್ದಾರೆ ಎಂಬುದು ನನಗೆ ಅಚ್ಚರಿಯ ವಿಷಯವಾಗಿತ್ತು, ಆನಂತರ ಗೊತ್ತಾಗಿದ್ದೇನೆಂದರೆ, ಭಗವಂತಮ್ ಅವರಿಗೆ ಓರ್ವ ಅಂಗವಿಕಲ ಮಗನಿದ್ದ. ಆತನಿಗೆ ಅದೆಷ್ಟೇ ಚಿಕಿತ್ಸೆ ಕೊಡಿಸಿದ್ದರೂ ಆತ ಸರಿಹೋಗಿರಲಿಲ್ಲ. ಆಗ ಸಾಯಿಬಾಬಾ ತಾನು ಅವನನ್ನು ಸರಿಪಡಿಸುತ್ತೇನೆಂದು ಹೇಳಿ ಭಗವಂತಮ್ ಅವರನ್ನು ನಂಬಿಸಿದ್ದ. ಹಲವು ಬಾರಿ ಅವರ ಮಗನ ದೇಹಕ್ಕೆ ಸೂಜಿಗಳಿಂದ ಚುಚ್ಚಿ ದ್ರವವನ್ನು ಸಂಗ್ರಹಿಸಿ, ಬೂದಿ, ಮೆತ್ತಿ ವಿಚಿತ್ರ ಆಚರಣೆಗಳನ್ನು ಬಾಬಾ ಮಾಡಿದ್ದ. ವಿಜ್ಞಾನ ಸಾಧಿಸದಿದ್ದನ್ನು ಬಾಬಾ ಸಾಧಿಸಿ ತನ್ನ ಪುತ್ರ ಸರಿಹೋಗುತ್ತಾನೆಂದು ಭಗವಂತಮ್ ನಂಬಿದ್ದರು. ಆ ಕಾರಣಕ್ಕೇ ಅವರು ಆತನನ್ನು ಆರಾಧಿಸುತ್ತಿದ್ದರು. ಆದರೆ ಬಾಬಾನ ಕಪಟತನ ಕೊನೆಗೂ ಭಗವಂತಮ್ ಅವರಿಗೆ ಗೊತ್ತಾಯಿತು. ಎಂಭತ್ತರ ದಶಕದಲ್ಲಿ ಭಗವಂತಮ್ ಸಾಯಿಬಾಬಾನನ್ನು ತೊರೆದರಲ್ಲದೆ ತಮ್ಮ ಮನೆಯಲ್ಲಿದ್ದ ಆತನ ಫೋಟೊ ಇತ್ಯಾದಿಗಳನ್ನೆಲ್ಲ ಬೀದಿಗೆ ಬಿಸಾಡಿ ಬಾಗಿಲನ್ನು ಮುಚ್ಚಿದ್ದರು.

ಸಾಯಿಬಾಬಾನ ದೈವಶಕ್ತಿ ಬಗ್ಗೆ ಆಗ ಒಂದು ಕತೆ ಚಾಲ್ತಿಗೆ ಬಂದಿತ್ತು. ಅದರ ಪ್ರಕಾರ ಒಮ್ಮೆ ಜಪಾನಿನ ಖ್ಯಾತ ಸೀಕೋ ವಾಚ್ ತಯಾರಕ ಕಂಪನಿಯ ಮಾಲೀಕ ಪುಟ್ಟಪರ್ತಿಗೆ ಬಂದಿದ್ದ. ಹಾಗೆ ಬರುವ ಮುನ್ನ ಆತ ಒಂದು ಹೊಸ ವಾಚ್‌ಅನ್ನು ಸಿದ್ಧಪಡಿಸಿ ಅದನ್ನು ತನ್ನ ಕಂಪನಿಯ ಸೇಫ್ ಡಿಪಾಸಿಟ್ ಲಾಕರ್‌ನಲ್ಲಿ ಇಟ್ಟುಬಂದಿದ್ದ. ಆದರೆ ಆ ಜಪಾನಿ ಭಕ್ತನನ್ನು ಕಂಡು ಸಾಯಿಬಾಬಾನಿಗೆ ಎಷ್ಟು ಖುಷಿ ಆಯಿತೆಂದರೆ ಆತ ತನ್ನಕೈಗಳನ್ನು ಗಾಳಿಯಲ್ಲಿ ಅಲ್ಲಾಡಿಸಿ ಆತನಿಗೆ ಒಂದು ವಾಚ್ ಅನ್ನು ಉಡುಗೊರೆಯಾಗಿ ನೀಡಿದ್ದ. ಸೀಕೋ ಕಂಪನಿ ಮಾಲೀಕ ನೋಡಿದರೆ ಆ ವಾಚ್ ಬೇರೆ ಯಾವುದೋ ವಾಚ್ ಆಗಿರಲಿಲ್ಲ, ಬದಲಾಗಿ ತಾನೇ ತಯಾರಿಸಿ ಸುರಕ್ಷಿತವಾಗಿ ಜಪಾನಿನಲ್ಲಿ ಇಟ್ಟುಬಂದಿದ್ದ ವಾಚ್ ಅದಾಗಿತ್ತು, ಈ ಕತೆಯನ್ನು ಅದೆಷ್ಟು ವ್ಯವಸ್ಥಿತವಾಗಿ ಹರಡಲಾಗಿತ್ತೆಂದರೆ ಸ್ವತಃ ಡಾ. ಭಗವಂತಮ್ ಅದರ ಬಗ್ಗೆ ಒಂದು ವಿಚಾರಗೋಷ್ಠಿ ಯಲ್ಲಿ ಪ್ರಸ್ತಾಪಿಸಿ ಸಾಯಿಬಾಬಾನ ದೈವಶಕ್ತಿಯನ್ನು ಕೊಂಡಾಡಿದ್ದರು. ಪರಿಣಾಮವಾಗಿ ಸಾಮಾನ್ಯ ಜನ ಆ ಕತೆಯನ್ನು ನಂಬಿದ್ದರು.


ನರೇಂದ್ರ ನಾಯಕ್


ಆಗ ಕೊವೂರ್ ಅವರು ಸೀಕೋ ಕಂಪನಿಯ ಮಾಲೀಕ ಶೋಜಿ ಹಟೋರಿ ಎಂಬುವವರಿಗೆ ಪತ್ರ ಬರೆದು "ನಿಮ್ಮ ಬಗ್ಗೆ ಇಲ್ಲಿರುವ ಸಾಯಿಬಾಬಾ ಎಂಬಾತ ಒಂದು ಕತೆಯನ್ನು ಕಟ್ಟಿ ತೇಲಿಬಿಟ್ಟಿದ್ದಾನೆ. ನೀವು ಪುಟ್ಟಪರ್ತಿಗೆ ಬಂದಿದ್ದು, ಆತ ನಿಮಗೆ ವಾಚ್ ಕೊಟ್ಟಿದ್ದು, ಅದು ನೀವು ಜಪಾನಿನಲ್ಲಿ ಸುರಕ್ಷಿತವಾಗಿಟ್ಟಿದ್ದ ವಾಚ್ ಆಗಿದ್ದು ... ಇವೆಲ್ಲ ನಿಜವೇ?" ಎಂದು ಕೇಳಿದ್ದರು. ಕೊವೂರ್ ಅವರ ಪತ್ರ ಓದಿ ಶೋಜಿ ಹಟೋರಿಗೆ ಅಚ್ಚರಿ ಆಗಿರಬೇಕು. ಅವರು ಕೊವೂರ್‌ಗೆ ಕಳುಹಿಸಿದ ಪತ್ರದಲ್ಲಿ "ನನಗೆ ಈ ಪುಟ್ಟಪರ್ತಿ ಎಲ್ಲಿದೆ ಎಂದೇ ಗೊತ್ತಿಲ್ಲ. ಈ ಮಿಸ್ಟರ್. ಸಾಯಿಬಾಬಾ ಎಂಬಾತ ಯಾರು ಎಂದೂ ನನಗೆ ಗೊತ್ತಿಲ್ಲ. ಅಂತಹ ಯಾವ ಪ್ರಕರಣವೂ ನಡೆದಿಲ್ಲ" ಎಂದಿದ್ದರು. ಈ ಪತ್ರದ ಪ್ರತಿಯನ್ನು ಭಗವಂತಮ್ ಅವರಿಗೆ ಕಳುಹಿಸಿದ ಕೊವೂರ್ ಅವರಿಂದ ಉತ್ತರವನ್ನು ಬಯಸಿದ್ದರು. ಆದರೆ ಭಗವಂತಮ್ ಎಂದೂ ಕೊವೂರ್ ಅವರ ಪತ್ರಕ್ಕೆ ಪ್ರತಿಕ್ರಿಯಿಸಲೇ ಇಲ್ಲ.

ಸಾಯಿಬಾಬಾನ ಢೋಂಗಿತನವನ್ನು ಬಯಲಿಗೆಳೆದ ಇತರರಲ್ಲಿ ಖ್ಯಾತ ಮಂತ್ರವಾದಿ ಪಿ.ಸಿ. ಸರ್ಕಾರ್ ಪ್ರಮುಖರು. ಬಾಬಾ ಕೇವಲ ಕೆಲವು ಮ್ಯಾಜಿಕ್ ಟ್ರಿಕ್‌ಗಳನ್ನು ಮಾಡುವಾತ, ಆತನಿಗೆ ಯಾವ ದೈವಶಕ್ತಿಯೂ ಇಲ್ಲ ಎಂದೇ ನಂಬಿದ್ದ ಸರ್ಕಾರ್ ಅವರು ತಾವು ಬಾಬಾನನ್ನು ಭೇಟಿ ಆಗಬೇಕೆಂದು ಹಲವಾರು ಬಾರಿ ಕೋರಿದ್ದರು. ಆದರೆ ಅವರನ್ನು ಬಾಬಾನ ಬಳಗ ಎಂದೂ ಆಹ್ವಾನಿಸಿರಲಿಲ್ಲ. ಆಗ ಸರ್ಕಾರ್ ಅವರು ತಾವು ಕೊಲ್ಕತ್ತಾದ ಖ್ಯಾತ ಉದ್ಯಮಿಯ ಮಗ ಎಂದು ಸುಳ್ಳು ಹೇಳಿ ಬಾಬಾನನ್ನು ಭೇಟಿ ಆಗುವ ಅವಕಾಶವನ್ನು ಗಿಟ್ಟಿಸಿಕೊಂಡಿದ್ದರು. ಅವರಿಗೆ ಬಾಬಾ 'ದರ್ಶನ' ನೀಡಿದಾಗ ಸರ್ಕಾರ್ "ದಯಮಾಡಿ ಪ್ರಸಾದ ಕೊಡಬೇಕು" ಎಂದು ಕೋರಿದರು. ಆಗ ತನ್ನ ಕೊಠಡಿಗೆ ಹೋಗಿ ಹೊರಬಂದ ಸಾಯಿಬಾಬಾ ಗಾಳಿಯಲ್ಲಿ ಕೈಯಾಡಿಸಿ ಈ 'ಬಂಗಾಲಿ' ಭಕ್ತನಿಗೆ ಬಂಗಾಲಿಗಳ ಅಚ್ಚು ಮೆಚ್ಚಿನ ಸಿಹಿ ತಿಂಡಿಯಾದ 'ಸಂದೇಶ್' ಅನ್ನು ನೀಡಿದ. ಇದನ್ನು ನೋಡಿ ಮುಗುಳ್ನಗೆ ಬೀರಿದ ಸರ್ಕಾರ್ ಅವರು "ನನಗೆ ಸಂದೇಶ್‌ಗಿಂತ ರಸಗುಲ್ಲ ಇಷ್ಟ" ಎಂದು ಹೇಳಿ ಸಾಯಿಬಾಬಾನಂತೆಯೇ ತಮ್ಮ ಕೈಗಳನ್ನು ಗಾಳಿಯಲ್ಲಿ ಅಲ್ಲಾಡಿಸಿ ಬಾಬಾನ ಕೈಗೆ ಒಂದು ರಸಗುಲ್ಲವನ್ನು ಇಟ್ಟಿದ್ದರು. ಇದರಿಂದ ಸಾಯಿಬಾಬಾನಿಗೆ ಅದೆಷ್ಟು ಮುಖಭಂಗವಾಗಿತ್ತೆಂದರೆ ಕೂಡಲೇ ಸರ್ಕಾರ್ ಅವರನ್ನು ಶಪಿಸುತ್ತಾ ತನ್ನ ಕೊಠಡಿಯಲ್ಲಿ ಅಡಗಿ ಕೂತಿದ್ದ! ಅವನ ಅನುಯಾಯಿಗಳು ಸರ್ಕಾರ್ ಅವರನ್ನು ಪುಟ್ಟಪರ್ತಿಯಿಂದ ಹೊರದಿಸಿದ್ದರು.

ಸರ್ಕಾರ್ ಅವರು ಅವತ್ತಿನಿಂದ ಸಾಯಿಬಾಬಾನ ಬಗ್ಗೆ ಹೇಳುತ್ತಿದ್ದದ್ದು ಒಂದೇ ಮಾತನ್ನು. ಅದೇನೆಂದರೆ: "ಆತನಿಗೆ ಯಾವ ತರಹದ ದೈವಶಕ್ತಿ ಇಲ್ಲವೇ ಇಲ್ಲ, ಮಾತ್ರವಲ್ಲ ಆತ ಓರ್ವ ಅನುಭವಿ ಮಂತ್ರವಾದಿಯೂ ಅಲ್ಲ, ಬದಲಾಗಿ

▶▶ 9

ಚಾರು ಪ್ರಕಾಶನ
ಪುಸ್ತಕ ಬಿಡುಗಡೆ ಕಾರ್ಯಕ್ರಮ
ಜಂಗಲ್‌ನಾಮ
..............ಮಾವೋವಾದಿ ಗೆರಿಲ್ಲಾ ವಲಯದೊಳಗೆ
ಮೂಲ : ಸತ್ನಾಮ್ ಕನ್ನಡಕ್ಕೆ : ಕುಮಾರ್ ಬುರಡಿಕಟ್ಟಿ



ಪುಸ್ತಕ ಬಿಡುಗಡೆ : ಡಾ|| ಜಿ.ರಾಮಕೃಷ್ಣರಿಂದ
ಅನುವಾದಕರ ಮಾತು : ಕುಮಾರ್ ಬುರಡಿಕಟ್ಟಿ
ವಿಶೇಷ ಉಪನ್ಯಾಸ : ಡಾ|| ಹರಗೋಪಾಲ್, ಹೈದರಾಬಾದ್
ಜನಪರ ಹೋರಾಟಗಳು ಮತ್ತು ಪ್ರಜಾಪ್ರಭುತ್ವ
ಅಧ್ಯಕ್ಷತೆ : ಪಾರ್ವತೀಶ
ಸ್ಥಳ : ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು
ದಿನಾಂಕ : 9-4-2011 ಶನಿವಾರ
ಸಮಯ : ಸಂಜೆ 5.30ರಿಂದ 7.30ರವರೆಗೆ
ಎಲ್ಲರಿಗೂ ಸ್ವಾಗತ

ಲಂಕೇಶ್ ಬಳಗದ
ಸಂವಾದ ಕಾರ್ಯಕ್ರಮ
ಮಾರುಕಟ್ಟೆ ಬಂಡವಾಳ ಹಾಗೂ
ಅಂಬೇಡ್ಕರ್‌ವಾದಿ ಸಮಾಜವಾದ ಕುರಿತಂತೆ
ಉಪನ್ಯಾಸ ಹಾಗೂ ಸಂವಾದ
ದಿನಾಂಕ : 15-4-2011 ಸಂಜೆ 5-30 ಗಂಟೆಗೆ
ಭಾಷಣಕಾರರು
ಡಾ|| ಆನಂದ್ ತೇಲ್‌ತುಂಬ್ಡೆ
ಪ್ರಖ್ಯಾತ ದಲಿತ ಚಿಂತಕರು
ಸ್ಥಳ : ಕೆವಿಬಿ ಯೂನಿಯನ್ ಹಾಲ್, ಬಿಎಂಎಸ್ ಮಹಿಳಾ ಕಾಲೇಜಿನ ಪಕ್ಕ, ಬಸವನಗುಡಿ, ಬೆಂಗಳೂರು-4

ವೀರಶೈವ ಮಹಾಧಿವೇಶನ
ಲಿಂಗಾಯತರು ಮಾಡಬೇಕಾದ್ದೇನು?

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಿಗೆ ಒಂದು ತೆರೆದ ಪತ್ರ

ಮಾನ್ಯರೆ,

ನಮಗೆಲ್ಲ ತಿಳಿದಿರುವಂತೆ ಅ.ಭಾ.ವೀ.ಮ.ಸಭೆಯು ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯೆಂದು ತಾವು ಮತ್ತು ಜನರು ತಿಳಿದುಕೊಂಡಿದ್ದಾರೆ. ಆದರೆ ನಮ್ಮ ಅನುಭವವೆಂದರೆ ಅದು ಆ ರೀತಿಯಲ್ಲಿ ಇಲ್ಲ ಮತ್ತು ಹಾಗೆ ಅದು ನಡೆದುಕೊಳ್ಳುತ್ತಿಲ್ಲ. ಅದಕ್ಕೆ 2004ರಲ್ಲೇ ನೂರು ವರ್ಷಗಳಾಗಿವೆ. ಅದರ ಶತಮಾನೋತ್ಸವವನ್ನು 2009ರಲ್ಲಿ ಆಚರಿಸಲಾಯಿತು. ಅದನ್ನು ಹೇಗೆ ಆಚರಿಸಲಾಯಿತು ಎಂಬುದು ನಮಗೆ ಗೊತ್ತಿದೆ. ಈ ಮಹಾ ಸಂಸ್ಥೆಗೆ ಘನತೆಯನ್ನು ತರುವ ರೀತಿಯಲ್ಲಿ ಅದು ನಡೆಯಲಿಲ್ಲ, ಅದರ ಶತಮಾನೋತ್ಸವವನ್ನು ಶಿವಯೋಗ ಮಂದಿರದ ಶತಮಾನೋತ್ಸವದ ಜೊತೆಯಲ್ಲಿ ಆಯೋಜಿಸಿದ್ದೇ ತಪ್ಪು, ಅಲ್ಲಿ ನಡೆದ ಎಲ್ಲ ಅವಾಂತರಗಳಿಗೆ ಮಹಾಸಭೆಯು ಜವಾಬುದಾರಿಯಾಗಿದೆ. ಆದರೆ ಆ ಜವಾಬುದಾರಿಯನ್ನು ಅದು ಲಿಂಗಾಯತರಿಗೆ ಘನತೆಯನ್ನು ತರುವ ರೀತಿಯಲ್ಲಿ ನಿರ್ವಹಿಸಲಿಲ್ಲ. ಇರಲಿ, ಆದರ ಚರ್ಚೆಯನ್ನು ಇಲ್ಲಿ ಬೆಳೆಸುವುದು ಸರಿಯಲ್ಲ, ವಿಷಯಕ್ಕೆ ಬರುತ್ತೇನೆ.


ಈ ಸಂಸ್ಥೆಯು ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯೆನಿಸಿಕೊಳ್ಳಬೇಕಾದರೆ ಈಗ ನಡೆಯಲಿರುವ ಅದರ ಮುಂದಿನ ಅಧಿವೇಶನದಲ್ಲಿ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಇದು ನಮ್ಮ ಒತ್ತಾಯ ಮತ್ತು ಇದನ್ನು ಇಡೀ ಲಿಂಗಾಯತ ಸಮುದಾಯದ ಒತ್ತಾಯವೆಂದು ತಿಳಿಯಬಹುದು.

1. ಈ ಸಂಸ್ಥೆಯು ಲಿಂಗಾಯತರ ಹತ್ತು-ಹದಿನೆಂಟು ಕುಲಗಳ ಪ್ರಾತಿನಿಧಿಕ ಸಂಸ್ಥೆಯೆನ್ನಿಸಿಕೊಳ್ಳಬೇಕಾದರೆ ಅದು ಮೊಟ್ಟ ಮೊದಲನೆಯದಾಗಿ ಲಿಂಗಾಯತದೊಳಗಿರುವ ಸಣ್ಣ ಸಣ್ಣ ಸಮುದಾಯಗಳೇನಿವೆ, ಉದಾ. ಸಿಂಪಿಗರು, ಹಡಪದರು, ಜಾಡರು, ಮಗ್ಗದವರು, ಬಣಕಾರರು, ಕುರುವಿನಶೆಟ್ಟರು, ಮಾಲಿಗಳು, ಒಡೇಯರು ಇತ್ಯಾದಿ ಸಮುದಾಯಗಳಿಗೆ ಆದ್ಯತೆಯ ಮೇಲೆ ಮಹಾಸಭೆಯ ಕಾರ್ಯಕಾರಿ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಬೇಕು. ಈ ಬಗ್ಗೆ ಸಭೆಯು ತನ್ನ ಮೈಸೂರು ಸಮಾವೇಶದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು.

ಇದು ಯಾಕೆ ಬೇಕು?

ನಮ್ಮ ಮಹಾಸಭೆಯು ನಿಡುಗಾಲದಿಂದಲೂ ಲಿಂಗಾಯತರನ್ನು ಹಿಂದುಳಿದ ಜಾತಿಗಳೆಂದು ಘೋಷಿಸಬೇಕೆಂದು ಒತ್ತಾಯಿಸುತ್ತಿದೆ ಮತ್ತು ಅದಕ್ಕಾಗಿ ಹೋರಾಟವನ್ನು ಮಾಡುತ್ತಿದೆ. ಆದರೆ ಇದೇ ನೀತಿಯನ್ನು ಮಹಾಸಭೆಯು ತನಗೆ ಸಂಬಂಧಿಸಿದಂತೆ ಅನುಸರಿಸುತ್ತಿಲ್ಲ, ಈ ಮಹಾಸಭೆಯು ಲಿಂಗಾಯತರಲ್ಲಿ ಉಳ್ಳವರ ಸಂಸ್ಥೆಯಾಗಿದೆ. ಕೆಲವೇ ಕೆಲವು ಒಳಜಾತಿಗಳ ವಶದಲ್ಲಿ ಅದು ಇದೆ. ಇದು ತಪ್ಪಬೇಕು. ವಚನ ಸಂಸ್ಕೃತಿಯು 'ಸಮಾನತೆ' ಮೌಲ್ಯಕ್ಕೆ ಇನ್ನಿಲ್ಲದ ಮಹತ್ವವನ್ನು ನೀಡಿದೆ. ಅದನ್ನು ಮಹಾಸಭೆಯೂ ಅನುಸರಿಸಬೇಕು. ಲಿಂಗಾಯತರೊಳಗೆ ಯಾವ ಸಮುದಾಯಗಳು ದುರ್ಬಲವಾಗಿದ್ದಾವೆ, ಸಂಖ್ಯೆಯಲ್ಲಿ ಚಿಕ್ಕವಾಗಿದ್ದಾವೆ. ಅವುಗಳಿಗೆ ಮಹಾಸಭೆಯ ಕಾರ್ಯಕಾರಿ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಬೇಕು. ಮಹಾಸಭೆಯು 'ಉಳ್ಳವರ' ಮತ್ತು 'ಒಡೆಯರ' ಆಸ್ತಿಯಾಗಬಾರದು, ತಾನೆ!

2. ಮಹಾಸಭೆಯು ಕೇವಲ ಸಮಾವೇಶ ಮಾಡುವ ಸಂಸ್ಥೆಯಾಗಬಾರದು. ಅದು ಲಿಂಗಾಯತರಲ್ಲಿರುವ ಬಡವರ ಅಭಿವೃದ್ಧಿಗೆ ಶ್ರಮಿಸುವ ಅಭಿವೃದ್ಧಿ ಸಂಸ್ಥೆಯಾಗಬೇಕು. ಹೀಗೆ ಹೇಳಿದರೆ ಮಾತ್ರ ಸಾಕಾಗುವುದಿಲ್ಲ, ಅದು ಒಂದು ಎನ್‌ಜಿಒ ರೀತಿಯಲ್ಲಿ ಕೆಲಸ ಮಾಡಬೇಕು. ಅಲ್ಲಿ ಬಡ ಲಿಂಗಾಯತರಿಗೆ ಕಡಿಮೆ ಬಡ್ಡಿಗೆ ಸಾಲ ಸಿಗುವಂತಿರಬೇಕು. ಅದು ರಾಜ್ಯಾದ್ಯಂತ ಘಟಕಗಳನ್ನು ಸ್ಥಾಪಿಸಿ ಪ್ರದೇಶಕ್ಕನುಗುಣವಾಗಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಾದ ತರಬೇತಿಯನ್ನು



ಯುವಕ-ಯುವತಿಯರಿಗೆ ನೀಡುವಂತಿರಬೇಕು. ಬಸವಣ್ಣನ ಭಾಷೆಯಲ್ಲಿ ಹೇಳುವುದಾದರೆ ಅದು 'ಸ್ಥಾವರ'ವಾಗಿರಬಾರದು, ಅದು 'ಜಂಗಮ' ಸಂಸ್ಥೆಯಾಗಿರಬೇಕು. ಈ ಬಗೆಯ ಕಾರ್ಯ ರಾಜ್ಯದಲ್ಲಿ ಕೇವಲ ನಾಲ್ಕಾರು ಲಕ್ಷ ಜನರಿರುವ ಜೈನರ ವೀರೇಂದ್ರ ಹೆಗ್ಗಡೆಗೆ ಸಾಧ್ಯವಾಗುವುದಾದರೆ ನಮಗೇಕೆ ಸಾಧ್ಯವಿಲ್ಲ? ನಮ್ಮ ಜನರು ಮೊದಲೆ ರೈತಾಪಿಗಳು, ಗ್ರಾಮವಾಸಿಗಳು, ಬಹುಪಾಲು ಅನಕ್ಷರಸ್ಥರು. ನಮ್ಮದು ರಾಜ್ಯದಲ್ಲಿ ಕನಿಷ್ಠ ಒಂದು ಕೋಟಿ ಜನಸಂಖ್ಯೆ. ನಮ್ಮ ಮಹಾಸಭೆಗೆ 'ಅಭಿವೃದ್ಧಿ' ಚಿಂತನೆಯೇ ಇಲ್ಲ, ಅದರ ಚುಕ್ಕಾಣಿ ಹಿಡಿದಿರುವವರಿಗೆ ಮಹತ್ವಾಕಾಂಕ್ಷೆಯೇ ಇಲ್ಲ, ಮಹಾಸಭೆಯ ಮುಂದಾಳುಗಳು ತಮ್ಮ ಏಳಿಗೆ ಬಗ್ಗೆ ಯೋಚಿಸುತ್ತಿದ್ದಾರೆ ವಿನಃ ಲಿಂಗಾಯತರಲ್ಲಿರುವ ಬಡವರ ಬಗ್ಗೆ ಯೋಚಿಸುತ್ತಿಲ್ಲ, ಲಿಂಗಾಯತ ಶಿಕ್ಷಣ ಸಂಸ್ಥೆಗಳೆಲ್ಲ ಇಂದು ಕೆಲವು ಮನೆತನಗಳ 'ಸಾಮ್ರಾಜ್ಯ'ಗಳಾಗಿ ಬಿಟ್ಟಿವೆ. ಮಹಾಸಭೆಯ ಸ್ವರೂಪ, ಉದ್ದೇಶ, ಕಾರ್ಯವ್ಯಾಪ್ತಿಯು ಬದಲಾಗಬೇಕು. ಬಡವರ ಹಿತಕ್ಕಾಗಿ ಅದು ದುಡಿಯುವಂತಾಗಬೇಕು.

ನೋಡಿ, ಲಿಂಗಾಯತರು ಹೇಳಿ-ಕೇಳಿ ಬೇಸಾಯಗಾರರು. ಅದರ ಒಳಗು-ಹೊರಗು, ಅದಕ್ಕೆ ಏನು ಬೇಕು-ಬೇಡ ಎಂಬುದು ಅವರಿಗೆ ಗೊತ್ತು, ಆದರೆ ಪ್ರಸ್ತುತ ಸರ್ಕಾರದಲ್ಲಿ 'ಸಾವಯವ ಕೃಷಿ'ಯ ಹೆಸರಿನಲ್ಲಿ ವೈದಿಕರು ಅದನ್ನು ಮನಾಹಲಿ ಮಾಡಿಕೊಳ್ಳುತ್ತಿದ್ದಾರೆ. ನೂರಾರು ಕೋಟಿ ರೂಪಾಯಿಯ ಯೋಜನೆಯನ್ನು ಕೆಲವು ವೈದಿಕೋತ್ತಮರ ಹಿತವನ್ನು ಕಾಪಾಡಲು ಸಾವಯವ ಕೃಷಿ ಕಾರ್ಯಕ್ರಮವನ್ನು ಅವರ ವಶಕ್ಕೆ ನೀಡಲಾಗಿದೆ. ಇದು ನಮ್ಮ ಮಹಾಸಭೆಗೆ ಅರ್ಥವಾಗುತ್ತಿಲ್ಲ, ಏಕೆಂದರೆ ಮಹಾಸಭೆಯು ಬೇಸಾಯಗಾರರ ವಶದಲ್ಲಿ ಇಲ್ಲ.




3. ನಮ್ಮದು ಮೂಲಭೂತವಾಗಿ ವೈದಿಕ ವಿರೋಧಿ ಪ್ರಣಾಳಿಕೆ. ಲಿಂಗಾಯತ ಸಿದ್ಧಾಂತವೇನಿದೆ ಅದು 'ವೇದಾಗಮಶಾಸ್ತ್ರಪುರಾಣ' ಪ್ರತಿಪಾದಿಸುವ ಪ್ರಣಾಳಿಕೆಗೆ ಪ್ರತಿಯಾಗಿ ರೂಪುಗೊಂಡ ವ್ಯವಸ್ಥೆ. ಆದರೆ ಅಂತಹ ವೇದಗಳನ್ನು ಮನ್ನಿಸುವ, ಯಜ್ಞ, ಯಾಗ, ಹೋಮ-ಹವನಗಳನ್ನು ಆಚರಿಸುವ ಮತ್ತು ಸಮರ್ಥಿಸುವ, ವಿಭೂತಿಧಾರಣೆಗೆ ಪ್ರತಿಯಾಗಿ ಕುಂಕುಮಧಾರಿಯಾದ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರನ್ನು ಲಿಂಗಾಯತನೆಂದು ಆದಕ್ಕಾಗಿ ಅವರನ್ನು ಬೆಂಬಲಿಸಬೇಕೆಂದು ಮಹಾಸಭೆಯು ಕಟಿಬದ್ಧವಾಗಿ ನಿಂತಿರುವಂತೆ ಕಾಣುತ್ತಿದೆ. ಅದು ಬಹಿರಂಗವಾಗಿ ಹಾಗೆ ನಡೆದುಕೊಳ್ಳದಿದ್ದರೂ ಒಳಗೊಳಗೆ ಅದು ಹಾಗೆ ನಡೆದುಕೊಳ್ಳುತ್ತಿರುವುದು ಇಂದು ರಹಸ್ಯವಾಗೇನು ಉಳಿದಿಲ್ಲ, ಅವರು ಹುಟ್ಟನಿಂದ ಲಿಂಗಾಯತರಾಗಿರಬಹುದು. ಆದರೆ ಅವರು ಕಾಯಕದಿಂದ-ಪ್ರವೃತ್ತಿಯಿಂದ ಲಿಂಗಾಯತರಲ್ಲ, ಅಧಿಕಾರಕ್ಕಾಗಿ ಲಿಂಗಾಯತರೆಂದು ಹೇಳಿಕೊಳ್ಳುತ್ತಾರೆ. ಆದರೆ ಪಕ್ಷದೊಳಗೆ ಮತ್ತು ಪರಿವಾರದಲ್ಲಿ ವೈದಿಕರಿಗೆ ಇಲ್ಲದ್ದು-ಸಲ್ಲದ್ದನ್ನೆಲ್ಲ ನೀಡಿ ಅಲ್ಲಿ ಭೇಷ್ ಎನಿಸಿಕೊಳ್ಳುತ್ತಿದ್ದಾರೆ. ಇದು ಬೂಟಾಟಿಕೆ. ಅವರು ಪರಿವಾರದ ಮುಂದೆ ಯಾವ ಸಂಕೋಚವಿಲ್ಲದೆ ತಮ್ಮ ಬ್ರಾಹ್ಮಣತ್ವವನ್ನು ಅವರು ಪ್ರದರ್ಶಿಸುತ್ತಿದ್ದಾರೆ. ಲಿಂಗಾಯತರೆಂದು ಹೇಳಿ ಕೊಂಡು, ಲಿಂಗಾಯತರ ಹೆಸರನ್ನು ಬಳಸಿಕೊಂಡು ಅವರು ತಮ್ಮ ಪಕ್ಷವನ್ನೇ ಬ್ಲಾಕ್‌ಮೆಲ್ ಮಾಡುತ್ತಿದ್ದಾರೆ. ಇದರಿಂದ ಕೆಟ್ಟ ಹೆಸರು ಲಿಂಗಾಯತರಿಗೆ. ಆದರೆ ಅನುಕೂಲ ಮಾತ್ರ ಶ್ರೀ ಯಡಿಯೂರಪ್ಪ ಅವರಿಗೆ! ಇದು ನ್ಯಾಯವಲ್ಲ, ದಿ.ಎಸ್‌ಎನ್, ದಿ.ವೀ.ಪಾಟೀಲ್, ದಿ.ಬೊಮ್ಮಾಯಿ, ದಿ.ಪಟೇಲ್ ಮುಂತಾದವರು ನಮ್ಮ ರಾಜ್ಯದ ಲಿಂಗಾಯತರಿಗೆ ಶೋಭೆ ತರುವ ರೀತಿಯಲ್ಲಿ ಆಡಳಿತ ನಡೆಸಿದವರು. ಅವರು ನಮಗೆ ತಂದಿತ್ತ ಪ್ರಸಿದ್ಧಿಯನ್ನು ಇನ್ನು ನೂರು ವರ್ಷಗಳಾದರೂ ಅಳಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಲಿಂಗಾಯತ ಸಮುದಾಯಕ್ಕೆ ಯಡಿಯೂರಪ್ಪ ಹಾನಿ ಮಾಡಿದ್ದಾರೆ. ಮಹಾಸಭೆಯು ಒಂದು ಸಂಸ್ಥೆಯಾಗಿ ಅವರ ಪರವಾಗಿ ನಿಲ್ಲುವುದು ಸಲ್ಲ, ಅವರಿಗೆ ತಮ್ಮ ಬೆಂಬಲವನ್ನು ತೋರಿಸುವ ಸಲುವಾಗಿ ಅವರ ಮಗನೊಬ್ಬನನ್ನು ಮಹಾಸಭೆಯ ಉಪಾಧ್ಯಕ್ಷನನ್ನಾಗಿ ಮಾಡಿಕೊಂಡಿದೆ. ಅಪ್ಪ ಮತ್ತು ಮಕ್ಕಳು ಲಿಂಗಾಯತರಿಗೆ ಒಂದು ಕಳಂಕ. ಅದನ್ನು ಮಹಾಸಭೆಯು ಅರ್ಥಮಾಡಿಕೊಂಡಿಲ್ಲ, ಇದು ನಮ್ಮ ದುರಂತ.

4. ಈ ಸಮಾವೇಶದಲ್ಲಿ ಮಹಾಸಭೆಯು ತನ್ನ ಹೆಸರನ್ನು ಬದಲಾಯಿಸುವ ನಿರ್ಣಯವನ್ನು ಅಂಗೀಕರಿಸಬೇಕು. ಇನ್ನು ಮುಂದೆ ಅದು 'ಅಖಿಲ ಭಾರತ ಲಿಂಗಾಯತ ಮಹಾಸಭೆ'ಯೆಂದಾಗಬೇಕು. ವೀರಶೈವ ಎನ್ನುವ ನುಡಿಯನ್ನು ಕೈ ಬಿಡಬೇಕು. ನಾಡಿನ ಲಿಂಗಾಯತರು ಇದಕ್ಕೆ ಸಿದ್ಧರಾಗಿದ್ದಾರೆ. ಮಹಾಸಭೆಯು ನಾಡಿನ ಲಿಂಗಾಯತರ ಮನದ ಇಂಗಿತವನ್ನು ಅರ್ಥಮಾಡಿಕೊಳ್ಳಬೇಕು. ವೀರಶೈವ ಬೇರೆ. ಲಿಂಗಾಯತ ಬೇರೆ. ಈ ನಿರ್ಣಯಕ್ಕೆ ಲಿಂಗಾಯತರು ಬಂದಿದ್ದಾರೆ. ಮಹಾಸಭೆಯು ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಅದು ಲಿಂಗಾಯತರಿಂದ ದೂರ ಹೋದಂತಾಗುತ್ತದೆ. ಈ ಬಗ್ಗೆ ಅದು ನಿರ್ಣಯವನ್ನು ತೆಗೆದುಕೊಳ್ಳಬೇಕು.


ಮುರುಘಾ ಶ್ರೀ



5. ಮಹಾಸಭೆಯು ಈ ಅಧಿವೇಶನದಲ್ಲಿ ಲಿಂಗಾಯತರು ಯಜ್ಞ-ಯಾಗ ಮಾಡುವುದನ್ನು ನಿಷೇಧಿಸುವ ನಿರ್ಣಯ ಮಾಡಬೇಕು. ವಚನಕಾರರ ವಿಚಾರಗಳನ್ನು ಅನುಸರಿಸುವಂತೆ ಮಹಾಸಭೆಯು ಜನರಲ್ಲಿ ಜಾಗೃತಿ ಮೂಡಿಸಬೇಕು. ನಮ್ಮ ಮಠಗಳು ಇಂದಿಗೂ ಸಂಸ್ಕೃತ ಪಾಠಶಾಲೆಗಳನ್ನು, ಸಂಸ್ಕೃತ ಕಾಲೇಜುಗಳನ್ನು ನಡೆಸುತ್ತಿವೆ. ಇದು ಲಿಂಗಾಯತ ವಿರೋಧಿ ಕ್ರಮ. ಇನ್ನು ಮೇಲೆ ಲಿಂಗಾಯತ ಮಠಗಳು ತಾವು ನಡೆಸುತ್ತಿರುವ ಸಂಸ್ಕೃತ ಪಾಠಶಾಲೆ/ಕಾಲೇಜುಗಳನ್ನು ಮುಚ್ಚುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಂದು ಕಾಲಕ್ಕೆ ಅವು ಅಗತ್ಯವಾಗಿದ್ದಿರಬಹುದು. ಈಗ ಅವುಗಳ ಅವಶ್ಯಕತೆಯಿಲ್ಲ, ನಮ್ಮ ಜನರ ಮದುವೆ-ನಾಮಕರಣ, ಮಣ್ಣು ಮಾಡುವುದು ಮುಂತಾದವುಗಳೆಲ್ಲ ವಚನಗಳ ಆಧಾರದಲ್ಲಿ ಕನ್ನಡದಲ್ಲಿ ನಡೆಸುವಂತೆ ಮಹಾಸಭೆಯು ಜನರಿಗೆ ಕರೆ ಕೊಡಬೇಕು. ಹೇಳುವುದು ಮಾತ್ರ ಕನ್ನಡವು ಲಿಂಗಾಯತರ ತಾಯಿ ನುಡಿ. ಆದರೆ ಆಚರಿಸುವುದು ಮಾತ್ರ ವೈದಿಕರ ಸಂಸ್ಕೃತ. ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯಾದ ಮಹಾಸಭೆಯು ಇಂತಹ ಕೆಲವು ನಿಷ್ಠುರವಾದ ನಿಲವನ್ನು ತೆಗೆದುಕೊಳ್ಳಬೇಕು. ಉದಾಹರಣೆಗೆ ನಮ್ಮ ಕೆಲವು ಸ್ವಾಮಿಗಳು ವಚನ ಸಂವಿಧಾನವನ್ನು ಅರ್ಥಮಾಡಿಕೊಳ್ಳದೆ ಮುತ್ತೈದೆಯರಿಗೆ 'ಮುಡಿ' ತುಂಬುವ ಆಚರಣೆ ಮಾಡುತ್ತಿದ್ದಾರೆ. ಮುತ್ತೈದೆಯರಿಗೆ 'ಮುಡಿ' ತುಂಬಿದರೆ ವಿಧವೆಯರಿಗೆ ಏನು ಮಾಡುತ್ತೀರಿ? ಇದು ಸೂತಕಾಚರಣೆಯಲ್ಲವೆ? ಇದಕ್ಕೆ ಲಿಂಗಾಯತ ಪ್ರಣಾಳಿಕೆಯಲ್ಲಿ ಅವಕಾಶವೆಲ್ಲಿದೆ? ಅಂತಹ ಸ್ವಾಮಿಗಳಿಗೆ ಮಹಾಸಭೆಯು ಬುದ್ಧಿ ಹೇಳಬೇಕು. ಮುಡಿ ತುಂಬುವುದು ಲಿಂಗಾಯತರಿಗೆ ಸಲ್ಲ, ಅದು ನಮ್ಮ ವಿಧವೆ ತಾಯಂದಿರಿಗೆ ಅವಮಾನ. ಅದೇ ರೀತಿಯಲ್ಲಿ ನದಿಗಳು ತುಂಬಿದಾಗ ಅವುಗಳಿಗೆ 'ಬಾಗಿನ' ಅರ್ಪಿಸುವುದು ಪರಿಸರ ಮಾಲಿನ್ಯ ಕ್ರಮ ಮಾತ್ರವಲ್ಲ, ಅದು ಲಿಂಗಾಯತ ವಿರೋಧಿ ಕ್ರಮವೂ ಹೌದು. ಹಾವಿಗೆ ಹಾಲೆರೆಯುವುದು, ಯಜ್ಞದಲ್ಲಿ ತುಪ್ಪವನ್ನು ಸುಡುವುದು, ನದಿಗೆ ಹೂವು-ಹಣ್ಣು ಎಸೆಯುವುದು ಮುಂತಾದವು ಪ್ರತಿಗಾಮಿ ಕ್ರಮಗಳು. ಅವು ಬಸವ ವಿರೋಧಿ ಕ್ರಮಗಳು. ಅಂತಹ ಲಿಂಗಾಯತ ಪ್ರಣಾಳಿಕೆ ವಿರೋಧಿ ಆಚರಣೆಗಳನ್ನು ಕೈಬಿಡುವಂತೆ ಮಹಾಸಭೆಯು ನಿರ್ಣಯ ಮಾಡಬೇಕು.


ಭೀಮಣ್ಣ ಖಂಡ್ರೆ

6. ಇಂದು ಲಿಂಗಾಯತ ಧರ್ಮದ ಅಪಮೌಲ್ಯ ನಡೆಯುತ್ತಿದೆ. ಲಿಂಗಾಯತ ಮುಖ್ಯಮಂತ್ರಿಯೆಂದು ಹೇಳಿಕೊಂಡು ನಮ್ಮ ಇಂದಿನ ಸರ್ಕಾರವು ವೈದಿಕರ ಸಲಹೆ-ಮಾರ್ಗದರ್ಶನದಲ್ಲಿ ಆಡಳಿತ ನಡೆಸುತ್ತಿದೆ. ನಾಡಿನ ಮುಖ್ಯ ದೇವಾಲಯಗಳನ್ನು ವೈದಿಕರಿಗೆ ಹಸ್ತಾಂತರಿಸುತ್ತಿದೆ. ಇದು ಒಂದು ಬಗೆಯ ದೇವಾಲಯಗಳ ಖಾಸಗೀಕರಣ ಕಾರ್ಯಕ್ರಮ. ಇಲ್ಲಿ ಗಮನಿಸಬೇಕಾಗಿರುವ ಸಂಗತಿಯೆಂದರೆ ಖಾಸಗೀಕರಣವು ವೈದಿಕರ ದೇವಾಲಯಗಳಿಗೆ ಮಾತ್ರ ನಡೆಯುತ್ತಿದೆ. ಉಡುಪಿಯ ಶ್ರೀಕೃಷ್ಣ ದೇವಾಲಯವನ್ನು ಮುಜರಾಯಿ ಇಲಾಖೆಯ ವಶದಿಂದ ಪೇಜಾವರರಿಗೆ ಹಸ್ತಾಂತರಿಸಲಾಗಿದೆ. ಅದೇ ರೀತಿಯಲ್ಲಿ ಗೋಕರ್ಣದ ದೇವಳವನ್ನು ಸಾರ್ವಜನಿಕರ ವಶದಿಂದ ಶ್ರೀ ರಾಮಚಂದ್ರಾಪುರ ಸ್ವಾಮಿಗಳಿಗೆ ಬರೆದು ಕೊಡಲಾಗಿದೆ. ಈ ಸರ್ಕಾರವು ವೈದಿಕರ ಹಿತಾಸಕ್ತಿಯನ್ನು ಪೋಷಿಸುವ ಕೆಲಸವನ್ನು ಪ್ರಚ್ಛನ್ನವಾಗಿ ನಡೆಸುತ್ತಿದೆ. ದೇವಾಲಯಗಳನ್ನು ನಿರ್ಮಿಸುವ, ಭುವನೇಶ್ವರಿ ವಿಗ್ರಹವನ್ನು ಸ್ಥಾಪಿಸುವ, ಮಳೆ-ಬೆಳೆಯು ದೇವಸ್ಥಾನಗಳಲ್ಲಿ ಪೂಜೆ ಮಾಡಿಸುವುದರಿಂದ ಬರುತ್ತದೆಯೆಂದು ಮೌಢ್ಯವನ್ನು ಬಿತ್ತುತ್ತಿರುವ, ಮಾತೆತ್ತಿದರೆ ದೇವಾಲಯಗಳಿಗೆ ಭೇಟಿ ಕೊಡುವ, ಅವುಗಳಿಗೆ ಅನುದಾನ ಘೋಷಿಸುವ ಕ್ರಮಗಳು ವೈದಿಕವನ್ನು ಓಲೈಸುವ ಕ್ರಮಗಳಾಗಿವೆ. ವೇದ-ಸಂಸ್ಕೃತ ವಿಶ್ವವಿದ್ಯಾಲಯವನ್ನು ಸರ್ಕಾರವು ಪ್ರಾರಂಭಿಸಿತು. ಇದಕ್ಕೆ ನಾನು ಮೊದಲಬಾರಿಗೆ ವಿರೋಧ ದಾಖಲಿಸಿದೆ. ಆಗ ಎಚ್ಚೆತ್ತುಕೊಂಡ ಸರ್ಕಾರ ವೇದವನ್ನು ಬದಿಗಿಟ್ಟು ಕೇವಲ ಸಂಸ್ಕೃತ ವಿಶ್ವವಿದ್ಯಾಲಯವನ್ನು ಆರಂಭಿಸಿದೆ. ಇದು ಲಿಂಗಾಯತ ವಿರೋಧಿ ಕ್ರಮ. ಇದಕ್ಕೆ ಪ್ರತಿಯಾಗಿ ಬಸವ ವಿದ್ಯಾಲಯವನ್ನು ಆರಂಭಿಸಿಬಿಟ್ಟರೆ ನಮ್ಮ ಸಮಸ್ಯೆಯು ಮುಗಿಯುವುದಿಲ್ಲ, ಒಂದು ಕೊಟ್ಟು-ಒಂದನ್ನು ಪಡೆಯುವ ಕ್ರಮಕ್ಕೆ ಇದು ಕೌಟುಂಬಿಕ ಸಂಗತಿಯಲ್ಲ, ಸಂಸ್ಕೃತವು ನಮ್ಮ ಜನರ ಹಿತಾಸಕ್ತಿಯನ್ನು ಹತ್ತಿಕ್ಕಿದ, ಹತ್ತಿಕ್ಕುತ್ತಿರುವ ಭಾಷೆ. ಈ ಬಗೆಯ ಲಿಂಗಾಯತ ವಿರೋಧಿ ಸರ್ಕಾರವನ್ನು ಕೇವಲ ಹುಟ್ಟನಿಂದ ಲಿಂಗಾಯತರಾದ ಮುಖ್ಯಮಂತ್ರಿಯ ಹೆಸರೇಳಿಕೊಂಡು ಅದಕ್ಕೆ ಬೆಂಬಲ ನೀಡುವುದು ವಚನ ಸಂವಿಧಾನಕ್ಕೆ ದ್ರೋಹ ಬಗೆದಂತೆ. ಈ ಬಗ್ಗೆ ಮಹಾಸಭೆಯು ತೀವ್ರ ಚರ್ಚೆಯನ್ನು ನಡೆಸಬೇಕು. ಇಂತಹ ವಿಷಯಗಳ ಬಗ್ಗೆ ಮುಂದೆ ನಡೆಯುವ ಸಮಾವೇಶದಲ್ಲಿ ಗೋಷ್ಠಿಗಳನ್ನು ಏರ್ಪಡಿಸಬೇಕು. ಇದು ನಮ್ಮ ಒತ್ತಾಯ.

ಮುಖ್ಯಮಂತ್ರಿ ಅವರು ತಮ್ಮ ಕಚೇರಿಯಲ್ಲಿ ಯಜ್ಞ-ಯಾಗ ಮಾಡುವುದು ಲಿಂಗಾಯತ ವಿರೋಧಿ ಕ್ರಮ. ಅವರು ಕುಂಕುಮ ಹಚ್ಚಿಕೊಂಡು, ರೇಷ್ಮೆ ಶಾಲು ಹೊದ್ದುಕೊಂಡು, ವಿಪ್ರರ ದಂಡನ್ನು ಸುತ್ತ ನಿಲ್ಲಿಸಿಕೊಂಡು ನಾಡಿನ ನೂರಾರು ದೇವಾಲಯಗಳಿಗೆ ಹೋಗಿ ಅಲ್ಲಿ ಇಲ್ಲದ-ಸಲ್ಲದ ಪೂಜೆ, ಆಚರಣೆ, ಆರಾಧನೆ, ಬಲಿ, ಅರ್ಪಣೆ, ದಾನ, ದಕ್ಷಿಣೆ ನೀಡುವುದು ಇವೆಲ್ಲ ಅವೈಜ್ಞಾನಿಕ, ಅವೈಚಾರಿಕ ಮತ್ತು ವಚನ ಸಂವಿಧಾನ ವಿರೋಧಿ ಕ್ರಮಗಳು. ಇವುಗಳ ಬಗ್ಗೆ ಮಹಾಸಭೆಯು ಚರ್ಚಿಸಬೇಕು. ಇಂತಹ ಲಿಂಗಾಯತ ವಿರೋಧಿ ಆಚರಣೆ ಮಾಡುವ ಮುಖ್ಯಮಂತ್ರಿಗೆ ತಿಳಿಹೇಳಬೇಕು, ಛೀಮಾರಿ ಹಾಕಬೇಕು. ಸರಿಯಾದ ಲಿಂಗಾಯತ ಮಾರ್ಗದಲ್ಲಿ ನಡೆಯುವಂತೆ ಅವರಿಗೆ ಮಹಾಸಭೆಯು ತಾಕೀತು ಮಾಡಬೇಕು. ಲಿಂಗಾಯತ ಮಾರ್ಗವೆಂದರೆ ಸಮಾನತೆಯಿಂದ, ವೈಚಾರಿಕವಾಗಿ, ವೈಜ್ಞಾನಿಕವಾಗಿ ನಡೆಯುವುದು ಎಂದು ಅರ್ಥ. ಇದು ತಿಳಿಯದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರನ್ನು ಲಿಂಗಾಯತ ಮುಖ್ಯಮಂತ್ರಿಯೆಂದು ಕರೆಯುವುದು ವಚನ ಸಂವಿಧಾನಕ್ಕೆ ಅವಮಾನ.

ಕೊನೆಯದಾಗಿ ಅಖಿಲ ಭಾರತ ಲಿಂಗಾಯತ ಮಹಾಸಭೆಯು ಅಭಿವೃದ್ಧಿ ಸಂಸ್ಥೆಯಾಗಬೇಕು. ಮುಖ್ಯಮಂತ್ರಿಯು ಲಿಂಗಾಯತ ಎಂದು ಅದರ ಮರ್ಜಿ ಹಿಡಿಯುವ ಕಾರ್ಯಕ್ಕೆ ಮಹಾಸಭೆಯು ಮುಂದಾಗಬಾರದು. ಬಸವಣ್ಣ ನಮಗೆ ಹೇಳಿಕೊಟ್ಟಿರುವ ನೀತಿ ಇಲ್ಲಿದೆ ನೋಡಿ:

ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು
ಜೀವನೋಪಾಯಕ್ಕೆ 'ಈಯಯ್ಯಾ' ಎನ್ನೆನು
ಉರಿ ಬರಲಿ, ಸಿರಿ ಬರಲಿ
ಬೇಕು ಬೇಡೆನ್ನೆನು
ಆ ನಿಮ್ಮ ಹಾರೆನು, ಮಾನವರ ಬೇಡೆನು.
ಆಣೆ, ನಿಮ್ಮಾಣೆ, ಕೂಡಲಸಂಗಮದೇವಾ.

ಲದ್ದೆ ಸೋಮಣ್ಣ ಎಂಬ ವಚನಕಾರ ಇಂತವರನ್ನು ಕಂಡು ಹೀಗೆ ಹೇಳಿದ್ದಾನೆ:


ಆವ ಕಾಯಕವಾದಡೂ ಸ್ವಕಾಯಕವ ಮಾಡು,
ಗುರು ಲಿಂಗ ಜಂಗಮ ಮುಂದಿಟ್ಟು
ಒಕ್ಕುದ ಹಾರೈಸಿ, ಮಿಕ್ಕುದ ಕೈಗೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು
ಜೀವ ಹೋದರೆ ಸಾಯಿ, ಇದಕ್ಕಾ ದೇವರ ಹಂಗೇಕೆ?
ಬಾಪು ಲದ್ದೆ ಸೋಮ.

ಸ್ವಾಭಿಮಾನಿ, ಸ್ವಾವಲಂಬಿ, ಸರ್ವಸ್ವತಂತ್ರ ಮತ್ತು ಸಮಾನತೆಯಿಂದ ಕೂಡಿದ ಬದುಕನ್ನು ಕಟ್ಟಿಕೊಳ್ಳುವ ಕಾರ್ಯಕ್ಕೆ ಇಂಬು ಕೊಡುವ ರೀತಿಯಲ್ಲಿ ಮಹಾಸಭೆಯು ಕೆಲಸ ಮಾಡಬೇಕು. ಮತ್ತೊಬ್ಬರ ಅಡಿಯಾಳಾಗುವುದು ಇಲ್ಲಿ ಸಲ್ಲದು. ದೇವರ ದಾಸಿಮಯ್ಯನು ಅದಕ್ಕಾಗಿಯೇ 'ಒಡೆಯರನೊಡಗೊಂಡು ಬಂದು, ಕೈಯ ಗಡಿಗೆಯ ನೀರ ಕೈಯಲ್ಲಿ ಕೊಟ್ಟು, ಒಡೆಯರೇ, ಕಾಲ ತೊಳೆಕೋ, ಎಂಬುವರ ಮನೆಗೆ ಅಡಿಯಿಡಲಾಗದು ಮೃಡಶರಣರು' ಎಂದು ಹೇಳುತ್ತಾನೆ. ಇದು ನಮ್ಮ ಪ್ರಣಾಳಿಕೆ. ಅದರಂತೆ ಮಹಾಸಭೆಯು ಲಿಂಗಾಯತರ ಬದುಕನ್ನು ಕಟ್ಟುವ ಕೆಲಸಕ್ಕೆ ಇಂಬಾಗಿ ನಿಂತುಕೊಳ್ಳಲಿ.

ಶರಣಾರ್ಥಿಗಳೊಂದಿಗೆ ತಮ್ಮ ವಿಶ್ವಾಸಿ,

• ಟಿ.ಆರ್.ಚಂದ್ರಶೇಖರ


ಪ್ರಾಧ್ಯಾಪಕ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ 583 201




ಬಿಜೆಪಿ ಹುತ್ತದೊಳಗೆ ಕಚ್ಚಾಡುವ ಹಾವುಗಳು

ಅಶೋಕ್ V/s ಸೋಮಣ್ಣ

ಬಿಜೆಪಿ ಹುತ್ತದೊಳಗೊಂದು ಹೊಸ ಕಾಳಗ ಶುರುವಾಗಿದೆ. ಅದು ಗೃಹಮಂತ್ರಿ ಅಶೋಕ್ ವಿರುದ್ಧ ವಸತಿ ಮಂತ್ರಿ ಸೋಮಣ್ಣನ ಕಿತಾಪತಿ!



ಡಾಲರ್ಸ್ ಕಾಲೋನಿಯ ಡೀನೋಟಿಫಿಕೇಷನ್ ದುರಾಚಾರವನ್ನು ಅಗೆದು ತೆಗೆದು ಭ್ರಷ್ಟಾಚಾರದ ಕೇಸು ಹಾಕಿಸಿ ಅಶೋಕ್ ಮಂತ್ರಿಗಿರಿಗೇ ಸಂಚಕಾರ ತಂದ ಮಂಜುನಾಥ್ ಎಂಬ ಆಸಾಮಿ ನಿಜಕ್ಕೂ ಸೋಮಣ್ಣನ ಭಟ್ಟಂಗಿಯಾ? ತನ್ನ ಶಿಷ್ಯನನ್ನು ಛೂಬಿಟ್ಟು ಅಶೋಕ್ ಬುಡಕ್ಕೆ ಕೊಳ್ಳಿ ಇಟ್ಟ ಸೋಮಣ್ಣನಿಗೆ ಮುಖ್ಯಮಂತ್ರಿ ಯಡ್ಡಿಯ ಕುಮ್ಮಕ್ಕಿದೆಯಾ? ಅಷ್ಟಕ್ಕೂ ಸೋಮಣ್ಣನಿಗೆ ಅಶೋಕ್‌ರನ್ನು ಹಣಿದು ಏನು ಲಾಭ? ಅಥವಾ ಇದು ಯಡ್ಡಿ ವಿರುದ್ಧದ ಅನಂತ್ ಕುತಂತ್ರದ ಇನ್ನೊಂದು ಮುಖವಾ? ಇಲ್ಲಿ ದೇವೇಗೌಡರ ಕಪಟ ನಾಟಕವಾದರೂ ಎಂಥದ್ದು?


ಕೇಸು ಹಾಕಿದ ಮಂಜುನಾಥ್

ಅಶೋಕ್ ಮತ್ತು ಸೋಮಣ್ಣ ನಡುವಿನ ಅಂತಃಕಲಹಕ್ಕೆ ಇಂಥ ಅನೇಕಾನೇಕ ಆಯಾಮ ಗಳಿವೆ. ಅಶೋಕ್ ವಿರುದ್ಧ ಡೀನೋಟಿಫಿಕೇಷನ್ ಹಗರಣದ ಕೇಸು ಹಾಕಿಸಿ ಕೋರ್ಟಿಗೆಳೆದು ಕಾಟ ಕೊಟ್ಟ ಮಂಜುನಾಥ್ ಎಂಬಾತ ಸೋಮಣ್ಣನ ನಂಬಿಕಸ್ತ ಬಂಟನೆಂಬ ಒಂದೇ ಕಾರಣಕ್ಕೆ, ಇಡೀ ಅಶೋಕ್ ಪಟಾಲಂ ಸೋಮಣ್ಣನ ವಿರುದ್ಧ ತಿರುಗಿಬಿದ್ದಿದೆ. ಮೊದಲೇ ಅಸಂಖ್ಯಾತ ಭೂಹಗರಣಗಳ ಬಲೆಗೆ ಬಿದ್ದು ಒದ್ದಾಡುತ್ತಿರುವ ಮುಖ್ಯಮಂತ್ರಿ ಯಡ್ಡಿಯ ಜೊತೆ ಬಿಜೆಪಿ ಸರ್ಕಾರದ ಅತ್ಯಂತ ಪ್ರಭಾವಿ, ಒಕ್ಕಲಿಗರ ಹಾಲಿ ನಾಯಕ ಮತ್ತು ಅನಂತ್ ಬಣದ ದಂಡನಾಯಕನಂತಿರುವ ಅಶೋಕ್‌ನನ್ನು ಭೂಹಗರಣದ ಬಲೆಗೆ ಕೆಡವಿದ್ದು ಸೋಮಣ್ಣ ಎಂಬುದು ಸದ್ಯ ಗುಟ್ಟಾಗಿ ಉಳಿದಿಲ್ಲ!

ಅಶೋಕ್‌ನನ್ನು ಕೋರ್ಟಿಗೆಳೆದು ಹಗರಣದ ಕೂಪಕ್ಕೆ ನೇಲಿಸಿದರೆ ಸಹಜವಾಗೇ ಮಂತ್ರಿಗಿರಿಗೆ ರಾಜೀನಾಮೆ ಕೊಡಬೇಕಾಗುತ್ತದೆ. ಸದ್ಯ ಅಶೋಕ್ ಗೃಹಖಾತೆ ಮತ್ತು ಸಾರಿಗೆ ಜೊತೆಗೆ ಬೆಂಗಳೂರು ನಗರ ಜಿಲ್ಲೆಯ ಉಸ್ತುವಾರಿ ಮಂತ್ರಿ. ಹಿಂದೆ ಕಟ್ಟಾ ಮಂತ್ರಿಯಾಗಿದ್ದಾಗ ಅಶೋಕ್ ಬೆಂಗಳೂರು ದಕ್ಷಿಣದ 14 ಶಾಸಕ ಕ್ಷೇತ್ರಗಳಿಗೆ ಉಸ್ತುವಾರಿಯಾಗಿದ್ದರೆ ಮಿಕ್ಕ ಬೆಂಗಳೂರು ಉತ್ತರದ 14 ಕ್ಷೇತ್ರಗಳನ್ನು ಕಟ್ಟಾ ನಿಭಾಯಿಸುತ್ತಿದ್ದ. ಕಟ್ಟಾ ಮತ್ತು ಅಶೋಕ್ ಮಧ್ಯೆ ಹಂಚಿಕೆಯಾಗಿದ್ದ ಬೆಂಗಳೂರು ಉಸ್ತುವಾರಿ ಈಗ ಅಶೋಕ್ ಏಕಾಧಿಪತ್ಯಕ್ಕೊಳಪಟ್ಟಿದ್ದೇ ಸೋಮಣ್ಣನ ಹೊಟ್ಟೆಕಿಚ್ಚಿನ ಮೂಲ. ಅಶೋಕ್ ಬುಡ ಅಲ್ಲಾಡಿತೆಂದರೆ ತಾನು ಬೆಂಗಳೂರು ಉಸ್ತುವಾರಿ ಮಂತ್ರಿಯಾಗಬಹುದೆಂಬ ದುರಾಶೆ ಸೋಮಣ್ಣನ ತಲೆ ಹೊಕ್ಕಿದೆ.

ಇದು ಅಶೋಕ್ ಬೆಂಬಲಿಗರ ಆರೋಪ ಮತ್ತು ಅನುಮಾನ ಕೂಡ. ತಾನು ಬೆಂಗಳೂರು ಉಸ್ತುವಾರಿ ಮಂತ್ರಿಯಾಗಬೇಕೆಂಬ ಒಂದೇ ಕಾರಣಕ್ಕೆ ಸೋಮಣ್ಣ ಇಂಥಾದ್ದೊಂದು ದುಸ್ಸಾಹಸಕ್ಕೆ ಕೈಹಾಕುತ್ತಾನಾ? ಅಶೋಕ್ ಬುಡಕ್ಕೆ ಬೆಂಕಿ ಬಿದ್ದ ಕ್ಷಣವೇ ಸೋಮಣ್ಣನನ್ನು ಬೆಂಗಳೂರು ಉಸ್ತುವಾರಿ ಮಂತ್ರಿ ಮಾಡುತ್ತಾರೆಂಬುದಕ್ಕೆ ಏನು ಗ್ಯಾರಂಟಿ? ಅಶೋಕ್ ವಿರುದ್ಧ ಸೋಮಣ್ಣನನ್ನು ಎತ್ತಿಕಟ್ಟಿ ಆಟ ಆಡುತ್ತಿರುವುದು ಮುಖ್ಯಮಂತ್ರಿ ಯಡ್ಡಿಯಾ? ಮುಖ್ಯ ಮಂತ್ರಿಯ ಕುಮ್ಮಕ್ಕಿಲ್ಲದೆ ಸೋಮಣ್ಣ ಇಂಥಾದ್ದೊಂದು ಅಪಾಯಕ್ಕೆ ಕೈಹಾಕಲು ಸಾಧ್ಯವಾ? ಅಷ್ಟಕ್ಕೂ ಮುಖ್ಯಮಂತ್ರಿಗೆ ತನ್ನದೇ ಸಂಪುಟದ ಅತಿಬಲಾಢ್ಯನನ್ನು ಮಟ್ಟಹಾಕಿ ಬರುವ ಲಾಭವಾದರೂ ಏನು?

ಈ ಥರದ ಅನೇಕ ಪ್ರಶ್ನೆಗಳ ಹಿಂದಿನ ಕಾರಣಗಳು ಒಂದಾ ಎರಡಾ? ಸದ್ಯ ಸೋಮಣ್ಣನ ವಿರುದ್ಧ ಬೆಂಗಳೂರಿನ ಹದಿನೈದು ಮಂದಿ ಶಾಸಕರು ಅಶೋಕ್ ಪರ ವಹಿಸಿ ಹೈಕಮಾಂಡಿಗೆ ದೂರು ಕೊಟ್ಟಿದ್ದಾರಂತೆ. ಹಾಗಂತ ಅಶೋಕ್ ಛೇಲಾಗಳೇ ಪತ್ರಿಕೆಗಳಲ್ಲಿ ಪುಕಾರೆಬ್ಬಿಸುತ್ತಿದ್ದಾರೆ. ಹೀಗೆ ಅಶೋಕ್ ಪಟಾಲಮ್ಮು ಸೋಮಣ್ಣನ ವಿರುದ್ಧ ಪ್ರತಿ ದಾಳಿ ನಡೆಸುತ್ತಿರುವುದರ ಮರ್ಮವೇ ಬೇರೆಯಿದೆ. ಅಶೋಕ್ ವಿರುದ್ಧ ರಾಜ್ಯಪಾಲರಿಗೆ ದೂರು ಕೊಟ್ಟು ಲೋಕಾಯುಕ್ತಕ್ಕೂ ಅರ್ಜಿ ಹಾಕಿ ಈಗ ಕೋರ್ಟಿಗೆಳೆದು ತಂದವನು ಆರ್‌ಪಿಸಿ ಲೇಔಟಿನ ಮಂಜುನಾಥ್!



ಮುಖ್ಯಮಂತ್ರಿಯ ಭೂಹಗರಣದ ವಿರುದ್ಧ ಕೇಸು ಹಾಕಿದ ಶಿವಮೊಗ್ಗದ ವಕೀಲರಾದ ಸಿರಾಜಿನ್ ಭಾಷಾ ಮತ್ತು ಬಾಲರಾಜು ಜಾತ್ಯತೀತ ಧೋರಣೆಯವರು. ಆದರೆ ಸೆಕ್ಯೂಲರ್ ಮನಸ್ಥಿತಿಯ ಈ ಇಬ್ಬರು ವಕೀಲರು ಮುಖ್ಯಮಂತ್ರಿಯ ಬೆನ್ನಿಗೆ ಬಿದ್ದು ಕಾಟ ಕೊಟ್ಟಿದ್ದಕ್ಕೆ ದೇವೇಗೌಡರ ಕುಮ್ಮಕ್ಕೇ ಕಾರಣ ಎಂಬ ಗುಮಾನಿ ಯಡ್ಡಿಯದು. ಜೊತೆಗೆ ಮಂತ್ರಿ ಅಶೋಕ್ ಮೇಲೂ ಯಡ್ಡಿಗೆ ಮತ್ತೊಂದು ಕಣ್ಣಿತ್ತು. ಎಷ್ಟೆಂದರೂ ಅಶೋಕ್ ಒಕ್ಕಲಿಗರ ನಾಯಕ. ಕನಿಷ್ಠ ಜಾತಿ ಕಾರಣಕ್ಕಾದರೂ ದೇವೇಗೌಡರೊಂದಿಗೆ ಒಳಸಂಬಂಧವಿದ್ದೇ ಇರುತ್ತದೆ ಎಂಬ ಗುಮಾನಿ ಬೇರೆ.


ಅದು ಭಾಗಶಃ ನಿಜ ಕೂಡ. ಯಡ್ಡಿ ವಿರುದ್ಧ ರೊಚ್ಚಿಗೆದ್ದ ದೇವೇಗೌಡ ಮತ್ತು ಕುಮಾರಸ್ವಾಮಿ ಒಳಗೊಳಗೇ ಅಶೋಕ್‌ಗೆ ಕುಮ್ಮಕ್ಕು ಕೊಟ್ಟರು. ಅಶೋಕ್ ಕೂಡ ಅಪ್ಪ ಮಕ್ಕಳ ಬಗ್ಗೆ ಮೆದುವಾದರು. ಅದು ಯಡ್ಡಿ ಮುಖ್ಯಮಂತ್ರಿಯಾದ ಮೇಲಷ್ಟೇ ಅಲ್ಲ; ಕಳೆದ ಚುನಾವಣೆಯಲ್ಲಿ ಅಶೋಕ್ ವಿರುದ್ಧ ಕಬಡ್ಡಿ ಬಾಬುವನ್ನು ಡೆಮ್ಮಿಯಾಗಿ ಕಣಕ್ಕಿಳಿಸಿ ಕಾಟಾಚಾರಕ್ಕೂ ಪದ್ಮನಾಭನಗರದ ಪ್ರಚಾರಕ್ಕೆ ಅಪ್ಪಮಕ್ಕಳು ಬರಲಿಲ್ಲ, ಅದು ಅಶೋಕ್ ಮೇಲಿನ ಅಪ್ಪ ಮಕ್ಕಳ ಗುಪ್ತ ಪ್ರೀತಿ. ಯಡ್ಡಿ ಮುಖ್ಯಮಂತ್ರಿಯಾದ ಮೇಲಂತೂ ಅಶೋಕ್-ಕುಮಾರಣ್ಣರ ದೋಸ್ತಿ ಮತ್ತಷ್ಟು ಗಟ್ಟಿಯಾಯಿತು. ಅದಕ್ಕೆ ತಕ್ಕಂತೆ ಅಶೋಕ್ ವಿರುದ್ಧ ಒಳಗೊಳಗೇ ಯಡ್ಡಿಗೆ ಅನುಮಾನ ಹೆಡೆಯೆತ್ತಿತ್ತು. ತನ್ನ ವಿರುದ್ಧ ಅನಂತ್‌ಕುಮಾರ್ ಮತ್ತು ದೇವೇಗೌಡರಿಗೆ ಅಶೋಕ್ ಸುದ್ದಿ ಕೊಡುತ್ತಿರಬಹುದೆ? ಅಶೋಕ್ ತನ್ನ ಜೊತೆಗಿದ್ದುಕೊಂಡೇ ಒಕ್ಕಲಿಗರ ಲಾಬಿಯನ್ನು ಬಲಗೊಳಿಸುತ್ತಿದ್ದಾರಾ? ಬಿಜೆಪಿಯೊಳಗಿನ ಒಕ್ಕಲಿಗರ ಲಾಬಿಗೆ ಅಪ್ಪ ಮಕ್ಕಳ ಬಾಹ್ಯ ಬೆಂಬಲವಿರಬಹುದಾ?


ವೆಂಕಟರೆಡ್ಡಿ

ತನ್ನ ವಿರುದ್ಧ ದೇವೇಗೌಡ, ಕುಮಾರಸ್ವಾಮಿ, ಅನಂತ್‌ಕುಮಾರ್ ಮತ್ತು ಅಶೋಕ್ ಒಳಗೊಳಗೇ ಕೈಜೋಡಿಸಿದ್ದಾರೆಂಬುದು ಯಡ್ಡಿಯ ಅನುಮಾನ. ಗಣಿ ರೆಡ್ಡಿಗಳೂ ಕೂಡ ಪರೋಕ್ಷವಾಗಿ ಇದೇ ಕೂಟದ ಹಿಂದಿದ್ದಾರೆಂಬ ಮತ್ತೊಂದು ಗುಮಾನಿ ಮುಖ್ಯಮಂತ್ರಿಯ ತಲೆ ಕೊರೆಯುತ್ತಿತ್ತು.

ಯಾವತ್ತು ವಕೀಲರಾದ ಸಿರಾಜಿನ್ ಭಾಷಾ ಮತ್ತು ಬಾಲರಾಜ್ ಮುಖ್ಯಮಂತ್ರಿ ವಿರುದ್ಧ ಮೊಕದ್ದಮೆಗೆ ಮುಂದಾದರೋ ಅದರ ವಿರುದ್ಧ ಏನಾದರೂ ಒಂದು ಮರಮ್ಮತ್ತು ಮಾಡಬೇಕಲ್ಲ; ಅದಕ್ಕೊಂದು ಯಡ್ಡಿ ಗ್ಯಾಂಗ್ ಫಿಟ್ಟಿಂಗ್ ಇಟ್ಟಿದ್ದು ಅಶೋಕ್‌ಗೆ. ಯಡ್ಡಿ ಸಂಪುಟದಲ್ಲಿ ಅಪ್ಪ ಮಕ್ಕಳ ಏಜೆಂಟನಂತಿರುವ ಅಶೋಕ್‌ಗೆ ತಿರುಮಂತ್ರ ಹಾಕಿದರೆ ತನ್ನ ಜೊತೆ ಅವರ ಬುಡಕ್ಕೂ ಬೆಂಕಿ ಇಟ್ಟಂತಾಗುತ್ತದೆ. ಕಾವು ತನಗಷ್ಟೇ ಅಲ್ಲ ಮಣ್ಣಿನ ಮಕ್ಕಳ ಬುಡಕ್ಕೂ ಸುಡಲಾರಂಭಿಸುತ್ತದೆ. ಇನ್ನೇನು ಮುಳುಗುವ ಪರಿಸ್ಥಿತಿ ಬಂತೆಂದರೆ ಆಗ ಕನಿಷ್ಠ ಅಶೋಕ್ ಕಾರಣಕ್ಕಾದರೂ ಅಪ್ಪಮಕ್ಕಳು ಮೆದುವಾಗಬಹುದಲ್ಲ.


ಅಥವಾ ಅವರ ಒಂದು ಕಣ್ಣು ಹೋಗುವುದಾದರೆ ತನ್ನ ಎರಡೂ ಕಣ್ಣು ಹೋಗಲೆಂದೇ ಯಡ್ಡಿ ಸೂಸೈಡ್ ಅಟ್ಯಾಕ್‌ಗೆ ಸೋಮಣ್ಣನನ್ನು ಛೂಬಿಟ್ಟಿದ್ದಾರೆ. ಸೋಮಣ್ಣ


ಅಶೋಕ್ ಕಬಳಿಸಿದ ಬಿಡಿಎ ಆಸ್ತಿ

▶▶ 6

ಅಶೋಕ್ ದಾಳಿಗೆ ವಿಜಯನಗರ ಸಾಮ್ರಾಜ್ಯವೇ ನುಚ್ಚುನೂರು!


ಅಶೋಕ್ ವಿರುದ್ಧದ ಸೋಮಣ್ಣನ ಸಿಟ್ಟಿಗೆ ಒಂದಲ್ಲ ಎರಡಲ್ಲ ಹತ್ತಾರು ಕಾರಣಗಳಿವೆ. ಯಡ್ಡಿ ಸೋಮಣ್ಣನನ್ನು ಏನೆಲ್ಲಾ ಮಾಡಿ ಬಿಜೆಪಿಗೆ ತಂದರೂ ಅದಕ್ಕೆ ಅಡ್ಡಗಾಲಿಡುತ್ತಲೇ ಬಂದದ್ದು ಅಶೋಕ್. ಸೋಮಣ್ಣ ಎಂಥಾ ಕಿಲಾಡಿ ಮತ್ತು ಕಾರ್ಯಸಾಧಕನೆಂಬುದು ಬೇರೆಲ್ಲರಿಗಿಂತಲೂ ಅಶೋಕ್‌ಗೆ ಚೆನ್ನಾಗಿ ಗೊತ್ತು. ಸೋಮಣ್ಣ ಒಮ್ಮೆ ಬಿಜೆಪಿ ಹೊಕ್ಕನೆಂದರೆ ಇವತ್ತಲ್ಲಾ ನಾಳೆ ತನ್ನನ್ನು ಹಿಂದಿಕ್ಕಿ ನುಗ್ಗುತ್ತಾನೆಂಬುದು ಕೂಡ ಅಶೋಕ್‌ಗಿರುವ ಅಳುಕು. ಅದಕ್ಕೆಂದು ಅಶೋಕ್ ಮಾಡಿದ ಮೊದಲ ಘಾತವೇ ಕಳೆದ ಚುನಾವಣೆಯಲ್ಲಿ ಸೋಮಣ್ಣನನ್ನು ಸೋಲಿಸಿದ್ದು!


ಪ್ರಿಯಾ ಕೃಷ್ಣ

ಗೋವಿಂದರಾಜ ನಗರಕ್ಕೆ ಸೋಮಣ್ಣನ ವಿರುದ್ಧ ಕೃಷ್ಣಪ್ಪನವರ ಮಗ ಪ್ರಿಯಾಕೃಷ್ಣ ನಿಂತಾಗಲೇ ಅಶೋಕ್ ಷಡ್ಯಂತ್ರ ರೂಪಿಸಿಯಾಗಿತ್ತು, ಆತನಕ ಗೋವಿಂದರಾಜ ನಗರಕ್ಕೆ ಟಿಕೆಟ್ ಆಕಾಂಕ್ಷಿಯಾಗಿದ್ದ ಲಕ್ಷ್ಮಿನಾರಾಯಣ, ರವೀಂದ್ರ ಮುಂತಾದ ಅಶೋಕ್ ನಿಷ್ಠರೆಲ್ಲ ಒಳಗೊಳಗೇ ಲೇಔಟ್ ಕೃಷ್ಣಪ್ಪರ ಜೊತೆ ಕೈಜೋಡಿಸಿಬಿಟ್ಟರು. ಅಶೋಕ್ ಕೂಡ ಜಾತಿಯ ಹಂಗಿಗೆ ಬಿದ್ದು ಕೃಷ್ಣಪ್ಪನವರ ಬೆನ್ನಿಗೆ ನಿಂತರು. ಸೋತ ಸೋಮಣ್ಣ ತನ್ನ ಜೊತೆಗಿದ್ದೇ ದ್ರೋಹ ಬಗೆದ ಅಶೋಕ್ ವಿರುದ್ಧ ಕುದಿಯುತ್ತಲೇ ಇದ್ದ.

ಇದು ಅಶೋಕ್ ಸೋಮಣ್ಣನಿಗೆ ಹಾಕಿದ ಮೊದಲ ಸವಾಲು. ಸೋಮಣ್ಣನ ಜೊತೆ ಬೆಂಬಲಿಗರಲ್ಲೂ ಅನೇಕರು ಅಶೋಕ್ ಜೊತೆ ಗುಪ್ತವಾಗಿ ಕೈ ಜೋಡಿಸಿದ್ದರು. ಈ ಬೆಳವಣಿಗೆ ಸೋಮಣ್ಣನ ಹತಾಶೆಯನ್ನು ಮತ್ತಷ್ಟು ಹೆಚ್ಚಿಸಿತು. ಇಷ್ಟಾಗೂ, ಮುಖ್ಯಮಂತ್ರಿಯ ಪರಮಾಪ್ತನೆಂಬ ಕಾರಣಕ್ಕೆ, ಸೋಮಣ್ಣ ಎಮ್ಮೆಲ್ಸಿಯಾಗಿ ಮಂತ್ರಿಯೂ ಆದನಲ್ಲ; ಅದು ಅಶೋಕ್ ಪಾಲಿಗೆ ಇನ್ನಷ್ಟು ಕಿರಿಕಿರಿಗೆ ಕಾರಣವಾಯ್ತು.

ಯಾವತ್ತು ಸೋಮಣ್ಣನ ಭಂಟ ಮಂಜುನಾಥ್ ಡಾಲರ್ಸ್ ಕಾಲೋನಿಯ ಡೀನೋಟಿಫಿಕೇಷನ್ ಹಗರಣಕ್ಕೆ ಕೈಯಿಟ್ಟು ಅಶೋಕ್ ವಿರುದ್ಧ ಕೇಸು ಹಾಕಿದನೋ ಅಶೋಕ್ ಸದ್ದಿಲ್ಲದೇ ಪೊಲೀಸರನ್ನು ಬಿಟ್ಟು ಆತನ ಹಿನ್ನೆಲೆ ಕೆದಕಿದ್ದಾರೆ. ಅಲ್ಲಿಗೆ ಇದನ್ನೆಲ್ಲ ಸೋಮಣ್ಣನೇ ಮಾಡಿಸಿದ್ದೆಂಬುದು ಅಶೋಕ್‌ಗೆ ನಿಕ್ಕಿಯಾಗಿದೆ. ಇದಕ್ಕೆ ಪ್ರತಿಯಾಗಿ ಸೋಮಣ್ಣನ ವಿರುದ್ಧ ಆತನ ಕೇಡಿ ಶಿಷ್ಯ ರವೀಂದ್ರನನ್ನೇ ಅಶೋಕ್ ಎತ್ತಿಕಟ್ಟಿದ್ದಾರೆ. ವಿಜಯನಗರದ ಖತರ್‌ನಾಕ್ ಕೌನ್ಸಿಲರ್ ರವೀಂದ್ರ ಒಂದಾನೊಂದು ಕಾಲಕ್ಕೆ ಯಕಶ್ಚಿತ್ ಲಿಕ್ಕರ್ ಸ್ಮಗ್ಲರ್. ಪುಡಿ ರೌಡಿಗಳನ್ನು ಕಟ್ಟಿಕೊಂಡು ಎಲ್ಲೆಂದರಲ್ಲಿ ಹಾವಳಿಯಿಡುವುದು ಈತನ ಹುಟ್ಟುಗುಣ.


ಲಕ್ಷ್ಮೀನಾರಾಯಣ

ಇಂಥಾ ಮನೆಹಾಳನನ್ನು ಸಾಕಿ ಬೆಳೆಸಿದ್ದೇ ಸೋಮಣ್ಣ ಮಾಡಿದ ಮೊದಲ ತಪ್ಪು. ಈಗ ಇದೇ ರವೀಂದ್ರ ಸೋಮಣ್ಣನ ವಿರುದ್ಧ ತಿರುಗಿಬಿದ್ದು ಅಶೋಕ್ ಬೆನ್ನಿಗೆ ನಿಂತಿದ್ದಾನೆ. ವಿಜಯನಗರದ ತುಂಬ ಅಶೋಕ್‌ರ ಕಟೌಟು ಹಾಕಿಸಿ ತಾನೇ ವಿಜಯನಗರಕ್ಕೆ ಮುಂದಿನ ಎಂಎಲ್‌ಎ ಅಭ್ಯರ್ಥಿಯೆಂದು ರವೀಂದ್ರ ಪೋಜು ಕೊಡುತ್ತಿದ್ದಾನೆ.

ಅಶೋಕ್‌ರಂತೆ ಜಾತಿಯಲ್ಲಿ ರವೀಂದ್ರ ಕೂಡ ಒಕ್ಕಲಿಗನೆ. ಆದರೆ ಸೋಮಣ್ಣನಿಗೆ ಮುಂದಿನ ಚುನಾವಣೆಯಲ್ಲಿ ತನ್ನ ಮತ್ತೊಬ್ಬ ಶಿಷ್ಯ ಮತ್ತು ಗಾಳಿ ಆಂಜನೇಯ ವಾರ್ಡಿನ ಮಾಜಿ ಕೌನ್ಸಿಲರ್ ಲಕ್ಷ್ಮೀನಾರಾಯಣರನ್ನು ಬಿಜೆಪಿಯಿಂದ ನಿಲ್ಲಿಸುವ ಆಸೆ. ಅದಕ್ಕೆ ಅಶೋಕ್ ಈಗ ರವೀಂದ್ರನ ಮೂಲಕ ಕಲ್ಲು ಹಾಕುತ್ತಿದ್ದಾರೆ. ಅಶೋಕ್ ಮತ್ತು ಸೋಮಣ್ಣನ ನಡುವಿನ ಜಿದ್ದಾಜಿದ್ದಿ ಬರುಬರುತ್ತ ಯಾವ ಮಟ್ಟ ಮುಟ್ಟುತ್ತಿದೆ ಎಂಬುದಕ್ಕೆ ಮೊನ್ನೆ ಅಂದರೆ ಮಾರ್ಚ್ 15 ರಂದು ನಾಗರಬಾವಿ ಸರ್ಕಲ್ಲಿನಲ್ಲಿ ನಡೆದ ಬಿಬಿಎಂಪಿ ಕಾರ್ಯಕ್ರಮವೇ ಸಾಕ್ಷಿ. ಚಂದ್ರಾಲೇಔಟ್ ಕೌನ್ಸಿಲರ್ ಉಮೇಶ್ ಶೆಟ್ಟಿ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮಕ್ಕೆ ಖುದ್ದು ಅಶೋಕ್, ಅನಂತ್‌ಕುಮಾರ್, ಮೇಯರ್ ನಟರಾಜ್ ಎಲ್ಲರೂ ಬಂದಿದ್ದರು.

ಕಾರ್ಯಕ್ರಮದ ಮಧ್ಯೆ ಪ್ರಿಯಾಕೃಷ್ಣರಿಗೆ ಅವಮಾನವಾಯ್ತೆಂದು ಕಾಂಗ್ರೆಸ್ ಕೌನ್ಸಿಲರ್ ದೊಡ್ಡಣ್ಣನ ಶಿಷ್ಯರು ಸೋಮಣ್ಣನ ವಿರುದ್ಧ ಗಲಾಟೆಗಿಳಿದರು. ಇತ್ತ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಸೋಮಣ್ಣನ ವಿರುದ್ಧ ಧಿಕ್ಕಾರ ಕೂಗುತ್ತಿದ್ದರೆ, ಇಡೀ ಕಾರ್ಯಕ್ರಮವೇ ಗಲಾಟೆಯಲ್ಲಿ ಮುಳುಗಿದ್ದರೆ, ವೇದಿಕೆಯಲ್ಲಿದ್ದ ಅಶೋಕ್ ನೆಪಕ್ಕೂ ಸೋಮಣ್ಣನ ನೆರವಿಗೆ ಬರಲಿಲ್ಲ. ಸೌಜನ್ಯಕ್ಕೂ ಗಲಾಟೆ ನಿಯಂತ್ರಿಸುವಂತೆ ಪೊಲೀಸರಿಗೆ ಸೂಚಿಸಲಿಲ್ಲ. ಇದಾಗಿ ಹತ್ತು ದಿನಕ್ಕೆ ವಿಜಯನಗರದಲ್ಲಿ ಸಾರಿಗೆ ಕಾಂಪ್ಲೆಕ್ಸ್ ಉದ್ಘಾಟನೆಗೆಂದು ಅಶೋಕ್ ಬಂದರೆ ಸೋಮಣ್ಣ ಅತ್ತ ಅಪ್ಪಿತಪ್ಪಿಯೂ ಸುಳಿಯಲಿಲ್ಲ.

ಏಕೆಂದರೆ ಇಡೀ ಕಾರ್ಯಕ್ರಮದ ವೇದಿಕೆ ಸುತ್ತ ಅಶೋಕ್ ಮತ್ತು ಲೇಔಟ್ ಕೃಷ್ಣಪ್ಪನವರ ಕಟೌಟುಗಳಿದ್ದವೇ ಹೊರತು ಸೋಮಣ್ಣನ ಹೆಸರಾಗಲಿ, ಕಟೌಟ್ ಆಗಲಿ ಇರಲೇ ಇಲ್ಲ. ಸೋಮಣ್ಣನ ಕಡುವೈರಿ ಲೇಔಟ್ ಕೃಷ್ಣಪ್ಪನವರ ಜೊತೆ ಅಶೋಕ್‌ಗೆ ಜಾತಿನಂಟೋ ರಾಜಕೀಯದ ಹರಕತ್ತೋ ಗೊತ್ತಿಲ್ಲ. ಸೋಮಣ್ಣ ಮತ್ತು ಅಶೋಕ್ ನಡುವಿನ ಮುಸುಕಿನ ಗುದ್ದಾಟ ಅಂತಿಮವಾಗಿ ಯಾವ ಹಂತಕ್ಕೆ ಬಂದು ನಿಲ್ಲುತ್ತೋ ಬಲ್ಲವರ್‍ಯಾರು?

ಪಾಳೇಗಾರ ಕಾರ್ಪೋರೇಟರ್ ಉಮೇಶ್ ಶೆಟ್ಟಿಯ ಕಿಕ್ಕು-ಕಿರಿಕ್ಕು!

ಪುಂಡ-ಪೋಕರಿಗಳು ಜನನಾಯಕರಾದರೆ ಘಟಿಸಬಹುದಾದ ಪ್ರತಿ ಅನಾಹುತಗಳಿಗೂ ಬೆಂಗಳೂರಿನ ನಾಗರಬಾವಿ ಸುತ್ತಲ ಪ್ರದೇಶ ಸಾಕ್ಷಿಯಾಗುತ್ತಿದೆ. ಇಂತಹುದೊಂದು ವಿಷಮ ಪರಿಸ್ಥಿತಿಗೆ ಕಾರಣವಾಗಿರುವುದು ಈ ಭಾಗದ ಬಿಜೆಪಿ ಕಾರ್ಪೋರೇಟರ್ ಉಮೇಶ್ ಶೆಟ್ಟಿ ಮತ್ತವನ ಅನಾಹುತಕಾರಿ ಚೇಲಾಪಡೆ. ಆರಿಸಿ ಕಳಿಸಿದ ಜನರನ್ನು ಗೋಳಾಡಿಸುವುದೇ ಅಧಿಕಾರವೆಂದುಕೊಂಡಿರುವ ಈ ದುಷ್ಟಕೂಟ ಇತ್ತೀಚೆಗಷ್ಟೇ ಭಾರೀ ಅನಾಹುತವೊಂದನ್ನು ಮಾಡಿ ದಕ್ಕಿಸಿಕೊಳ್ಳುವ ಸನ್ನಾಹದಲ್ಲಿದೆ.

ಉಮೇಶ್ ಶೆಟ್ಟಿ ನೆರೆ ಪರಿಹಾರದ ನೆಪದಲ್ಲಿ ಹಣ ನುಂಗಿದ ಬಗ್ಗೆ ಪತ್ರಿಕೆ ಈ ಹಿಂದೆಯೇ ವರದಿ ಪ್ರಕಟಿಸಿತ್ತು. ಹಗರಣದ ಮುಂದುವರೆದ ಭಾಗವಾಗಿ ನ್ಯಾಯ ಕೇಳಲು ಹೋದ ಅರುಂಧತಿ ನಗರದ ಲಕ್ಷ್ಮಿ ಎಂಬಾಕೆಯ ಮೇಲೆ ಶೆಟ್ಟಿ ಗ್ಯಾಂಗು ಮಾರಣಾಂತಿಕ ಹಲ್ಲೆ ನಡೆಸಿದೆ. ವಿಪರ್ಯಾಸವೆಂದರೆ ವಿನಾಕಾರಣ ಹಲ್ಲೆಗೊಳಗಾದ ಈಕೆಗೆ ಪೊಲೀಸ್ ಠಾಣೆಯಲ್ಲೂ ನ್ಯಾಯ ಸಿಕ್ಕಿಲ್ಲ! ಇದು ಶೆಟ್ಟಿಯ ಪಾಳೇಗಾರಿಕೆಗೆ ಸ್ಪಷ್ಟ ಸಾಕ್ಷಿ. ಶೆಟ್ಟಿ ಪಟಾಲಂ ಸಣ್ಣಗೆ ಹನಿದ ಮಳೆಯಲ್ಲೇ ಪ್ರವಾಹವೆಬ್ಬಿಸಿ ನೆರೆ ಪರಿಹಾರ ನಿಧಿಯಿಂದ ಹಣ ಗುಂಜಿಕೊಂಡಿತ್ತಲ್ಲಾ? ಈ ಸಂದರ್ಭದಲ್ಲಿ ಕೋಕೋನಟ್ ಪಾರ್ಕ್‌ನಂಥ ಶ್ರೀಮಂತ ಏರಿಯಾಗಳಲ್ಲೂ ಫಲಾನುಭವಿಗಳನ್ನು ಸೃಷ್ಟಿಸಲಾಗಿತ್ತು. ಇವರೆಲ್ಲ ಹೆಸರಿಗೆ ಮಾತ್ರ. ಸಮಸ್ತ ಹಣವೂ ಶೆಟ್ಟಿ ಗ್ಯಾಂಗಿನ ಪಾಲಾಗಿತ್ತು. ಈ ಫಲಾನುಭವಿಗಳ ಲಿಸ್ಟಿನಲ್ಲಿ ಅರುಂಧತಿನಗರ ನಿವಾಸಿ ಲಕ್ಷ್ಮಿಯ ಹೆಸರೂ ಇತ್ತು. ಈ ಸಂಬಂಧ ಚೆಕ್ಕೊಂದು ಆಕೆಗೆ ತಲುಪಿತ್ತು. ಅಸಲಿಗೆ ಆಕೆಯ ಮನೆಯಿರುವ ಪ್ರದೇಶದಲ್ಲಿ ಯಾವುದೇ ನೆರೆ ಹಾನಿ ಸಂಭವಿಸಿರಲಿಲ್ಲ. ಆದರೂ ಇದ್ದಕ್ಕಿದ್ದಂತೆ ಚೆಕ್ಕು ಬಂದದ್ದೇ ಹಣ ಇಸಿದುಕೊಳ್ಳಲು ಅಲೆದಾಡಲು ಶುರುವಿಟ್ಟಿದ್ದಾಳೆ. ಲಕ್ಷ್ಮಿಗೆ ಶೆಟ್ಟಿಯ ಚೇಲಾ ಪಡೆಯ ತಾತ್ಸಾರ-ಧಮಕಿಗಳು ಸಿಕ್ಕಿದವೇ ಹೊರತು ಹಣ ಸಿಗಲಿಲ್ಲ.




ಇದೆಲ್ಲದರಿಂದ ರೋಸತ್ತು ಹೋದ ಲಕ್ಷ್ಮಿ ಅಸಹಾಯಕತೆಯ ನಡುವೆಯೂ ಶೆಟ್ಟಿ ಹಾಗೂ ಕಂದಾಯ ನಿರೀಕ್ಷಕ ರಾಮೇಗೌಡನ ವಿರುದ್ಧ ಕಾನೂನು ಸಮರ ಆರಂಭಿಸಿದಳು. ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ರಾಮೇಗೌಡನ ವಿರುದ್ಧ ದೂರು ದಾಖಲಿಸುವುದರೊಂದಿಗೆ ಅದಕ್ಕೆ ಚಾಲನೆ ಸಿಕ್ಕಂತಾಗಿತ್ತು. ದೂರು ರಾಮೇಗೌಡನ ವಿರುದ್ಧ ದಾಖಲಾಗಿದ್ದರೂ ಇನ್ನಿಲ್ಲದಂತೆ ಮಂಡೆಬಿಸಿ ಮಾಡಿಕೊಂಡವನು ಕಾರ್ಪೋರೇಟರ್ ಉಮೇಶ್ ಶೆಟ್ಟಿ. ಸರಿಯಾಗೊಂದು ತನಿಖೆ ನಡೆದರೆ ತನ್ನ ಬುಡಕ್ಕೆ ಅಟಕಾಯಿಸಿಕೊಳ್ಳುತ್ತಾನೆಂಬುದು ಅದಕ್ಕೆ ಕಾರಣ.

ಆ ಸಂಭಾವ್ಯ ಅನಾಹುತ ತಪ್ಪಿಸಿಕೊಳ್ಳಲು ಶೆಟ್ಟಿ ಹಿಡಿದದ್ದು ಪಕ್ಕಾ ಗೂಂಡಾಗಿರಿಯ ಹಾದಿಯನ್ನು. ಲಕ್ಷ್ಮಿ ಗಂಡನನ್ನು ಕಳೆದುಕೊಂಡು ಇಬ್ಬರು ಮಕ್ಕಳೊಂದಿಗೆ ಕಷ್ಟದ ಜೀವನ ನಡೆಸುತ್ತಿರುವವಳು. ಕನಿಷ್ಠ ಮಾನವೀಯತೆಯಿರುವವರು ಆಕೆಯ ಮೇಲೆ ಹಲ್ಲೆಯಂಥ ಕೃತ್ಯಗಳಿಗೆ ಕೈ ಹಾಕುವುದಿಲ್ಲ. ಆದರೆ ಪಾಳೇಗಾರಿಕೆಯನ್ನೇ ಉಸಿರಾಗಿಸಿಕೊಂಡಿರುವ ಶೆಟ್ಟಿ ಮತ್ತವನ ಪಾಪಿ ಪಡೆಗೆ ಅದ್ಯಾವುದೂ ತಾಕುವುದಿಲ್ಲ. ಆದುದರಿಂದಲೇ ಕಳೆದ ತಿಂಗಳು ಶೆಟ್ಟಿ ಚೇಲಾಗಳು ಏಕಾಏಕಿ ಲಕ್ಷ್ಮಿಯ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ. ಲಕ್ಷ್ಮಿಯ ಕೈ ಮುರಿದೇ ಹೋಗಿದೆ. ಶೆಟ್ಟಿಯ ವಂಚನೆ ವಿರುದ್ಧ ತಿರುಗಿ ಬಿದ್ದ ಧನಿಕಾ ಚಲಂ ಹಾಗೂ ಅಯ್ಯಪ್ಪ ಎಂಬವರಿಗೂ ಇದೇ ಗತಿಯಾಗಿದೆ.

ಮಾಡಬಾರದ್ದನ್ನ ಮಾಡಿ ತಿರುಗಿ ಬಿದ್ದವರನ್ನು ವಾಮಮಾರ್ಗದಿಂದ ಹಣಿಯುವ ಶೆಟ್ಟಿಯ ಹಿನ್ನೆಲೆ ಪುಂಡಾಟಿಕೆಯಿಂದಲೇ ಕೂಡಿದೆ. ಮೂಲತಃ ಮಂಗಳೂರಿನವನಾದ ಈತ ಬೆಂಗಳೂರಿಗೆ ಬಂದು ಮಾಡದ ದಂಧೆಗಳೇ ಇಲ್ಲವೇನೋ. ಸಹಜವಾಗಿಯೇ ಇಲ್ಲಿನ ಕೆಲ ಪುಂಡು ಪುಢಾರಿಗಳೂ ಈತನಿಗೆ ಜೊತೆಯಾಗಿದ್ದರು. ಅದರಲ್ಲಿ ಮುರುಗೇಶ್, ಬಾಲ, ಬಡ್ಡಿ ಮಣಿ, ವೆಂಕಟೇಶ್, ಮೋಹನ್, ಮುಮ್ತಾಜ್ ಮುಂತಾದವರು ಶೆಟ್ಟಿಗೆ ಕಾಯಂ ಚೇಲಾಗಳಾಗಿ ಕಟ್ಟಿಕೊಂಡಿದ್ದಾರೆ.

ಈ ಇಡೀ ಗ್ಯಾಂಗಿನ ಮುಖ್ಯ ಕಸುಬು ಬಡ್ಡಿ ಮಾಫಿಯಾ. ಯಾವ ಮೀಟರುಗಳಿಗೂ ನಿಲುಕದಂಥ ಬಡ್ಡಿಗೆ ಹಣ ಬಿಟ್ಟು ವಾಪಸು ಕೊಡದವರನ್ನು ರೌಡಿಸಂ ಮೂಲಕ ಹಣಿಯುವುದು ಈ ಗ್ಯಾಂಗಿಗೆ ಕರಗತ. ಇನ್ನುಳಿದಂತೆ ಲೈವ್‌ಬ್ಯಾಂಡ್ ನಡೆಸುವುದು ಇವರ ಇನ್ನೊಂದು ಕಸುಬು. ಮೆಜೆಸ್ಟಿಕ್‌ನ 'ಸಾಕಿ' ಹೆಸರಿನ ಲೈವ್‌ಬ್ಯಾಂಡ್ ಅದರಲ್ಲಿ ಪ್ರಮುಖವಾದದ್ದು. ಬ್ರಿಗೇಡ್ ರಸ್ತೆ-ಮತ್ತಿತರ ಆಯಕಟ್ಟಿನ ಜಾಗಗಳಲ್ಲೂ ಬ್ರಾಂಚುಗಳಿವೆಯೆಂಬ ಮಾತುಗಳಿವೆ. ಜೊತೆಗೆ ಶೆಟ್ಟಿ ಜೈ ಕರ್ನಾಟಕ ಹೋಟೆಲ್ ಉದ್ಯಮ ಘಟಕದ ಅಧ್ಯಕ್ಷನಾಗಿದ್ದಾತ.

ನಾಗರಬಾವಿ ಜನರ ಗ್ರಹಚಾರವೆಂಬಂತೆ ಶೆಟ್ಟಿ ಬಿಜೆಪಿಯಿಂದ ಬಿಬಿಎಂಪಿ ಚುನಾವಣಾ ಅಖಾಡಕ್ಕಿಳಿದ. ಈ ಸಂದರ್ಭದಲ್ಲಂತೂ ಶೆಟ್ಟಿ ಪಡೆಯ ಆರ್ಭಟಗಳು ವಿಪರೀತಕ್ಕಿಟ್ಟುಕೊಂಡಿತ್ತು. ಬಾಂಬೆಯಿಂದ ಬೌನ್ಸರ್‌ಗಳನ್ನು ಕರೆಸಿ ವಿರೋಧಿಗಳನ್ನ ಹಣಿಯುವ ಕೆಲಸವೂ ಸಾಂಗವಾಗಿ ನಡೆದಿತ್ತು. ತಾನೇ ಹಣ ಚೆಲ್ಲಿ ಒಂದಷ್ಟು ಮಂದಿ ಮುಸ್ಲಿಂ ತಲೆಗಳನ್ನು ಕಣಕ್ಕಿಳಿಸಿ ಓಟು ಚದುರುವಂತೆ ನೋಡಿಕೊಂಡಿದ್ದನೆಂದು ಈ ಭಾಗದ ಜನ ಮಾತಾಡಿಕೊಳ್ಳುತ್ತಾರೆ. ಇನ್ನೂ ಮುಖ್ಯ ಅಂಶವೆಂದರೆ ಅಖಂಡ ಮೂರು ಸಾವಿರದಷ್ಟು ಬೋಗಸ್ ಓಟುಗಳೂ ಶೆಟ್ಟಿಗೆ ಬಿದ್ದಿವೆಯೆಂಬ ಗುಮಾನಿಗಳಿವೆ. ಇದೆಲ್ಲದರಿಂದ ಗೆದ್ದ ಶೆಟ್ಟಿ ಚೆಂದಗೆ ಅಧಿಕಾರ ನಿರ್ವಹಿಸಿದ್ದರೆ ಆ ಮಾತು ಬೇರೆ. ಆದರೆ ಸಿಕ್ಕ ಅಧಿಕಾರವನ್ನು ಪುಂಡಾಟದ ಇನ್ನೊಂದು ಮುಖವಾಡವಾಗಿ ಪರಿವರ್ತಿಸಿಕೊಂಡು ದಿನಕ್ಕೊಂದು ಆಟಕಟ್ಟಿ ಹತ್ತಿದ್ದಾನೆ.



ಇವತ್ತು ಪರಿಸ್ಥಿತಿ ಹೇಗಾಗಿದೆಯೆಂದರೆ, ಈ ಭಾಗದ ಜನತೆ ಅಕ್ಷರಶಃ ಪಾಳೇಗಾರಿಕೆಯ ಕಪಿಮುಷ್ಟಿಗೆ ಸಿಕ್ಕು ಕಂಗಾಲಾಗಿದೆ. ನಾಗರಬಾವಿ, ಗಂಗೊಂಡನಹಳ್ಳಿ, ಅರುಂಧತಿ ನಗರ ಮುಂತಾದೆಡೆಗಳಲ್ಲೆಲ್ಲಾ ಶೆಟ್ಟಿಯ ಚೇಲಾಗಳ ಆರ್ಭಟ ಮೇರೆ ಮೀರಿದೆ. ಮುರುಗೇಶನೆಂಬ ಚೇಲಾನಂತೂ 'ಇದು ನಮ್ಮ ಕೋಟೆ, ಯಾರೂ ಕಾಲಿಡಂಗಿಲ್ಲ' ಅಂತ ಬಹಿರಂಗ ಆವಾಜು ಬಿಡುವಷ್ಟರಮಟ್ಟಿಗೆ ಕೊಬ್ಬಿಹೋಗಿದ್ದಾನೆ.

ಶೆಟ್ಟಿಯ ಇಂಥ ಅಧ್ವಾನಗಳಿಗೆ ಪೊಲೀಸ್ ಇಲಾಖೆಯೂ ಬಲಿ ಬಿದ್ದಿರುವುದು ಖಚಿತಗೊಂಡಿದೆ. ಲಕ್ಷ್ಮಿ ಹಲ್ಲೆಗೊಳಗಾಗಿ ಆಸ್ಪತ್ರೆ ಸೇರಿದ್ದರೆ, ಪುಂಡರ ಬುಡಕ್ಕೊದ್ದು ಜೈಲಿಗೆ ಗದುಮಬೇಕಿದ್ದ ಚಂದ್ರಾಲೇಔಟ್ ಠಾಣೆಯ ಇನ್ಸ್‌ಪೆಕ್ಟರ್ ರಾಜೇಂದ್ರ ಕುಮಾರ್ ಲಕ್ಷ್ಮಿಯ ಮೇಲೆಯೇ ಕೌಂಟರ್ ಕೇಸು ದಾಖಲಿಸಿದ್ದರು! ಇಂಥ ವ್ಯವಸ್ಥೆಯಡಿಯಲ್ಲಿ ಜನರ ರಕ್ಷಣೆಗೆ ನಿಲ್ಲುವವರ್‍ಯಾರೆಂಬುದೇ ಮುಖ್ಯ ಪ್ರಶ್ನೆ.

ಇದೆಲ್ಲದರಿಂದಾಗಿ ಲಕ್ಷ್ಮಿಗೆ ಈ ವ್ಯವಸ್ಥೆಯಲ್ಲಿ ತನಗಾದ ಅನ್ಯಾಯಕ್ಕೆ ನ್ಯಾಯ ಸಿಗಲಾರದೆಂದು ಖಾತರಿಯಾಗಿದೆ. ಕಟ್ಟಕಡೆಯ ಹೋರಾಟವೆಂಬಂತೆ ಮಾನವಹಕ್ಕುಗಳ ಆಯೋಗಕ್ಕೆ ದೂರು ದಾಖಲಿಸಿದ್ದಾಳೆ. ಈ ಹಿಂದೆ ಅಕ್ರಮದ ತನಿಖೆಗೆ ಬಂದಿದ್ದ ಆರ್‌ಓ ಪಂಕಜಾರ ಮೇಲೆಯೂ ಶೆಟ್ಟಿ ಗ್ಯಾಂಗು ಹರಿಹಾಯ್ದಿತ್ತು. ಮಾನವ ಹಕ್ಕುಗಳ ಆಯೋಗದ ಅಧಿಕಾರಿಗಳು ಅದ್ಯಾವುದಕ್ಕೂ ಕೇರ್ ಮಾಡದೆ ತನಿಖೆ ನಡೆಸಿದ್ದಲ್ಲಿ ಶೆಟ್ಟಿ ಗ್ಯಾಂಗು ಜೈಲು ಸೇರುವುದು ಖಚಿತ.

ಹಾಗಾದಲ್ಲಿ ಈ ಭಾಗದ ಜನತೆ ಕೊಂಚ ನೆಮ್ಮದಿಯ ಉಸಿರಾಡಿಯಾರು.

• ವರದಿಗಾರ

ನಾನು ಸಾಚಾ ಅಂತಾನೆ!

ಈ ಹಿಂದೆ ಉಮೇಶ್ ಶೆಟ್ಟಿಯ ಅಕ್ರಮಗಳ ಬಗ್ಗೆ ಬರೆದಾಗ ತನ್ನ ವಿರುದ್ಧ ಮಹಾ ಪಿತೂರಿ ನಡೆಯುತ್ತಿರುವುದಾಗಿಯೂ, ತಾನು ಭಯಂಕರ ಸಾಚಾ ಅಂತಲೂ ಶೆಟ್ಟಿ ಕೊರಗಿದ್ದ. ಸರಿ ಶೆಟ್ಟಿ ಸಾಚಾ ಅಂತಲೇ ಇಟ್ಟುಕೊಳ್ಳೋಣ, ಆದರೆ ತನ್ನ ಕೈಕೆಳಗೆ ಲಕ್ಷಾಂತರ ರೂಪಾಯಿ ಗುಳುಂ ಆಗುತ್ತಿದ್ದರೂ, ಅಸಹಾಯಕ ಹೆಂಗಸಿನ ಮೇಲೆ ಹಲ್ಲೆ ನಡೆದರೂ ಆತ ತೆಪ್ಪಗಿರುವುದೇಕೆ?


ಶೆಟ್ಟಿ ಉತ್ತರಿಸಬೇಕಿದೆ.

ಅಶೋಕ್ V/s ಸೋಮಣ್ಣ


▶▶ 6

ಹುಟ್ಟಾ ಕುತಂತ್ರಿ. ಸ್ವಾಮಿಕಾರ್ಯ ಸ್ವಕಾರ್ಯ ಎರಡನ್ನೂ ಒಟ್ಟೊಟ್ಟಿಗೇ ಸಾಧಿಸಬಲ್ಲ ನಿಸ್ಸೀಮ. ಅಶೋಕ್ ಬಲಿ ಹಾಕಲೆಂದು ಆಯುಧವಾಗಿ ಆತ ಬಳಸಿದ್ದು ತನ್ನ ಶಿಷ್ಯ ಮಂಜುನಾಥ್‌ನನ್ನು!

ಮಂಜುನಾಥ್ ಅಲಿಯಾಸ್ ಮೂಟೆ ಮಂಜ ಎಂಬಾತ ಒಂದಾನೊಂದು ಕಾಲಕ್ಕೆ ಸೋಮಣ್ಣನ ಬಲಗೈ ಬಂಟನಂತಿದ್ದ. 1987 ರ ಹೊತ್ತಿಗೆ ಸೋಮಣ್ಣ ಬಿನ್ನಿಪೇಟೆ ವಾರ್ಡಿನಿಂದ ಜನತಾದಳದ ಕೌನ್ಸಿಲರ್ ಆಗಿದ್ದಾಗ ಆತನಿಗೆ ಪಿಎ ಆಗಿದ್ದವನು ಇದೇ ಮಂಜುನಾಥ. ಜಾತಿಯಲ್ಲಿ ಕುರುಬನಾದರೂ ಸೋಮಣ್ಣನ ಪಕ್ಕಾ ಛೇಲಾ. ಈತನ ನಿಷ್ಠೆ ನಿಯತ್ತನ್ನು ಕಂಡೇ ಸೋಮಣ್ಣ ಆರ್‌ಪಿಸಿ ಲೇಔಟಿನ 7 ನೇ ಮುಖ್ಯ ರಸ್ತೆಯಲ್ಲಿದ್ದ ತನ್ನ ಅಣ್ಣನ ಮಗ ರಾಜೇಂದ್ರ ಎಂಬ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಯ (ಸಿಟಿಓ) ಮನೆಯನ್ನು ಬಿಟ್ಟು ಕೊಟ್ಟ. ಅದು ಕೂಡ ಲಿಟಿಗೇಷನ್ ಪ್ರಾಪರ್ಟಿಯೆ. ಯಾರೋ ಚೀಟಿ ನಡೆಸುತ್ತಿದ್ದ ಹೆಂಗಸೊಬ್ಬಳು ಹತ್ತಾರು ಜನಕ್ಕೆ ಕೈ ಎತ್ತಿ ಕೊನೆಗೆ ಸಿಟಿಓ ರಾಜೇಂದ್ರರ ಮಡಿಲಿಗೆ ತನ್ನ ಆಸ್ತಿಯನ್ನು ಹಾಕಿ ನಾಪತ್ತೆಯಾದಾಗ, ಸಾಲಗಾರರ ಬಾಯಿ ಮುಚ್ಚಿಸಲೆಂದೇ ಸೋಮಣ್ಣ ಆ ಮನೆಗೆ ಛೇಲಾ ಮಂಜುನಾಥನನ್ನು ತಂದಿಟ್ಟ.



ಅವತ್ತಿನಿಂದ ಸೋಮಣ್ಣನ ಅಣ್ಣನ ಮಗನ ಮನೆಯನ್ನೇ ತನ್ನ ಖಾಯಂ ವಿಳಾಸವನ್ನಾಗಿ ಮಾಡಿಕೊಂಡ ಮಂಜುನಾಥ್ ಇವತ್ತಿಗೂ ಸೋಮಣ್ಣನ ಪರಮಾಪ್ತನೇ. ಇಂಥ ನಂಬಿಕಸ್ತ ಭಟ್ಟಂಗಿಯನ್ನು ಮುಂದೆ ಬಿಟ್ಟು ಅಶೋಕ್ ಬುಡಕ್ಕೆ ಕೊಳ್ಳಿಯಿಟ್ಟ ಸೋಮಣ್ಣನಿಗೆ ನೆಪಕ್ಕೆ ಸಿಕ್ಕಿದ್ದು ಡಾಲರ್ಸ್ ಕಾಲೋನಿಯ ಡೀನೋಟಿಫಿಕೇಷನ್. ಅದು ಲೊಟ್ಟೆಗೊಲ್ಲಹಳ್ಳಿಯ ಸರ್ವೆ ನಂಬರ್ 10/1ರ 9 ಗುಂಟೆ ಮತ್ತು ಸ.ನಂ. 10/117 ರಲ್ಲಿದ್ದ 14 ಗುಂಟೆಯ ಬಿಡಿಎ ಆಸ್ತಿ. ಈ ಪೈಕಿ ಸ.ನಂ. 10/1 ರ 9 ಗುಂಟೆ ಮುನಿಸ್ವಾಮಪ್ಪ ಎಂಬಾತನಿಗೆ ಸೇರಿದರೆ ಸ.ನಂ. 10/117 ನ 14 ಗುಂಟೆ ಅದೇ ಲೊಟ್ಟೆಗೊಲ್ಲಹಳ್ಳಿಯ ಮುನಿವೆಂಕಟಪ್ಪನಿಗೆ ಸೇರಿತ್ತು. 1978 ರಲ್ಲೇ ಈ ಭೂಮಿಯನ್ನು ಆರ್‌ಎಂವಿ ಎರಡನೇ ಹಂತದ ಡಾಲರ್ಸ್ ಕಾಲೋನಿಗೆಂದು ಬಿಡಿಎ ವಶಪಡಿಸಿಕೊಂಡಿತ್ತು. 6(1) ನೋಟಿಫಿಕೇಷನ್ ಮುಗಿದು 16(2) ರ ಐತೀರ್ಪು ಕೂಡಾ ಆಗಿ ಬಿಡಿಎಯ ಭೂಸ್ವಾಧೀನ ಪ್ರಕ್ರಿಯೆ ಯಾವತ್ತೋ ಮುಗಿದು ಅದನ್ನು ಸೈಟು ವಿಂಗಡನೆಗೆಂದು ಬಿಡಿಎ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿತ್ತು. ಬಿಡಿಎ ಸ್ವಾಧೀನದ ವಿರುದ್ಧ ಮುನಿಸ್ವಾಮಪ್ಪ ಮತ್ತು ಮುನಿವೆಂಕಟಪ್ಪ ಕೋರ್ಟಿಗೆ ಹೋದರಾದರೂ ಅದರ ಪರಿಹಾರದ ಮೊತ್ತವನ್ನು ಬಿಡಿಎ ಕೋರ್ಟಿಗೆ ಜಮೆ ಮಾಡಿ ಯಾವುದೋ ಕಾಲವಾಗಿತ್ತು. ಕಾನೂನಿನ ಯಾವ ಆಯಾಮದಿಂದಲೂ ಇದನ್ನು ಡೀನೋಟಿಫೈ ಮಾಡುವಂತಿರಲಿಲ್ಲ.



ಆದರೆ ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಈ ಸೊತ್ತಿನ ಮೇಲೆ ಅಶೋಕ್ ಕಣ್ಣುಬಿತ್ತು. ಈ ಹೊತ್ತಿಗಾಗಲೇ ಈ ಎರಡೂ ನಿವೇಶನಗಳ ಮೇಲೆ ಹೆಣ್ಣೂರು ಬಾಣಸವಾಡಿ ರಿಂಗ್ ರಸ್ತೆ ಬೇರೆ ಹಾದುಹೋಗಿತ್ತು. ಅಂಥ ಪ್ರತಿಷ್ಠಿತ ರಿಂಗ್ ರಸ್ತೆಯಲ್ಲಿ ಬಿಗ್ ಬಜಾರ್‌ನ ಪಕ್ಕಕ್ಕೇ ಅರ್ಧ ಎಕರೆಗೂ ಹೆಚ್ಚು ವಿಸ್ತೀರ್ಣದ ಈ ಸೊತ್ತಿನ ಸದ್ಯದ ಮಾರುಕಟ್ಟೆ ರೇಟೇ 25ಕೋಟಿಗೂ ಅಧಿಕ. ಇದನ್ನು ಅಶೋಕ್ ತಮ್ಮ ಹೆಸರಿಗೆ ಕ್ರಯ ಮಾಡಿಕೊಂಡಿದ್ದು 2003 ರಲ್ಲಿ. ಮೊದಲು ಮುನಿಸ್ವಾಮಪ್ಪನ ಮಕ್ಕಳು ಮೊಮ್ಮಕ್ಕಳಿಂದ 9 ಗುಂಟೆಯನ್ನು ತಮ್ಮ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡ ಅಶೋಕ್ ಮತ್ತೆ 2008 ರಲ್ಲಿ ಪಕ್ಕದ 14 ಗುಂಟೆಯನ್ನೂ ಮುನಿವೆಂಕಟಪ್ಪನ ವಂಶಸ್ಥರಿಂದ ಬರೆಸಿಕೊಂಡ.

ವಿಚಿತ್ರವೆಂದರೆ 25 ಕೋಟಿ ಬೆಲೆ ಬಾಳುವ ಈ ಬಿಡಿಎ ಸೊತ್ತನ್ನು ಮುನಿಸ್ವಾಮಪ್ಪ ಮತ್ತು ಮುನಿವೆಂಕಟಪ್ಪನ ಮಕ್ಕಳಿಂದ ಅಶೋಕ್ ಖರೀದಿಸಿದ್ದು ಕೇವಲ 45 ಲಕ್ಷಕ್ಕೆ!

ಎಷ್ಟೆಂದರೂ ಬಿಡಿಎ ಸೊತ್ತಲ್ಲವೆ. ಬಂದಷ್ಟು ಬರಲಿ ಎಂದೇ ಮುನಿಸ್ವಾಮಪ್ಪ ಮತ್ತು ಮುನಿವೆಂಕಟಪ್ಪನ ಮಕ್ಕಳು ಬರೆದುಕೊಟ್ಟರು. ಇದನ್ನು ಅಶೋಕ್ ಡೀನೋಟಿಫೈ ಮಾಡಿಕೊಂಡಿದ್ದು ಯಡ್ಡಿ ಮುಖ್ಯಮಂತ್ರಿಯಾಗಿ ತಾನು ಸಾರಿಗೆ ಮಂತ್ರಿಯಾದ ನಂತರವೆ. ಅಂದರೆ 2009 ರಲ್ಲಿ. ಇಲ್ಲಿ ಲೂಟಿಯಾಗಿದ್ದು ಬಿಡಿಎ ಸೊತ್ತು, ನಷ್ಟವಾಗಿದ್ದು ಬೊಕ್ಕಸಕ್ಕೆ. ಅಶೋಕ್ ತನ್ನ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದು, ಅದಕ್ಕೆ ಮುಖ್ಯಮಂತ್ರಿ ಯಡ್ಡಿ ಕೈಜೋಡಿಸಿದ್ದು ಎಲ್ಲವೂ ದಾಖಲೆ ಪ್ರಕಾರವೇ ಸಾಬೀತಾಗಿತ್ತು. ವಿಶೇಷವೆಂದರೆ ಡೀನೋಟಿಫೈ ಮಾಡುವಾಗ ಮುಖ್ಯಮಂತ್ರಿ ಯಡ್ಡಿ ಅಶೋಕ್ ಹೆಸರನ್ನು ಮುಚ್ಚಿಟ್ಟು ಮೂಲ ಮಾಲೀಕರಾದ ಮುನಿಸ್ವಾಮಪ್ಪ ಮತ್ತು ಮುನಿವೆಂಕಟಪ್ಪನವರ ಹೆಸರಲ್ಲಿ ಡೀನೋಟಿಫಿಕೇಷನ್ ಮಾಡಿದ್ದರು.

ಅಲ್ಲಿಗೆ ಯಡ್ಡಿಯ ಪಾಪದಲ್ಲಿ ಅಶೋಕ್, ಅಶೋಕ್ ಪಾಪಕ್ಕೆ ಯಡ್ಡಿ ಪರಸ್ಪರ ಕೈಜೋಡಿಸಿದಂತಾಯ್ತು. ಭೂಕಬಳಿಕೆಯ ಕೂಪದಲ್ಲಿ ಮುಖ್ಯಮಂತ್ರಿ, ಗೃಹಮಂತ್ರಿ ಇಬ್ಬರೂ ಬಿದ್ದು ಒದ್ದಾಡುತ್ತಿದ್ದಾರೆ. ಅಶೋಕ್ ಬಚಾವಾಗಬೇಕೆಂದರೆ ಯಡ್ಡಿ ಛೂಬಿಟ್ಟ ಸೋಮಣ್ಣನನ್ನು ವಾಪಸ್ಸು ಕರೆಸಿಕೊಳ್ಳಬೇಕು. ಹಾಗೇ ಮುಖ್ಯಮಂತ್ರಿ ಯಡ್ಡಿಯನ್ನು ಪಾರು ಮಾಡಲು ಅಶೋಕ್ ದೇವೇಗೌಡರ ಮನವೊಲಿಸಬೇಕು. ಎರಡೂ ಬಣಗಳು ಪರಸ್ಪರ ಕೊರಳಿಗೆ ಉರುಳು ಹಾಕಿಕೊಂಡೇ ವಿನಾಶಕ್ಕೆ ಕೈಹಾಕಿದ್ದಾರೆ. ಯಾರನ್ನು ಯಾರು ಮುಗಿಸುತ್ತಾರೋ ಅಥವಾ ಇಬ್ಬರೂ ಒಟ್ಟೊಟ್ಟಿಗೇ ಹಳ್ಳಕ್ಕೆ ಬೀಳುತ್ತಾರೋ ಬಲ್ಲವರ್‍ಯಾರು?


ಇಲ್ಲಿ ನಾಮಕಾವಸ್ತೆಗೆ ಮಂಜುನಾಥ್ ಕೇಸು ಹಾಕಿದ ವ್ಯಕ್ತಿಯಂತೆ ನಟಿಸುತ್ತಿದ್ದಾನಷ್ಟೆ. ಆತನಿಗಿರುವುದು ಸೋಮಣ್ಣನ ಮೇಲಿನ ನಿಷ್ಠೆಯೇ ಹೊರತು ಅಶೋಕ್ ಭೂಮಿ ದೋಚಿದ್ದಾಗಲಿ, ಸರ್ಕಾರದ ಭ್ರಷ್ಟಾಚಾರವಾಗಲಿ ಮುಖ್ಯವಲ್ಲ. ಯಡ್ಡಿಗೆ ದೇವೇಗೌಡ-ಅನಂತ್ ಕೂಟಕ್ಕೊಂದು ಕಲ್ಲು ಹಾಕುವ ದುರಾಸೆ. ಸೋಮಣ್ಣನಿಗೆ ಗುರು ಯಡ್ಡಿಯ ಹಿತಕಾಯುವುದರ ಜೊತೆಗೆ ತನ್ನ ಬೇಳೆಯನ್ನೂ ಬೇಯಿಸಿಕೊಳ್ಳುವ ಕುಯುಕ್ತಿ. ಇಲ್ಲಿ ಅನಂತ್ ಕುಮಾರ್ ಯಡ್ಡಿ ವಿರುದ್ಧ ಬಂದೂಕಿಟ್ಟಿರುವುದು ಅಶೋಕ್ ಹೆಗಲ ಮೇಲೆ. ಗಣಿ ರೆಡ್ಡಿಗಳು ತಂದಿಟ್ಟು ತಮಾಷೆ ನೋಡುತ್ತಿದ್ದಾರೆ. ಯಡ್ಡಿಯ ಗತಿ ಏನಾಗುತ್ತೋ ಅಥವಾ ಅಶೋಕ್ ಕೂಡ ಜೊತೆಗೇ ಮುಳುಗುತ್ತಾರೋ, ಅನಂತ್, ಈಶ್ವರಪ್ಪ ಅಂತಿಮವಾಗಿ ಕುಮಾರಸ್ವಾಮಿಯ ಜೊತೆ ಕೈಜೋಡಿಸುತ್ತಾರೋ, ಇಲ್ಲಾ ಸೋಮಣ್ಣ ಇಟ್ಟ ಬತ್ತಿಗೆ ಬಿಜೆಪಿ ಸರ್ಕಾರವೇ ನಿಕಾಲಿಯಾಗುತ್ತೋ ಬಲ್ಲವರ್‍ಯಾರು?


ಮೇಲುನೋಟಕ್ಕೆ ಅಶೋಕ್ ಮತ್ತು ಸೋಮಣ್ಣರ ನಡುವಿನ ಕುರ್ಚಿ ಕಾಳಗದಂತೆ ಇಡೀ ವೃತ್ತಾಂತ ಭಾಸವಾದರೂ ಅದರ ಆಳದಲ್ಲಿರುವುದು ಒಕ್ಕಲಿಗ-ಲಿಂಗಾಯತರ ಮುಸುಕಿನ ಗುದ್ದಾಟವೆ. ಸೋಮಣ್ಣನೇ ಬಲಿಯಾಗುತ್ತಾನಾ ಅಥವಾ ಅಶೋಕ್ ನೆಲಕಚ್ಚುತ್ತಾನಾ ಗೊತ್ತಿಲ್ಲ. ಯಾರೇ ಬಿದ್ದರೂ ಯಾರೇ ಎದ್ದರೂ ಅದರ ಕಪಟ ನಾಟಕ ಸೂತ್ರಧಾರಿ ಮಾತ್ರ ಅನಂತ್‌ಕುಮಾರ್!

• ರಾ. ಸೋಮನಾಥ್

ಉತ್ತರ ಕನ್ನಡ: ಜೆಡಿಎಸ್‌ನಲ್ಲಿ ಕುರ್ಚಿಗಾಗಿ ಕಿತ್ತಾಟ

ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಲಾಗಾಯ್ತಿನಿಂದಲೂ ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂಥ ಲೋ-ಪ್ರೊಫೈಲ್ ಪಾರ್ಟಿ. ಯಾವಾಗ ರಾಮಕೃಷ್ಣ ಹೆಗಡೆಯ ನಿಷ್ಠಾವಂತ ಶಿಷ್ಯನಾಗಿದ್ದ ಪ್ರಮೋದ್ ಹೆಗಡೆ ಎಂಬ ದಗಲ್ಬಾಜಿ ಧೀರ ಜಿಲ್ಲಾ ಜೆಡಿಎಸ್‌ನ ಅಧ್ಯಕ್ಷನಾದನೋ ಆಗಲೇ ಈ ಪಕ್ಷಕ್ಕಿಲ್ಲಿ ಭವಿಷ್ಯವಿಲ್ಲ ಎಂಬುದು ಖಾತ್ರಿಯಾಗಿ ಹೋಗಿತ್ತು. ಆದರೂ ಕುಮಟೆಯ ದಿನಕರ ಶೆಟ್ಟಿ ಮತ್ತು ಹಳಿಯಾಳದ ಸುನಿಲ್ ಹೆಗಡೆ ಸ್ಥಳೀಯ ರಾಜಕಾರಣದ 'ರಾಸಾಯನಿಕ ಶಾಸ್ತ್ರ'ದಿಂದಾಗಿ ಅದ್ಹೇಗೋ ಗೆದ್ದು ಶಾಸಕರಾಗಿದ್ದರು. ಪಕ್ಷ ಮಾತ್ರ ಎಲ್ಲಿತ್ತೋ ಅಲ್ಲೇ ಇದೆ. ಹಾಗೇ ಎದುಸಿರು ಬಿಡುತ್ತಿದೆ!


ಬಂ


ಕುಮಾರಸ್ವಾಮಿ


ಉತ್ತರ ಕನ್ನಡ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕಿರೀಟ ...ಗೆ ಸಿಗಬಹುದು? ಹಾಲಿ ಅಧ್ಯಕ್ಷ ಪ್ರಮೋದ್ ... ಎಂಬ ಭಾಷಣ ಭೂಪನ ಮೇಲೆ ಕುಮಾರಣ್ಣನಿಗೆ ...ರುವ ಗುಮಾನಿಯಾದರೂ ಏನು? ಇಬ್ಬರು ಶಾಸಕ ... ಜಿಲ್ಲಾ ಜೆಡಿಎಸ್ ಉದ್ಧಾರ ಏಕಾಗು... ಜಿಲ್ಲೆಯಲ್ಲಿ ಒಂಚೂರು ಪ್ರಭಾವ ...ದಿರುವ 'ಬಂ' ಜೆಡಿಎಸ್ ಸೇರಿರು...ಂದ ಆತನ ಅನುಯಾಯಿ ಒಬ್ಬನೇ ...ಊ ಜಿಲ್ಲಾಧ್ಯಕ್ಷನಾಗಬಹುದಾ?

...ಂಥದೊಂದು ಪ್ರಶ್ನಾವಳಿಗಳ ಚರ್ಚೆ ... ಕನ್ನಡದ ರಾಜಕೀಯ ಪಡಸಾಲೆ ... ನಡೆಯುತ್ತಿದೆ. ಜಿಲ್ಲೆಯ ಮಟ್ಟಿಗೆ ...ಯ್ತಿನಿಂದಲೂ ಜೆಡಿಎಸ್ ಆಟ...ು ಲೆಕ್ಕಕ್ಕಿಲ್ಲ ಎಂಬಂಥ ಲೋ-...ೈಲ್ ಪಾರ್ಟಿ. ಯಾವಾಗ ರಾಮ...ಹೆಗಡೆಯ ನಿಷ್ಠಾವಂತ ಶಿಷ್ಯನಾಗಿದ್ದ ...ೋದ್ ಹೆಗಡೆ ಎಂಬ ದಗಲ್ಬಾಜಿ ಧೀರ ಜಿಲ್ಲಾ ...ಸ್‌ನ ಅಧ್ಯಕ್ಷನಾದನೋ ಆಗಲೇ ಈ ಪಕ್ಷಕ್ಕಿಲ್ಲಿ ...ಷ್ಯವಿಲ್ಲ ಎಂಬುದು ಖಾತ್ರಿಯಾಗಿ ಹೋಗಿತ್ತು. ಆದರೂ ...ಟೆಯ ದಿನಕರ ಶೆಟ್ಟಿ ಮತ್ತು ಹಳಿಯಾಳದ ಸುನಿಲ್ ... ಸ್ಥಳೀಯ ರಾಜಕಾರಣದ 'ರಾಸಾಯನಿಕ ಶಾಸ್ತ್ರ'ದಿಂದಾಗಿ ...ಗೋ ಗೆದ್ದು ಶಾಸಕರಾಗಿದ್ದರು. ಪಕ್ಷ ಮಾತ್ರ ಎಲ್ಲಿತ್ತೋ ... ಇದೆ. ಹಾಗೇ ಎದುಸಿರು ಬಿಡುತ್ತಿದೆ!


...ಜಿಲ್ಲಾ ಜೆಡಿಎಸ್ ಅಧ್ಯಕ್ಷ ಪ್ರಮೋದ್ ಹೆಗಡೆ ...ುಲ್ಲದ ಬುದ್ಧಿಜೀವಿ. ಯಾವ ವೇದಿಕೆಗೆ ಒಯ್ದು ...ದರೂ ಸಮಯಕ್ಕೆ ತಕ್ಕಂತೆ ಭಾಷಣ ...ು ರಂಜಿಸಬಲ್ಲ ಜಾಣ. ಅದು ...ನಲ್ ಸಭೆಯೇ ಇರಲಿ, ಸೆಕ್ಯುಲರ್ ...ರಂಭವೇ ಆಗಿರಲಿ, ಅಥವಾ ಕಾಂಗ್ರೆಸ್ ...ೀ, ಬಿಜೆಪಿಯೇ ಇರಲಿ, ಜೆಡಿಎಸ್ ...ಊ ಪರವಾಗಿಲ್ಲ ಹೋದಲ್ಲೆಲ್ಲಾ ...ಾಟಿಕೆ ಮಾಡುವ ಪ್ರಮೋದ್ ಹೆಗಡೆ ...ಾ ಬಿಗಿದು ಚಪ್ಪಾಳೆ ಗಿಟ್ಟಿಸುತ್ತಾರೆ. ... ಈ ಚಪ್ಪಾಳೆ ಎಂದೂ ಆತ ಸೇರಿದ ...ಮತಗಳಾಗಿದಿಲ್ಲ. ಎಲ್ಲ ಪಕ್ಷ ಹೊಕ್ಕು ...ಬಂದಿರುವ ಪ್ರಮೋದ್, ಈ ...ುಂಟೆ ಗುಣಧರ್ಮದಿಂದಾಗಿಯೇ ಯಾವ ಪಕ್ಷದಿಂದ ... ಎಮ್ಮೆಲ್ಲೆ ಎಲೆಕ್ಷನ್‌ಗೆ ನಿಂತರೂ ಗೆಲ್ಲಲಾಗುತ್ತಿಲ್ಲ. ...ಜೇ ಆಶೀರ್ವಾದದಿಂದ ಉತ್ತರ ಕನ್ನಡದ ಪ್ರಥಮ ...ಪರಿಷತ್ ಉಪಾಧ್ಯಕ್ಷನಾಗಿದ್ದೇ ಈತನ ದೊಡ್ಡ ಸಾಧನೆ!

...ಮೋದ್ ಹೆಗಡೆ ದೈಹಿಕವಾಗಷ್ಟೇ ಜೆಡಿಎಸ್ ...ರೆ. ಆತನ ಕನಸು-ಮನಸೆಲ್ಲವೂ ಬಿಜೆಪಿಯಲ್ಲಿದೆ. ...ಗಿ ಸ್ವಜಾತಿ ಬಂಧು ಮಂತ್ರಿ ಕಾಗೇರಿ ಉಸ್ತುವಾರಿಯಲ್ಲಿ ...ಥ ಅನಾಹುತ-ಅನಾಚಾರ. ಜಿಲ್ಲೆಯಲ್ಲಾದರೂ ...ೋದ್ ಉಸಿರೆತ್ತುವ ಸ್ಥಿತಿಯಲ್ಲಿಲ್ಲ; ...ಸ್ ಅನ್ನು ಪ್ರತಿಭಟನೆಗೆ ಇಳಿಸುವ ...ಾ ಆತನಿಗಿಲ್ಲ. ಪ್ರಮೋದ್ ಹೆಗಡೆ ...ನಾದ ನಂತರ ಜಿಲ್ಲಾ ಜೆಡಿಎಸ್ ...ಲವಾಗುತ್ತಲೇ ಹೋಯ್ತು. ಎಲೆಕ್ಷನ್ ...ಲ್ಲೆಲ್ಲ ಬಂದ ಪಾರ್ಟಿ ಫಂಡ್ ಅನ್ನು ...ಮೋದ್ ಹೆಗಡೆ, ಶಾಸಕದ್ವಯರಾದ ... ಶೆಟ್ಟಿ ಮತ್ತು ಸುನಿಲ್ ಹೆಗಡೆ ...ಾಗಿ ಮೂರು ಪಾಲು ಮಾಡಿ ...ದರಷ್ಟೇ. ಹೀಗಾಗಿ ಜಿಲ್ಲಾ ಪಂಚಾಯ್ತಿ ...ನ್‌ನಲ್ಲಿ ಪಕ್ಷ ಹೇಳಹೆಸರಿಲ್ಲದಂತೆ ...ಮಾಗಿ ಹೋಯ್ತು, ಕುಮಟೆಯಲ್ಲಿ ಗೆದ್ದವನೊಬ್ಬ ...ಳ್ಳಚಿಟ್ಟಿ ಮ್ಯಾನಿಂಗ್‌ನಿಂದ ಕೂಡಿಹಾಕಿದ ಕಾಸಿಂದ ... ಸದಸ್ಯನಾಗಿದ್ದಾನೆಯೇ ವಿನಃ ಶಾಸಕ-ಜಿಲ್ಲಾ ಅಧ್ಯಕ್ಷನ ...ಶ್ರ-ಪ್ರಭಾವದಿಂದಲ್ಲ.


...ಜಿಲ್ಲಾ ಜೆಡಿಎಸ್ ಅಧ್ಯಕ್ಷತೆ ನನಗೆ ಹೊರೆಯಾಗಿದೆ ... ಮುಕ್ತಿ ಕೊಡಿ...' ಎಂದು ಪ್ರಮೋದ್ ಹಲವು ದಿನದಿಂದ ಕುಮಾರಣ್ಣನ ಮುಂದೆ ಗೋಗರೆಯುತ್ತಲೇ ಇದ್ದಾರೆ. ಆದರೆ ಹೊಸ ಅಧ್ಯಕ್ಷನ ಆಯ್ಕೆಗೆ ಪ್ರಯತ್ನ ನಡೆದಾಗೆಲ್ಲ ಅವ ಬೇಡ, ಇವ ಬೇಡ ಎಂದು ಕಿತಾಪತಿ ಮಾಡೋದು ಮಾತ್ರ ಬಿಟ್ಟಿಲ್ಲ, ಇತ್ತ ಪಾರ್ಟಿ ಕಟ್ಟಲಿಕ್ಕೂ ಶುದ್ಧ ಮನಸಿನಿಂದ ಕೆಲಸ ಮಾಡುತ್ತಿಲ್ಲ, ದಿನ ರಾತ್ರಿಯಾದರೆ ಮುಖ್ಯಮಂತ್ರಿ ಯಡ್ಡಿಯ ಕಾರ್ಯದರ್ಶಿ ಬಿ.ಜೆ.ಪುಟ್ಟಸ್ವಾಮಿಗೆ ಫೋನ್ ಹಚ್ಚಿ ತಾಸುಗಟ್ಟಲೇ ಪ್ರಮೋದ್ ಮಾತಾಡುತ್ತಾರೆ. ಹೆಗಡೆಜೀಯ ಲೋಕಶಕ್ತಿಯ ಸಂಗಾತಿಗಳಿವರು. ಪ್ರಮೋದ್ ಹೆಗಡೆಯ 'ಸಂಕಲ್ಪ' ಎಂಬ ಸಾಂಸ್ಕೃತಿಕ ಕಾರ್ಯಕ್ರಮದ ಮುಖ್ಯ ಅತಿಥಿ ಆಗುವತನಕವೂ ಇವರ ಸ್ನೇಹ ಚಾಲ್ತಿಯಲ್ಲಿದೆ. ಯಡ್ಡಿ ಮಾನ ರಕ್ಷಣೆಗೆ ಒಂದಿಲ್ಲೊಂದು ಆರೋಪ ಕುಮಾರಣ್ಣ-ದೇವೇಗೌಡರ ಮೇಲೆ ಮಾಡುವ ಪುಟ್ಟಸ್ವಾಮಿ ಜತೆ ನಿರಂತರ ಸಂಪರ್ಕ ಪ್ರಮೋದ್ ಹೆಗಡೆ ಹೊಂದಿರುವುದು ವಿಚಿತ್ರವಾದರೂ ಸತ್ಯ. ಇದು ಜೆಡಿಎಸ್‌ನ ಯುವರಾಜ-ಮಹಾರಾಜರನ್ನು ಕೆರಳಿಸದೇ ಬಿಟ್ಟೀತಾ?


ಬಸವರಾಜ್ ಓಸಿಮಠ

ಪ್ರಮೋದ್ ಹೆಗಡೆಯನ್ನು ಜಿಲ್ಲಾಧ್ಯಕ್ಷತೆಯಿಂದ ತೆಗೆಯುವುದಂತೂ ಖಾತ್ರಿ. ಆದರೆ ಯಾರಿಗೆ ಪಟ್ಟಾಭಿಷೇಕ ಮಾಡುವುದು? ಮಾಜಿ ಎಮ್ಮೆಲ್ಸಿ-ಹಾಲಿ ಎಮ್ಮೆಲ್ಲೆ ಸುನೀಲ್ ಹೆಗಡೆ ಅಪ್ಪ ವಿ.ಡಿ. ಹೆಗಡೆಗೆ ಧೈರ್ಯವಿಲ್ಲ, ಶಾಸಕರಾದ ಸುನೀಲ್ ದಿನಕರ್‌ಗೆ ಸ್ವ-ಕ್ಷೇತ್ರದಲ್ಲಿ ಕಡಿಮೆಯಾಗುತ್ತಿರುವ ವರ್ಚಸ್ಸು-ಆಗುತ್ತಿರುವ ಡ್ಯಾಮೇಜು ಕಂಟ್ರೋಲ್ ಮಾಡಿಕೊಂಡರೆ ಸಾಕಾಗಿದೆ. ಹಾಗೆಯೇ ಈ ಶಾಸಕದ್ವಯರು ಕಾಸು ಬಿಚ್ಚೋ ಆಸಾಮಿಗಳಲ್ಲ. ಪಾರ್ಟಿ ಫಂಡೇ ಸ್ವಾಹಾ ಮಾಡುವ ಹಪಾಹಪಿಯವರು. ಈ ದಿನಕರ-ಸುನೀಲ್ ಮತ್ತು ಬಸವರಾಜ ಹೊರಟ್ಟಿಗಳಿಂದ ಜಿಲ್ಲೆಯಲ್ಲಿ ಪಾರ್ಟಿ ಬೆಳೆಸುವ ಮೂರು ಕಾಸಿನ ಕೆಲಸವೂ ಆಗಿಲ್ಲ, ಪಕ್ಷ ಬೆಳೆಸಬೇಕು- ತಾವು ಜಿಲ್ಲೆಯ ಮಟ್ಟದಲ್ಲಿ ಪ್ರಭಾವಿಗಳಾಗಬೇಕೆಂಬ ಯೋಚನೆಯೂ ಇಲ್ಲದ ದಂಡಪಿಂಡಗಳಿವರು. ಈ ಶಾಸಕರಿಗೇನಾದರೂ ಸ್ವಪಾರ್ಟಿ ಬಗ್ಗೆ ಗೌರವ-ಅಭಿಮಾನ-ರಾಜಕೀಯ ಜಾಣ್ಮೆ ಇದ್ದಿದ್ದರೆ ಜೆಡಿಎಸ್‌ಗೆ ಜಿಲ್ಲೆಯಲ್ಲಿ ಈ ದುರ್ಗತಿ ಬರುತ್ತಲೇ ಇರಲಿಲ್ಲ. ದುರಂತವೆಂದರೆ ಕುಮಾರಣ್ಣನಿಗೂ ಈ ಮೈಗಳ್ಳರ ಮೇಲೆ ನಿಗಾ ಇಲ್ಲವಾಗಿದೆ!!


ದಿನಕರ ಶೆಟ್ಟಿ

ತಮಾಷೆಯೆಂದರೆ, ಸುನಿಲ್ ಹೆಗಡೆ ರಾಜ್ಯ ಯುವ ಜೆಡಿಎಸ್ ಅಧ್ಯಕ್ಷ ಬೇರೆ. ಆದರೆ ಈತ ಈವರೆಗೆ ಒಂದೇ ಒಂದು ಮೀಟಿಂಗ್ ಕರೆದಿಲ್ಲ, ಸ್ವಂತ ಜಿಲ್ಲೆಯ ಯುವ ಘಟಕಕ್ಕಾದರೂ ಚೈತನ್ಯ ನೀಡಬೇಕೆಂದು ಯೋಚಿಸಿಯೇ ಇಲ್ಲ, ಈ ಕರ್ಮಗೇಡಿ ಪ್ರಮೋದ್ ಹೆಗಡೆ, ಗಣಪಯ್ಯ ಗೌಡ, ದಿನಕರ ಶೆಟ್ಟಿ, ಸುನಿಲ್ ಹೆಗಡೆ ವಗೈರೆ ಸೋಕಾಲ್ಡ್ ಲೀಡರ್‌ಗಳಿಗಿಂತ ಮುಂಡಗೋಡದ ಬಸವರಾಜ್ ಓಸಿಮಠ ಬೆಟರ್. 1977ರಿಂದ ಇವತ್ತಿನವರೆಗೂ ಜನತಾ ಪಕ್ಷ-ದಳ-ಜೆಡಿಎಸ್‌ಗಳಲ್ಲೇ ಇರುವಾತ ಸುನಿಲ್ ಹೆಗಡೆ-ಅವನಪ್ಪ ವಿ.ಡಿ.ಹೆಗಡೆಗಳು ದೇಶಪಾಂಡೆಯ ಗುಲಾಂ ಗ್ಯಾಂಗಿನ ಬ್ರಿಗೇಡಿಯರ್‌ಗಳಾಗಿ ಹಳಿಯಾಲ ಲೂಟಿ ಮಾಡುತ್ತಿದ್ದಾಗ ಈ ಬಸು 'ಕಳ್ಳ...ಕಳ್ಳ...' ಎಂದು ಬೊಬ್ಬೆ ಹೊಡೆಯುತ್ತಿದ್ದ. ಯುವ ಜನ ಒಕ್ಕೂಟ, ವಾಲಿಬಾಲ್ ಕ್ರೀಡಾಕೂಟ ಸಂಘಟನೆಗೆಂದು ಇಡೀ ಜಿಲ್ಲೆ ಓಡಾಡಿ ಸಂಪರ್ಕ ಇಟ್ಟುಕೊಂಡಿರುವಾತ. ಇವತ್ತಿಗೂ ಜಿಲ್ಲೆಯಾದ್ಯಂತ ಬಸುಗೆ ಆ ಕಾಂಟ್ಯಾಕ್ಟುಗಳಿವೆ. ಸುನಿಲ್ ಹೆಗಡೆಯನ್ನು ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷನಾಗಿ ಮಾಡಿದ್ದೇ ಈ ಬಸು. ಆದರೆ ಈ ಸುನಿಲ್‌ಗೆ ಇದೆಲ್ಲ ಸಮರ್ಥವಾಗಿ ಬಳಸಿಕೊಂಡು ಜಿಲ್ಲೆಯಲ್ಲಿ ಯುವ ನಾಯಕನಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ, ಯಾವಾಗ ದೇಶಪಾಂಡೆ ಜತೆಯಲ್ಲಿ ಪಾಲಿಗಾಗಿ ಜಗಳವಾಯ್ತೋ ಆಗ ಕಾಂಗ್ರೆಸ್ ಬಿಟ್ಟು ಅಪ್ಪ-ಮಗ ಜೆಡಿಎಸ್ ಸೇರಿಕೊಂಡಿದ್ದರು. ದೇಶಪಾಂಡೆ ಮೇಲಿನ ಬೇಸರದಿಂದ ಜನ ಸುನಿಲ್‌ನನ್ನು ಅನಿವಾರ್ಯವಾಗಿ ಶಾಸಕನಾಗಿಸಿದ್ದಾರಷ್ಟೆ!


ಪ್ರಮೋದ್ ಹೆಗಡೆ

ಬಸುಗೆ ಜೆಡಿಎಸ್ ಅಧ್ಯಕ್ಷನಾಗಿ ಜಿಲ್ಲೆಯ ಉದ್ದಗಲಕ್ಕೆ ಪಕ್ಷ ಕಟ್ಟಬೇಕೆಂಬ ಪ್ರಾಮಾಣಿಕ ಮನಸ್ಸಿದೆ. ಪಾರ್ಟಿ ಹಣ ಕೊಡದಿದ್ದರೂ ಪಕ್ಷ ಬೆಳೆಸಲು ಕೈಯಿಂದ ಕಾಸು ಖರ್ಚು ಮಾಡುವ ಸಂಕಲ್ಪವೂ ಆತ ಮಾಡಿದ್ದಾರೆ. ಆದರೆ ಸಂಘಟನಾ ಚತುರನಾದ ಬಸು ಜಿಲ್ಲಾಧ್ಯಕ್ಷನಾದರೆ ತಮ್ಮನ್ನೆಲ್ಲ ಓವರ್‌ಟೇಕ್ ಮಾಡುತ್ತಾನೆ ಎಂಬ ಭಯ ಪೊಕ್ಕು ಶಾಸಕ ಸುನಿಲ್ ಮತ್ತು ದಿನಕರನನ್ನು ಕಾಡುತ್ತಿದೆ. ಪ್ರಮೋದ್ ಹೆಗಡೆ-ವಿ.ಡಿ.ಹೆಗಡೆಗೂ ಬಸು ಬೇಡವಾಗಿದ್ದಾನೆ. ಜಿಲ್ಲೆಯ ಮಟ್ಟಿಗೆ ಅತೀ ಸಣ್ಣ ಸಮುದಾಯವಾದ ಲಿಂಗಾಯತ ಜಾತಿಗೆ ಸೇರಿದ ಬಸು ಅಧ್ಯಕ್ಷನಾದರೆ ತಮಗೇನೂ ಲಾಭವಿಲ್ಲ ಎಂಬ ದೂರಾಲೋಚನೆ ಈ ಶಾಸಕರಿಗೆ. ಹಾಗಾಗಿ ದಿನಕರ ಶೆಟ್ಟಿ ಹಾಗೊಮ್ಮೆ ಬಸುನನ್ನೇ ಅಧ್ಯಕ್ಷನಾಗಿಸೋದಾದ್ರೆ ತನ್ನ ಕ್ಷೇತ್ರದಲ್ಲಿ ಗಣನೀಯವಾಗಿರುವ ಪಟಗಾರ (ಒಕ್ಕಲಿಗ) ಜಾತಿಯವನೊಬ್ಬನಿಗೆ ಕಾರ್ಯಾಧ್ಯಕ್ಷ ಹುದ್ದೆ ಕರುಣಿಸುವಂತೆ ಕುಮಾರಣ್ಣನ ಮುಂದೆ ಮಂಡಿಯೂರಿ ಗೋಗರೆದಿದ್ದಾರೆ!


ಸುನಿಲ್ ಹೆಗಡೆ

ಇದಕ್ಕೆ ಸಮಾನಾಂತರವಾಗಿ ಜಿಲ್ಲಾ ಜೆಡಿಎಸ್‌ನಲ್ಲಿ 'ಬಂ' ಎಫೆಕ್ಟ್ ಆಗುತ್ತಿದೆ. ಈ 'ಬಂ' ಉತ್ತರ ಕನ್ನಡದ ಅಳಿಮಯ್ಯ. ಆತನ ಜಾತಿ ಬಂಧುಗಳಾದ ದೀವರು (ಈಡಿಗರು) ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕೆಲವು ಅಸೆಂಬ್ಲಿ ಕ್ಷೇತ್ರದಲ್ಲಿ ನಿರ್ಣಾಯಕರು ಈ ದೀವರು. 'ಬಂ'ರನ್ನು ಇವತ್ತಿಗೂ ಆರಾಧನಾ ಭಾವದಿಂದ ನೋಡುವ ಜನರು ಜಿಲ್ಲೆಯಲ್ಲಿದ್ದಾರೆ. ಹೀಗಾಗಿ 'ಬಂ' ಪಾರ್ಟಿ ಬದಲಿಸಿದಾಗಲೇ ಅನೇಕ ಅಯೋಗ್ಯರಿಗೆ ಲಾಭ ಆಗಿದ್ದೂ ಇದೆ. ಅರ್ಹರಿಗೆ ಅನ್ಯಾಯವಾಗಿದ್ದೂ ಇದೆ. 'ಬಂ' ಪಕ್ಷಾಂತರ ಮಾಡಿದಾಗೆಲ್ಲ ಕಣ್ಮುಚ್ಚಿ ಆತನ ಭಾವಮೈದ ಭೀಮಣ್ಣ ನಾಯ್ಕ ಎಂಬ ಬಂಡಲ್ ಪುಢಾರಿ ಹಿಂಬಾಲಿಸಿದ್ದರು. ಈ ಬಾರಿ ಆತನನ್ನು ದೇಶಪಾಂಡೆ ಹೈಜಾಕ್ ಮಾಡಿ ಡಿಸಿಸಿ ಪ್ರೆಸಿಡೆಂಟ್ ಮಾಡಿದ್ದಾರೆ. ಹಾಗಾಗಿ ಆತ ಈ ಬಾರಿ ತಾನು ಭಾವನ ಹಿಂಬಾಲಿಸಲಾರೆನೆಂದು ಖಡಾಖಂಡಿತ ಹೇಳಿಬಿಟ್ಟಿದ್ದಾನೆ. ಆತನೇನಾದರೂ ಜೆಡಿಎಸ್‌ಗೆ ಬಂದಿದ್ದರೆ ಜಿಲ್ಲಾಧ್ಯಕ್ಷನಾಗುವುದು ಗ್ಯಾರಂಟಿಯಿತ್ತು!

'ಬಂ'ಗೆ ಉತ್ತರ ಕನ್ನಡ, ಶಿವಮೊಗ್ಗ, ಹಾವೇರಿ, ದಾವಣಗೆರೆ ಜಿಲ್ಲೆಯಲ್ಲಿ ಜೆಡಿಎಸ್ ಕಟ್ಟುವ ಜವಾಬ್ದಾರಿ ದೇವೇಗೌಡರು ವಹಿಸಿದ್ದಾರಂತೆ. ಈ ಜಿಲ್ಲೆಗಳ ಜೆಡಿಎಸ್ ಆಗು-ಹೋಗುಗಳಲ್ಲಿ 'ಬಂ'ರದೇ ಅಂತಿಮವಾಣಿ. ಉತ್ತರ ಕನ್ನಡದ ಜಿಲ್ಲಾ ಜೆಡಿಎಸ್ ಅಧ್ಯಕ್ಷತೆ ದೀಕ್ಷೆ ಕೊಡಲು 'ಬಂ' ಸ್ವಜಾತಿ ಧೀರನೊಬ್ಬನ ಹುಡುಕುತ್ತಿದ್ದಾರೆ. ಸಿದ್ದಾಪುರದ ಕೆ.ಜಿ.ನಾಯ್ಕ ಹಸ್ವಂತೆ ಎಂಬ ಮೊದ್ಮಣಿಗೆ ಆ ಛಾನ್ಸ್ ಎಂಬ ಗುಸುಗುಸು ಎದ್ದಿದೆ. ಈ ಹಸ್ವಂತೆ ನಾಯ್ಕ 'ಬಂ' ಸಿಎಂ ಆಗಿದ್ದಾಗ ಡಿಸಿಪಿ ಅಧ್ಯಕ್ಷನಾಗಿ ಒಂದಿಷ್ಟು ಗೆಬರಿಕೊಂಡು ಕಣ್ಮರೆಯಾಗಿದ್ದ. ಆ ನಂತರ ಮ್ಯಾಗಿ ಹಿಂದೆ ಓಡಾಡಿ ದೇಶಪಾಂಡೆ ಕೆಂಗಣ್ಣಿಗೆ ತುತ್ತಾಗಿದ್ದ. 'ಬಂ' ಈ ಹಸ್ವಂತೆ ನಾಯ್ಕನನ್ನು ಜಿಲ್ಲಾಧ್ಯಕ್ಷತೆಗೆ ತರುತ್ತೇನೆಂದರೆ ಎದುರಾಡುವ ತಾಕತ್ತು ದಿನಕರ-ಸುನಿಲ್-ವಿಡಿ-ಪ್ರಮೋದ್... ವಗೈರೆ ಯಾರಿಗೂ ಜಿಲ್ಲಾ ಜೆಡಿಎಸ್‌ನಲ್ಲಿ ಇಲ್ಲ ಬಿಡಿ.

ಆದರೆ ಇವತ್ತಿಗೂ 'ಬಂ' ಶಿಷ್ಯವರ್ಗ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಸೇರಿಲ್ಲ. 'ಬಂ'ರನ್ನು ಜಿಲ್ಲೆಗೆ ಕರೆಸಿ ಆತನ ಸಮ್ಮುಖದಲ್ಲಿ ಪಕ್ಷಾಂತರ ಮಾಡಿ ಸದ್ದು-ಸುದ್ದಿ ಸ್ಕೆಚ್ ಹಾಕಿಡಲಾಗಿದೆ. ಇನ್ನೊಂದೆಡೆ ಕಾಂಗ್ರೆಸ್‌ನಿಂದ ಹೊರಹಾಕಲ್ಪಟ್ಟಿರುವ ಹಸ್ವಂತೆಗೆ ಜೆಡಿಎಸ್ ಕಿರೀಟ ಕಟ್ಟುವ ಕಟಿಪಿಟಿಯೂ ನಡೆಯುತ್ತಿದೆ. ಆದರೆ ಹಸ್ವಂತೆ ನಾಯ್ಕ ಬಸವರಾಜ್ ಓಸಿಮಠನ ಎದುರು ಹ್ಯಾಪನಂಥೋನು. ಸಿದ್ದಾಪುರದಾಚೆಗೆ ಅಪರಿಚಿತ. ಈತ 'ಬಂ'ರ ಅಜ್ಞಾನುಧಾರಿ ಗುಲಾಮನಾಗಿ ಪೀಠದಲ್ಲಿ ಪವಡಿಸಬಲ್ಲನಷ್ಟೇ. ಪಾರ್ಟಿ ಜಿಲ್ಲೆಯಾದ್ಯಾಂತ ಸಂಘಟಿಸುವ ತಾಕತ್ತು ಈತನಿಗಿಲ್ಲ.

ಹೇಗೆ ನೋಡಿದರೂ ಬಸವರಾಜ್ ಓಸೀಮಠ ಜಿಲಾ ಜೆಡಿಎಸ್‌ಗೆ ಸಮರ್ಥ ನಾಯಕನಾಗಬಲ್ಲ ಅನ್ನಿಸುತ್ತದೆ. ಉತ್ಸಾಹ-ತಾರುಣ್ಯ-ಪಕ್ಷನಿಷ್ಠೆ ಮತ್ತು ಜಾತ್ಯತೀತ ಗುಣಧರ್ಮದ ಬಸು ಜೆಡಿಎಸ್ ಅಧ್ಯಕ್ಷನಾದರೆ ಅದಕ್ಕೊಂದು ಚೈತನ್ಯ ಕೊಡಬಲ್ಲ. ಹಾಗಂತ ಜಿಲ್ಲಾ ಜೆಡಿಎಸ್‌ನ ಶೇಕಡ 90ರಷ್ಟು ಕಾರ್ಯಕರ್ತರು ಹೇಳುತ್ತಾರೆ. 'ಬಂ' ಹಿಂದೆಲ್ಲ ಪಕ್ಷ ಕಟ್ಟಿದಾಗ-ಕೆಡವಿದಾಗ ತನ್ನ ತುಕಡಿಗೆ ಜಾತಿಬಂಧುಗಳನ್ನೇ ಅಧ್ಯಕ್ಷರನ್ನಾಗಿಸಿ ಎಡವಿದ್ದಾರೆ. ಆ ತಪ್ಪು ಮಾಗಿದ-ಹಿರಿಯ ಅನುಭವಿ 'ಬಂ' ಮತ್ತೆ ಮಾಡಿದರೆ ಜಿಲ್ಲಾ ಜೆಡಿಎಸ್‌ಗೆ ಕಂಟಕ ಖಾತ್ರಿ! ಜಿಲ್ಲೆಯಲ್ಲಿ ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಪ್ರಾರಬ್ಧ ತಪ್ಪಬೇಕೆಂದಿದ್ದರೆ 'ಬಂ'-ಕುಮಾರಸ್ವಾಮಿ ಮಮಕಾರ-ಮೂರ್ಖತನ ಬಿಟ್ಟು ಯೋಚಿಸಬೇಕಷ್ಟೇ!

• ನಹುಶ

...ೈಡ್ ಪ್ರಕಾಶನದ ಕೊಡುಗೆ
...ೇ 2011 ರಿಂದ ಆರಂಭ
ಜಾಬ್ ನ್ಯೂಸ್
...ಾಕ್ಷಿಕ ಪತ್ರಿಕೆ

ಕರ್ನಾಟಕ ಮತ್ತು ಭಾರತದಾದ್ಯಂತ ಸಿಗುವ ಉದ್ಯೋಗಾವಕಾಶಗಳ ಬಗ್ಗೆ update ಆದಂತಹ ನಿಖರ ಮಾಹಿತಿಗಳನ್ನು ಒದಗಿಸುವ ಪಾಕ್ಷಿಕ ಪತ್ರಿಕೆ. ನೌಕರಿ ಹುಡುಕುವ ಹಾಗೂ ನೌಕರರನ್ನು ಹುಡುಕುವವರ ನಡುವಿನ ಸ್ನೇಹ ಸೇತುವೆಯಾಗಲಿದೆ ಜಾಬ್ ನ್ಯೂಸ್.

ಕನ್ನಡದ ವಿಶಿಷ್ಟ ಪಾಕ್ಷಿಕ ಉದ್ಯೋಗ ಮಾಹಿತಿ ಪತ್ರಿಕೆಯಾಗುವತ್ತ ದಿಟ್ಟ ಹೆಜ್ಜೆ ಇಡಲಿದೆ.

ಜಾಬ್ ನ್ಯೂಸ್
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ವ್ಯವಸ್ಥಾಪಕರು
ನಂ. 9, ಇ.ಎ.ಟಿ. ರಸ್ತೆ, ಬೆಂಗಳೂರು
ಫೋನ್: 2267427, 98803-02817

ಬೇಕಾಗಿದ್ದಾರೆ
ಉಪಸಂಪಾದಕರು
ಜಾಬ್ ನ್ಯೂಸ್ ಪಾಕ್ಷಿಕ ಪತ್ರಿಕೆಗೆ ಕೆಲಸ ಮಾಡಬಲ್ಲ ನುರಿತವರು ಬೇಕಾಗಿದ್ದಾರೆ. ಅರ್ಹರು ಪೂರ್ಣ ವಿವರಗಳೊಂದಿಗೆ ಏಪ್ರಿಲ್ 10 ರೊಳಗಾಗಿ ಅರ್ಜಿ ಸಲ್ಲಿಸಿ
ವ್ಯವಸ್ಥಾಪಕರು
ನಂ. 9, ಇ.ಎ.ಟಿ. ರಸ್ತೆ ಲಂಕೇಶ್ ಕಟ್ಟಡ ಬಸವನಗುಡಿ ಬೆಂಗಳೂರು -4

ನಾಗತಿ ಜೊತೆ ಕೇರಳದಲ್ಲಾರು ದಿನ


ಕೇರಳ ಪ್ರವಾಸದಲ್ಲಿ ನಾಗತಿ ಮತ್ತು ಪ್ರವಾಸಿಗರು....

ನಾನು ನನ್ನ ಜೀವನದಲ್ಲಿ ಪ್ರವಾಸ ಅಂತ ಎಲ್ಲೂ ಹೋಗಿಲ್ಲ. ಮಿಡ್ಲ್ ಸ್ಕೂಲಿನಲ್ಲಿದ್ದಾಗ ಒಮ್ಮೆ ಹೆಡ್ ಮಾಸ್ತರು ಮಕ್ಕಳನ್ನು ತಲಕಾಡಿಗೆ ಕರೆದುಕೊಂಡು ಹೋಗಿದ್ದರು. ಆದರೆ ಮೂರು ರೂಪಾಯಿ ಕೊಡಲಾಗದ್ದಕ್ಕೆ ನನ್ನೊಬ್ಬನನ್ನು ಬಿಟ್ಟು ಇಡೀ ಶಾಲೆಯೇ ಹೋಗಿಬಂತು. ಹೈಸ್ಕೂಲಿನಲ್ಲಿದ್ದಾಗಲೂ ಹಾಗೇ ಆಯಿತು. ಆಗಲೂ ಹತ್ತು ರೂಪಾಯಿ ಕೊಡಲಾಗದೆ ಧರ್ಮಸ್ಥಳ, ಉಡುಪಿ ಮತ್ತು ಮಂಗಳೂರು ನೋಡುವುದನ್ನು ತಪ್ಪಿಸಿಕೊಂಡೆ. ಬಾಲ್ಯದಲ್ಲಿ ಅನುಭವಿಸಿದ ಈ ತೀವ್ರ ನಿರಾಶೆಯ ಕಾರಣಕ್ಕೋ ಏನೋ, ಮುಂದೆಂದೂ ನನಗೆ ಪ್ರವಾಸ ಹೋಗುವ ಉಮೇದೇ ಬರಲಿಲ್ಲ. ಆದರೆ ನನ್ನ ಸಹಪಾಠಿ ನಾಗತಿಹಳ್ಳಿ ಚಂದ್ರಶೇಖರ ಭೂಗೋಳವನ್ನು ಹದಿನೆಂಟುಬಾರಿ ಸುತ್ತಿ ಬಂದಿದ್ದಾನೆ. ಅವನು ನೋಡದೆ ಇರುವ ದೇಶವೇ ಇಲ್ಲವೇನೊ!

ಇದೇ ನಾಗತಿಹಳ್ಳಿ ಚಂದ್ರಶೇಖರ ಕಳೆದ ಆರು ವರ್ಷಗಳಿಂದ ನಮ್ಮ ಏರಿಯಾದ ರೈತರನ್ನು ಪ್ರವಾಸ ಕರೆದುಕೊಂಡು ಹೋಗಿಬರುತ್ತಿದ್ದಾನೆ. ಕಳೆದ ವರ್ಷ ರೈತ ಪ್ರವಾಸದಲ್ಲಿ ನನ್ನನ್ನೂ ಸೇರಿಸಿಕೊಂಡು ಮಹಾರಾಷ್ಟ್ರದ ಹಲವಾರು ಸ್ಥಳಗಳನ್ನು ತೋರಿಸಿಕೊಂಡು ಬಂದ. ಆ ಅನುಭವವನ್ನು ನಾನಿನ್ನೂ ದಾಖಲಿಸಿಲ್ಲ.

ಈ ಬಾರಿ ಚಂದ್ರ ಕೇರಳದ ಪ್ರವಾಸಕ್ಕೆ ನಲವತ್ತು ಜನ ರೈತರನ್ನು ಆಯ್ಕೆ ಮಾಡಿಕೊಂಡು ಅವರೊಟ್ಟಿಗೆ ನನ್ನನ್ನೂ ಸೇರಿಸಿಕೊಂಡಿದ್ದ. ಏಕೆಂದರೆ, ಕಳೆದ ವರ್ಷ ನಾನು "ತಮಿಳುನಾಡಿನ ಒಂದು ಹಳ್ಳಿ, ಕೇರಳದ ಒಂದು ಹಳ್ಳಿ ನೋಡಿದರೆ ಸಾಕು, ಇನ್ನೆಲ್ಲೂ ಬರುವುದಿಲ್ಲ" ಎಂದು ಚಂದ್ರನಿಗೆ ಹೇಳಿದ್ದೆ. ಆದ್ದರಿಂದ ಈ ಬಾರಿ ಕೇರಳದ ಪ್ರವಾಸಕ್ಕೆ ನನ್ನನ್ನೂ ಸೇರಿಸಿಕೊಂಡಿದ್ದ. ರೈತರ ಪ್ರವಾಸದಲ್ಲಿ 23 ಜನ ಮಹಿಳೆಯರೂ ಇದ್ದರು. ಅವರೆಲ್ಲಾ ಕಳ್ಳುಬಳ್ಳಿಯಂತೆ ಕಂಡಿದ್ದರಿಂದ ಯಾವ ಸಂಕೋಚವೂ ಇರದೇ ಅವರ ಜೊತೆ ಕಟ್ಟೆಪುರಾಣ ನಡೆಸಬಹುದಿತ್ತು.

ನಮ್ಮನ್ನು ಕರ್ನಾಟಕದಿಂದ ಹೊತ್ತು ಹೊರಟ ಬಸ್ಸು ಕೇರಳದ ಗಡಿಯಲ್ಲಿ ನಿಂತಿತು. ಅಲ್ಲಿಂದ ಕೇರಳಕ್ಕೆ ನಮ್ಮನ್ನು ಸಾಗಿಸುವ ಬಸ್ಸು ಅತ್ತಮುಂದಾಗಿ ಮುಖ ಮಾಡಿ ಮುನಿಸಿಕೊಂಡಂತೆ ನಿಂತಿತ್ತು, ಶುದ್ಧ ಬಿಳಿ ಬಣ್ಣದ ಆ ಬಸ್ಸಿನ ಹೆಸರು ನಿರ್ಮಲ. ನಮ್ಮ ಗಡಿಯೊಳಕ್ಕೆ ಬರದೆ ಅಲ್ಲೇ ಏಕೆ ನಿಂತಿದ್ದೀರಿ ಎಂದು ಡ್ರೈವರ್‌ನನ್ನು ಕೇವಲಾಗಿ, ಅಕ್ಕಪಕ್ಕದ ರಾಜ್ಯದ ಪ್ರವಾಸಿ ಬಸ್ಸುಗಳು ಕರ್ನಾಟಕ ಪ್ರವೇಶ ಮಾಡಿದರೆ 24 ಸಾವಿರ ಟ್ಯಾಕ್ಸ್ ಕಟ್ಟಬೇಕು ಎಂದ. ಅದಕ್ಕೊ ಏನೋ, ಇದ್ದಕ್ಕಿದ್ದಂತೆ ಅಕ್ಕಪಕ್ಕ ರಾಜ್ಯದ ಪ್ರವಾಸಿ ಬಸ್ಸುಗಳು ಮೊದಲಿನಷ್ಟು ಕರ್ನಾಟಕದಲ್ಲಿ ಇವತ್ತು ಕಾಣುತ್ತಿಲ್ಲ. ಕರ್ನಾಟಕದ ಪ್ರವಾಸೋದ್ಯಮದ ಇಲಾಖೆ ತನ್ನ ನಿರರ್ಥಕ ಖರ್ಚುಗಳನ್ನು ಕಡಿಮೆ ಮಾಡಿ, ಅನ್ಯ ರಾಜ್ಯದ ಬಸ್ಸುಗಳಿಗೆ ರಿಯಾಯಿತಿ ಕೊಟ್ಟರೆ ನಮ್ಮ ಬೇಲೂರು, ಹಳೇಬೀಡು, ಶ್ರವಣಬೆಳಗುಳ, ಮೈಸೂರು ಪ್ರವಾಸಿಗರಿಂದ ತುಂಬಿರುತ್ತವೆ ಅನ್ನಿಸಿತು.

ನಾವು ಕಾಸರಗೋಡು ತಲುಪಿದ ನಂತರ ಅಲ್ಲಿನ ಪ್ರಖ್ಯಾತ ವ್ಯಕ್ತಿ ಕಾಸರಗೋಡು ಚಿನ್ನ ಪ್ರತ್ಯಕ್ಷನಾದ. ಹಲವಾರು ಚಿತ್ರಗಳಲ್ಲಿ ನಟಿಸಿರುವ ಚಿನ್ನ ನಾಗಾಭರಣರ ಸಿನಿಮಾವೊಂದರಲ್ಲಿ ಹೀರೋ ಆಗಿ ನಟಿಸಿದ್ದ. ಈಗ ಕೊಂಕಣಿ ಚಿತ್ರವೊಂದನ್ನು ತೆಗೆಯುವ ತಯಾರಿ ನಡೆಸಿದ್ದಾರೆ. ಪ್ರತಿ ಮಾತಿಗೂ ತಮಾಷೆ ಮಾಡುವ ಚಿನ್ನ ಯಾರಿಗೂ ಮೊದಲ ಭೇಟಿಯವನಾಗಿ ಕಾಣುವುದಿಲ್ಲ. ಅವರ ಪ್ರತಿನಿಧಿಯಾಗಿ ಬಂದ ಟಿ.ವಿ. ಗಂಗಾಧರನ್ ಸಾರಥ್ಯದಲ್ಲಿ ನಮ್ಮ ಪ್ರವಾಸ ಮುಂದುವರಿಯಿತು.

ಈ ಕೇರಳದ ಚರಿತ್ರೆ ನನ್ನನ್ನು ದಂಗುಬಡಿಸಿದೆ. ಪಶ್ಚಿಮದಿಂದ ಬಂದವರೆಲ್ಲಾ ಕೇರಳದ ಮೇಲೆ ಆಕ್ರಮಣ ಮಾಡಿದ್ದಾರೆ. ಒಂಬೈನೂರು ವರ್ಷಗಳಷ್ಟು ಹಿಂದೆ ಕೇರಳದ ಸುಖಾಂತರ ಬಂದ ಪ್ರವಾಸಿಗರು ದಾಖಲಿಸಿರುವಂತೆ ...ರಳ ಒಂದು ರೀತಿ ಚಿತ್ರಲೆ ರಾಜ್ಯವಾಗಿತ್ತು, ಸಾಮಾನ್ಯ ...ಿಂದ ರಾಜನವರೆಗೂ ಪಾಲಿಸುತ್ತಿದ್ದ ನಿಯಮವೆಂದರೆ ...ಸ್ತಿಯ ಹಕ್ಕು ಹೆಣ್ಣುಮಕ್ಕಳ ಪಾಲಾಗುತ್ತಿತ್ತು, ರಾಜನೂ ... ತನ್ನ ರಾಜ್ಯಾಧಿಕಾರವನ್ನು ತಂಗಿಯ ಮಗನಿಗೆ ವಹಿಸುತ್ತಿದ್ದ, ಹೆಣ್ಣು ತವರು ಮನೆಯಲ್ಲೇ ಇದ್ದ ಕಾರಣಕ್ಕೆ ಗಂಡಿನ ಶೋಷಣೆ ನಡೆದಿದೆ. ಒಬ್ಬ ಹೆಣ್ಣು ಕನಿಷ್ಠ ಏಳೆಂಟು ಗಂಡಂದಿರನ್ನು ಹೊಂದಿರುತ್ತಿದ್ದಳಂತೆ. ಆದ್ದರಿಂದ ಕೇರಳದ ಭಾಷೆಯನ್ನು ಆಡಿಕೊಳ್ಳುವ ನಮ್ಮವರು "ರಾತ್ರಿ ನಾನು ಮಲಗಿದಾಗ ಒಂದು ಗಂಡ, ಮುಂಜಾನೆ ಏಳುವಾಗ ಆರು ಗಂಡ" ಎಂದು ಹಾಸ್ಯ ಮಾಡುತ್ತಾರೆ. ಅದೇನೇ ಇರಲಿ, ಕೇರಳದ ಹೆಣ್ಣು ಆಗಿನ ಕಾಲಕ್ಕೆ ಕಂಡಿರುವ ಸುಖ ನೆನೆಸಿಕೊಂಡು ಕರುಬಿದರೂ ಗಂಡಂದಿರು ಅನುಭವಿಸಿರಬಹುದಾದ ಸರದಿ ಮತ್ಸರ, ವಿರಹ, ಖಿನ್ನತೆ ನೆನೆಸಿಕೊಂಡರೆ ಪಾಪ ಅನ್ನಿಸದೆ ಇರದು. ಆಕೆ ಇಷ್ಟಪಟ್ಟರೆ ವಾರಸುದಾರನಿಗೆ ಮಗು ಕೊಡಬಹುದಿತ್ತಂತೆ ಇಲ್ಲದಿದ್ದರೆ ಇಲ್ಲ. ಅಲ್ಲಿ ಬೀಜದ ಅಧಿಪತ್ಯಕ್ಕಿಂತ ನೆಲದ್ದೇ ಕಾರುಬಾರು. ಒಂದು ರೀತಿ ಅದು ಸರಿ. ಈಗಲೂ ಡೈವರ್ಸಿಗಳ ಮಕ್ಕಳು ತಾಯಿಯ ಕಡೆ ಓಡುತ್ತವೆಯಲ್ಲವೆ.

ಶತಮಾನಗಳ ಹಿಂದೆ ಇಲ್ಲಿ ಆಚರಣೆಯಲ್ಲಿದ್ದ ಅಸ್ಪೃಶ್ಯತೆ ಮೈ ನಡುಗಿಸುತ್ತದೆ. ಅಸ್ಪೃಶ್ಯನೊಬ್ಬ ಬರುತ್ತಿರಬೇಕಾದರೆ ತನ್ನ ಇರುವನ್ನು ಕೂಗಿಕೊಂಡು ಬರಬೇಕಿತ್ತು, ಆಕಸ್ಮಾತ್ ಮುಟ್ಟಿಸಿಕೊಂಡ ಸವರ್ಣೀಯ ಹೆಣ್ಣು "ನನ್ನನ್ನು ಕೀಳು ಕುಲದವರು ಮುಟ್ಟಿದ್ದಾನೆ" ಎಂದು ಕೂಗಿಕೊಂಡು ಓಡುತ್ತಿದ್ದಳಂತೆ. ಇಲ್ಲಿನ ಪುರೋಹಿತಶಾಹಿಗಳು– ನಂಬೂದ್ರಿಗಳು ಆಚರಿಸಿದ ಅಸ್ಪೃಶ್ಯತೆಯ ಫಲವಾಗಿ ಎಲ್ಲ ಶೂದ್ರ ಸಮೂಹ ಕ್ರಿಶ್ಚಿಯನ್ನರಾಗಿ, ಮುಸ್ಲಿಮರಾಗಿ ಮತಾಂತರ ಹೊಂದಿಬಿಟ್ಟಿದ್ದಾರೆ. ಆದರೂ ಕೂಡ ಪುರೋಹಿತಶಾಹಿ ತಮ್ಮ ಹೊಟ್ಟೆಪಾಡಿನ ದೇವಸ್ಥಾನಗಳನ್ನು ಹಾಗೇ ನಡೆಸಿಕೊಂಡು ಬರುತ್ತಿದ್ದಾರೆ.

ಪಶ್ಚಿಮಕ್ಕೆ ಬೆನ್ನು ಮಾಡಿಕೊಂಡು ಕುಳಿತಂತಿರುವ ಕರ್ನಾಟಕದ ಕೆಳಗಿರುವ ಕೇರಳ ಪುಟ್ಟ ರಾಜ್ಯ, ಸಾಕ್ಷರತೆಯಲ್ಲಿ ನೂರು ಪರ್ಸೆಂಟ್. ವಿದ್ಯೆ ಸಿಕ್ಕಿದ ಕಾರಣಕ್ಕೆ ಕೇರಳಿಗರು ಬೇರೆ ದೇಶಗಳನ್ನು ಹುಡುಕುತ್ತ ಹೊರಟುಹೋಗಿದ್ದಾರೆ. ಹೀಗೆ ಹೋದವರ ಸಂಖ್ಯೆ ಸುಮಾರು ಐವತ್ತು ಲಕ್ಷ. ನಮ್ಮ ಕರ್ನಾಟಕಕ್ಕೂ ಕೇರಳಿಗರು ಯಾವ ಪರಿ ನುಗ್ಗಿದ್ದಾರೆಂದರೆ ಫಲವತ್ತಾದ ಕಾಡನ್ನು ಆಕ್ರಮಿಸಿಕೊಂಡು ಶುಂಠಿ ಬೆಳೆದಿದ್ದಾರೆ. ಸ್ಥಳೀಯರು ಪ್ರತಿಭಟಿಸಿ ಕಿರುಕುಳ ಕೊಟ್ಟರೆ, ಅದು ಕೂಡಲೇ ಕೇರಳದ ಸರ್ಕಾರವನ್ನು ತಲುಪುತ್ತೆ, ನಂತರ ಕರ್ನಾಟಕ ಸರ್ಕಾರಕ್ಕೆ ಎಚ್ಚರಿಕೆ ಬರುತ್ತೆ, ಕೂಡಲೇ ಸಂಬಂಧಪಟ್ಟ ಜಿಲ್ಲೆಯ ಎಸ್ಪಿಗೆ ಮೆಸೇಜು ಹೋಗಿ ಕೇರಳದವರಿಗೆ ರಕ್ಷಣೆ ಸಿಗುತ್ತದೆ. ಹೀಗಾಗಿ ಶಿವಮೊಗ್ಗ, ಚಿಕ್ಕಮಗಳೂರು, ನರಸಿಂಹರಾಜಪುರದ ಕಾಡೆಲ್ಲಾ ಬರಿದಾಗಿ ಹೋಯ್ತು.

ನರಸಿಂಹರಾಜಪುರದ ಒಬ್ಬ ಮರಗಳ್ಳ ಮಲಯಾಳಿಯನ್ನು ಎಂತಹ ಅಧಿಕಾರಿ ಬಂದರೂ ಹಿಡಿಯಲಾಗಲಿಲ್ಲ. ಒಂದು ಕಾಲದಲ್ಲಿ ಅಲ್ಲಿ ಡಿಸಿಯಾಗಿದ್ದ ಎಚ್.ಎಲ್. ನಾಗೇಗೌಡರು ಅವನನ್ನು ಬಲಿಹಾಕಲು ಯತ್ನಿಸಿದ ಕತೆಯನ್ನು ದಾಖಲಿಸಿದ್ದಾರೆ. ಆತನ ಮಕ್ಕಳೀಗ ರಾಜಕೀಯದಲ್ಲಿ ಗಣ್ಯರು. ಕೇರಳದಲ್ಲಿ ವಿಪರೀತ ಜನಸಂಖ್ಯೆ; ಕಾಸರಗೋಡಿನಿಂದ ತಿರುವನಂತಪುರದವರೆಗೂ ಸುಮಾರು ಆರುನೂರು ಕಿ.ಮೀ.ವರೆಗಿನ ರಾಷ್ಟ್ರೀಯ ಹೆದ್ದಾರಿಯ ಎಡಬಲದಲ್ಲೂ ಮನೆಗಳಿದ್ದವು. ಅಲ್ಲೆಲ್ಲೂ ಹಳ್ಳಿ ಕಾಣಲಿಲ್ಲ, ಕರ್ನಾಟಕದಲ್ಲಿ ಒಂದು ಚದರ ಕಿ.ಮೀ.ಗೆ 250 ಜನರಿದ್ದರೆ ಕೇರಳದಲ್ಲಿ 850 ಜನರಿದ್ದಾರಂತೆ.

ಇಲ್ಲಿನ ಮನೆಗಳೆಲ್ಲಾ ತೋಟದ ಮನೆಗಳು. ಒಂದಕ್ಕೊಂದು ಮೀರಿಸುವ ಕಲಾಕೃತಿಗಳು. ಹಾಗಾಗಿ ಗುಂಪಾದ ಹಳ್ಳಿಗಳು, ಬಾರೆ ಜಮೀನು ಸಿಕ್ಕಲೇ ಇಲ್ಲ, ಸಂಜೆ ಊರ ಕಡೆ ಬರುತ್ತಿರುವ ಎಮ್ಮೆ, ದನ, ಆಡುಕುರಿಯೂ ಕಾಣಲಿಲ್ಲ, ಬರೀ ಜನಗಳು, ಮನೆಗಳು. ಸಂಜೆಯಾಗುತ್ತಿದ್ದಂತೆ ಚಂದ್ರ ತಯಾರಿಸಿದ ಪ್ರವಾಸದ ಚಾರ್ಟ್ ಪ್ರಕಾರ ಪರಿಶಿನ ಕಡವು ಎಂಬ ಪುಣ್ಯಕ್ಷೇತ್ರ ತಲುಪಿದೆವು.

ನಾಗತಿಹಳ್ಳಿ ಚಂದ್ರ ಪ್ರವಾಸವನ್ನು ಬಹಳ ಅಚ್ಚುಕಟ್ಟಾಗಿ ರೂಪಿಸಿರುತ್ತಾನೆ. ಪ್ರವಾಸಕ್ಕೂ ಮುನ್ನ ಆತ ಹೋಗಿ, ಊಟ, ವಸತಿ, ನೋಡುವ ಸ್ಥಳ, ಸಮಯ ಇದನ್ನೆಲ್ಲಾ ತೋರಿಸುವ ಗೈಡುಗಳು, ಸರ್ಕಾರಿ ವಸತಿಗೃಹಗಳಾದರೆ ಮೊದಲೆ ಹಣ ಪಾವತಿಸಿ ನಿಗದಿ ಮಾಡಿಕೊಂಡು ಅದರಂತೆಯೇ ಸಾಗುವುದರಿಂದ ಎಲ್ಲೂ ತೊಂದರೆಯಾಗುವುದಿಲ್ಲ. ನಾವು ಹೋಗುತ್ತಿರುವ ಬಸ್ಸು ಕೆಟ್ಟರೆ ಏನು ಮಾಡಬೇಕು, ಗೈಡ್ ಕೈ ಕೊಟ್ಟರೆ ಏನು ಮಾಡಬೇಕು, ಯಾರಾದರೂ ತೀರಿಕೊಂಡರೆ ಏನು ಮಾಡಬೇಕು... ಹೀಗೆ ಎಂತಹ ಸಂದರ್ಭಕ್ಕೂ ಒಂದು ಬದಲಿ ವ್ಯವಸ್ಥೆ ರೆಡಿಯಿರುತ್ತದೆ. ಪ್ರತಿಯೊಬ್ಬರ ಮಾತ್ರೆ, ಕಾಯಿಲೆಗಳ ಜವಾಬ್ದಾರಿಯನ್ನು ನಿರ್ವಹಿಸುವುದಲ್ಲದೆ ಓದುಬರಹ ಬರುವವರಿಗೆಲ್ಲಾ ನೋಟ್‌ಪುಸ್ತಕ ಕೊಟ್ಟು, ನೋಡಿದ ಸ್ಥಳ, ಕೇಳಿದ ಸಂಗತಿಯನ್ನು ದಾಖಲಿಸಿಕೊಳ್ಳುವಂತೆ ತಾಕೀತು ಮಾಡುತ್ತಾನೆ. ಆ ವಿಷಯದಲ್ಲಿ ಅವನಿನ್ನೂ ಮೇಷ್ಟ್ರು ಕೆಲಸ ಬಿಟ್ಟಿಲ್ಲ! ನಮ್ಮ ಸಮಸ್ತ ಜವಾಬ್ದಾರಿಯನ್ನು ಅವನ ಮೇಲೆ ಹಾಕಿದ ನಾವು ಬಸ್ಸಿನೊಳಗೆ ಮನರಂಜನಾ ಲೋಕವನ್ನೇ ಸೃಷ್ಟಿ ಮಾಡಿಕೊಂಡೆವು. ನನ್ನ ಹಾಡು, ತಮಾಷೆ, ಯಕ್ಷಗಾನದ ಹಾಸ್ಯ ಪ್ರಸಂಗವೆಲ್ಲಾ ಮುಗಿದ ಮೇಲೆ ರೈತ ಮಕ್ಕಳು ತಮ್ಮ ಪ್ರತಿಭೆ ತೋರಿದರು.

ಪರಿಶಿನ ಕಡವುನಲ್ಲಿ ಮುತ್ತಪ್ಪನ ದೇವಸ್ಥಾನವಿದೆ. ಇಲ್ಲಿನ ಪೂಜಾರಿಗಳೆಲ್ಲಾ ಶೂದ್ರರಂತೆ. ಹಾಗಾಗಿ ದೇವಸ್ಥಾನಕ್ಕೆ ಅಂಟಿಕೊಂಡೇ ಇರುವ ಹೋಟೆಲಿನಲ್ಲಿ ಒಳ್ಳೆಯ ಹುರಿದ ಕರಿದ ಮೀನು ಸಿಗುತ್ತವೆ. ಈ ಸುದ್ದಿ ಕೇಳಿದ ಕೂಡಲೇ ಆ ದೇವರ ಮೇಲೆ ನಮಗೆ ಅತೀವ ಭಕ್ತಿಯುಂಟಾಯ್ತು. ಗೆಳೆಯರನ್ನು ಕಳುಹಿಸಿ ಮೀನಿಗೆ ಲಗತ್ತಾದ ಪಾನೀಯ ತರಿಸಿಕೊಂಡೆವು.

ದೇವಸ್ಥಾನದ ವಠಾರ ನಮ್ಮ ಧರ್ಮಸ್ಥಳದಲ್ಲಿರುವಂತಹ ಅಂಗಡಿ ಗಲ್ಲಿಗಳಿಂದ ತುಂಬಿದೆ. ಇಲ್ಲಿ ಪ್ರತಿ ದಿನ ದೇವರ ಪೂಜಾ ಸಮಯಕ್ಕೆ ನಾಯಿಯೊಂದು ಬಂದು ಪ್ರದಕ್ಷಿಣೆ ಹಾಕಿ ಪ್ರಸಾದ ತಿಂದುಹೋಗುತ್ತೆ. ಪೂಜಾ ಸ್ಥಳಕ್ಕೆ ಬಂದ ನಾಯಿಯನ್ನು ಗೆಳೆಯ ಶ್ರೀನಿವಾಸ್ ಓಡಿಸಲು ತಯಾರಾಗುವಷ್ಟರಲ್ಲಿ ಅದು ದೈವಾಂಶಸಂಭೂತ ಶ್ವಾನವೆಂಬ ಮಾಹಿತಿ ಸಿಕ್ಕಿ ನಗು ಬಂತು.

ನಮ್ಮ ಊರ ಬೀದಿಯಲ್ಲಿ ಈ ದೈವಾಂಶಸಂಭೂತ ಕಂಡಕೂಡಲೇ ಮಾರಣಾಂತಿಕ ತಂತಿಯಿಂದ ಕುತ್ತಿಗೆ ಬಿಗಿದು, ಸಾಯಿಸಿ, ವ್ಯಾನಿಗೆ ತುಂಬಿಕೊಂಡು ಹೋಗುತ್ತಾರೆ. ಇಲ್ಲಿ ನಾಯಿ ಬರದ ಹೊರತು ಪೂಜೆ ಸಾಗುವುದಿಲ್ಲ, ಪೂಜಾ ಸಮಯಕ್ಕೆ ನಾಯಿಯಾಗಿ ಕಾಣಿಸಿಕೊಳ್ಳುವ ಮುತ್ತಪ್ಪ ದೇವರ ಆಕಾರವೂ ಕೂಡ ಯಕ್ಷಗಾನದ ಭೂತವೇಷದಂತಿದೆ.

ಮಡಿ ಮೈಲಿಗೆ ಇಲ್ಲದ ಈ ದೇವರನ್ನು ಕೊಂಡಾಡುತ್ತ ಹೊರಬಂದಾಗ ಆ ದಿನ ಹುಣ್ಣಿಮೆಯಾದ್ದರಿಂದ ಚಂದ್ರ ದೊಡ್ಡದಾಗಿ ಕಂಡ. ಸಮುದ್ರದ ಕಿನಾರೆ ಮಾಮೂಲಿನಂತಿತ್ತು, ದೇವಸ್ಥಾನದ ಬಾಗಿಲಲ್ಲೇ ಇದ್ದ ಭಕ್ತನೊಬ್ಬ ಹತ್ತಿರ ಕರೆದ. ಹೋದಕೂಡಲೇ ಹಣೆಗೆ ನಾಮ ಬಳಿದು ಐದು ರೂಪಾಯಿ ಕೇಳಿದ. ಚಿಲ್ಲರೆ ಇಲ್ಲವೆಂದೆ. ಹೋಗಲು ಅನುಮತಿ ಕೊಟ್ಟ. ಆ ಬಣ್ಣಕ್ಕೆ ಅದೇನು ಹಾಕಿದ್ದನೊ ಏನೊ, ಇಡೀ ದಿನ ಥೇಟ್ ಮಲಯಾಳಿ ಭಕ್ತನ ಗೆಟಪ್ಪು ಕೊಟ್ಟಿತ್ತು.

ನಮ್ಮದು ರೈತರನ್ನೊಳಗೊಂಡ ಕೃಷಿ ಪ್ರವಾಸವಾದ್ದರಿಂದ ಕೇರಳದ ಕೃಷಿ ವಿ.ವಿ.ಗಳು ಮತ್ತು ತೆಂಗಿನ ಸಂಶೋಧನಾ ಕೇಂದ್ರ ನೋಡುವುದಾಗಿತ್ತು, "ಈ ತೆಂಗಿನ ಸಂಶೋಧನೆ ಏನು ಮಾಡುತ್ತಾರೆ ಮಣ್ಣು, ತೆಂಗಿನ ಸೊಸಿ ನೆಡುತ್ತೇವೆ. ಏಳೆಂಟು ವರ್ಷಕ್ಕೆ ಫಲ ಬಿಡಲು ಆರಂಭಿಸಿದರೆ ಸಾಯುವವರೆಗೂ ಫಲ ಕೊಡುತ್ತದೆ, ಅಷ್ಟೆ" ಎಂದುಕೊಂಡಿದ್ದ ನನಗೆ ಸಂಶೋಧನೆ ನೋಡಿದ ಮೇಲೆ ಅದರ ಮಹತ್ವ ತಿಳಿಯಿತು. ಹಿಂದೆ ಲಂಕೇಶ್ ಕೊಟ್ಟಿದ್ದ ಹಣದಲ್ಲಿ ನಾನು ತೆಂಗಿನ ಸೊಸಿ ನೆಟ್ಟಿದ್ದೆ. ದುರಾಸೆಯ ಫಲವಾಗಿ ಅವುಗಳನ್ನೆಲ್ಲಾ ಹತ್ತಿರಕ್ಕೆ ನೆಟ್ಟಿದ್ದೆ. ನನ್ನನ್ನ ನೋಡಿ ಅಕ್ಕಪಕ್ಕದವರೂ ನೆಟ್ಟಿದ್ದರಿಂದ ಬದುವಿನ ಪಕ್ಕದ ಮರಗಳ ಅಂತರ ಕೇವಲ ಐದಾರು ಅಡಿ ಇದೆ. ಅದರ ಫಲವಾಗಿ ಬರೀ ಸೋಗೆ ಗರಿಯ ಇಳುವರಿ ನಡೆದಿದೆ. ಆ ಮರಗಳಲ್ಲಿ ಆಕಸ್ಮಾತ್ ಕಾಯಿ ಕಂಡರೆ, ಅವು ಕೂಡ ಹೋತನ ಬೀಜದಷ್ಟು ಗಾತ್ರವಿದ್ದು, ಅವಕ್ಕೂ ನುಶಿಪೀಡೆ ಅಡರಿಕೊಳ್ಳುತ್ತದೆ!

ನಾವು ನೋಡಿದ ಕಾಸರಗೋಡಿನ ಕೇಂದ್ರೀಯ ತೋಟದ ಮರಗಳು ಒಂಭತ್ತು ಮೀಟರ್ ಅಂತರದಲ್ಲಿದ್ದವು. ೧೯೧೬ ರಲ್ಲಿ ಸ್ಥಾಪನೆಯಾದ ಈ ಸಂಸ್ಥೆ ಇಡೀ ವಿಶ್ವದಲ್ಲೇ ಮೊದಲನೆಯದು. ಇದು ಜಗತ್ತಿನ ಅತಿದೊಡ್ಡ ತೆಂಗಿನ ಸಂಶೋಧನಾ ಕೇಂದ್ರವಂತೆ. ಭಾರತದಲ್ಲಿ ಬೆಳೆವ ಸುಮಾರು ೧೦೨ ತರದ ತಳಿಗಳನ್ನು ಇಲ್ಲಿ ಬೆಳೆಸಲಾಗುತ್ತದೆ. ಪ್ರಪಂಚದ ೯೩ ದೇಶಗಳಲ್ಲಿ ತೆಂಗು ಬೆಳೆಯಲಾಗುತ್ತದೆ. ಅಲ್ಲಿನ ಹವಾಮಾನಕ್ಕೆ ಹೊಂದಿಕೊಂಡು ಬೆಳೆಯುವ ತಳಿಗಳೂ ಇವೆಯಂತೆ. ಈ ಸಂಶೋಧನಾ ಕೇಂದ್ರದ ಮಾಹಿತಿಯನ್ನು ಕೃಷಿ ವಿಜ್ಞಾನಿ ಡಾ. ಚಂದ್ರಶೇಖರ ಚೌಟ ತಿಳಿಸುತ್ತಾ ಹೋದಂತೆ ನಮ್ಮ ಅಚ್ಚರಿ ಬೆಳೆಯುತ್ತಾ ಹೋಯಿತು. ಈಗ ಸದ್ಯಕ್ಕೆ ಹರಡಿಕೊಂಡಿರುವ ನುಶಿಪೀಡೆಯೆ ಎಲ್ಲೆಲ್ಲೂ ಸವಾಲಾಗಿದೆಯಂತೆ.

ಕಾಯಂಗುಲಂನಲ್ಲಿ ನೋಡಿದ ತೋಟದಲ್ಲಿ ರೋಗರಹಿತ ಬೀಜೋತ್ಪಾದನೆ ಮಾಡುತ್ತಾರೆ. ಅಲ್ಲಿ ಒಂದಿಷ್ಟು ಬೀಜಕೊಳ್ಳುವಾಗ, ಯಾಕೋ ಈ ಯೂನಿವರ್ಸಿಟಿ ರೋಗಗ್ರಸ್ತವಾಗಿರುವಂತೆ ಕಂಡಿತು. ಸಿಬ್ಬಂದಿಗಳಲ್ಲಿ ಸಾಮರಸ್ಯ ಕಾಣಲಿಲ್ಲ, ಒಬ್ಬ ಮಲಯಾಳಿ ರಾಸ್ಕಲ್ ಅಲ್ಲಿ ಒಣಗಾಕಿದ್ದ ಬೀಜಗಳನ್ನು ನಾವು ಕದಿಯಬಹುದೆಂದು ಅಲ್ಲಿನ ಸಿಬ್ಬಂದಿಗೆ ಜೋರು ಮಾಡಿ, ನಮ್ಮನ್ನು ಕಳ್ಳರಂತೆ ನೋಡುತ್ತಿದ್ದ. ಆದರೆ ಕದ್ದು ಬೀಜ ತಂದು, ನೆಟ್ಟು ನೀರೂದು, ಮಾರಿ ಜೀವನ ಮಾಡುವಂತಹವರಲ್ಲ ನಾವು. ಕಾಸು ಕೊಟ್ಟರೆ ಬೇಕಾದಂತಹ ತರಕಾರಿ ಸಿಗುತ್ತವೆ ಎಂಬ ನಿರಾಳದವರು ಎಂದು ಆ ಮೂರ್ಖನಿಗೆ ಹೇಗೆ ಗೊತ್ತಾಗಬೇಕು? ಆ ಯೂನಿವರ್ಸಿಟಿ ಆವರಣದಲ್ಲೇ ನಮಗೆ ಮಂಡ್ಯ ಮತ್ತು ಧಾರವಾಡದ ಇಬ್ಬರು ವಿದ್ಯಾರ್ಥಿಗಳು ಸಿಕ್ಕಿ ಅವರ ಗುರುಗಳನ್ನು ಪರಿಚಯಿಸಿ ಸಂಭ್ರಮಪಟ್ಟರು.

ನಾವು ಅಲ್ಲಿಂದ ಅಲೆಪ್ಪಿ ಸಮೀಪದ ಕೊಲ್ಲಂ ಜಿಲ್ಲೆಯ ಕರಿನಾಗಪಳ್ಳಿ ಗ್ರಾಮದಲ್ಲಿರುವ ಚಿತ್ರ ಅಯ್ಯರ್ ಅವರ ತೋಟಕ್ಕೆ ಹೋದೆವು. ಅದೊಂದು ಸಹಜಕೃಷಿ ತೋಟ. ಚಿತ್ರ ಈಗಾಗಲೇ ಕನ್ನಡದಲ್ಲಿ ಹಲವು ಹಾಡುಗಳನ್ನು ಹಾಡಿದ್ದಾರೆ. ಬಹು ಭಾಷೆ ಬಲ್ಲ ಆಕೆ ಬಂದು, ನಮ್ಮ ಹೆಣ್ಣುಮಕ್ಕಳನ್ನು ಕನ್ನಡದಲ್ಲಿ ಮಾತನಾಡಿಸಿದ ಕೂಡಲೇ, ಎಲ್ಲರ ಮುಖಗಳೂ ಅರಳಿದವು. ಅನ್ಯರಾಜ್ಯದವರಲ್ಲಿ ನಮ್ಮ ಮಾತೃಭಾಷೆ ಕೇಳುವುದು ಒಂದು ಅನಿರ್ವಚನೀಯ ಅನುಭವ. ನಾವು ಹೊಕ್ಕ ಹೋಟೆಲಿನಲ್ಲಿ ಒಬ್ಬರಾದರೂ ಕನ್ನಡದಲ್ಲಿ ಮಾತನಾಡಿಸಿ ನಮಗೆ ಅಚ್ಚರಿ ಮೂಡಿಸುತ್ತಿದ್ದರು. ಚಿತ್ರ ನಮ್ಮನ್ನು ಎದುರುಗೊಳ್ಳಲೆಂದೇ ಬೆಂಗಳೂರಿನಿಂದ ಓಡಿಬಂದಿದ್ದರು. ಆಕೆಯ ಗಂಡ ಪೈಲಟ್ ಅಂತೆ. ತಂದೆ ಬರ್ಮಾದಲ್ಲಿದ್ದಾರೆ. ತಾಯಿ ವಿದೇಶದಲ್ಲಿದ್ದಾರೆ. ವಿಶೇಷವಾದ ವಿದ್ಯೆ ಮತ್ತು ಸಂಪತ್ತು ಇವರನ್ನೆಲ್ಲಾ ದೂರವಿಟ್ಟಿದೆ ಅನ್ನಿಸಿತು. ನಮ್ಮ ಹೆಣ್ಣುಮಕ್ಕಳೆಲ್ಲಾ ಚಿತ್ರಾ ಮನೆಯಲ್ಲೇ ಉಳಿದು ಆ ದಿನ ರಾತ್ರಿ ಜಾನಪದ ಜಾತ್ರೆ ನಡೆಸಿಬಿಟ್ಟರು.

ಹೊರಡುವ ದಿನ ಎ.ಕೆ. ಗೋಪಾಲನ್ ಸ್ಥಾಪಿಸಿದ ದೇಶಾಭಿಮಾನಿ ಎಂಬ ಪತ್ರಿಕಾಲಯಕ್ಕೆ ಹೋಗಿದ್ದೆವು. ನಾನು ಎ.ಕೆ. ಗೋಪಾಲನ್ ಜೀವನಚರಿತ್ರೆ ಓದಿದ್ದೆ. ಈ ಮಹಾನ್ ಹೋರಾಟಗಾರ ಕೇರಳದ ಮನೆಮನೆಗೂ ಕಮ್ಯುನಿಸ್ಟ್ ಸಿದ್ಧಾಂತ ತಲುಪಿಸಿದಾತ. ಮದುವೆಯಾದ ಹೆಂಡತಿಯನ್ನು ಮರೆತು, ಕಮ್ಯುನಿಸ್ಟ್ ಕಾರ್ಯಕರ್ತನಾಗಿ ದುಡಿಯುತ್ತಿದ್ದ ಕಾರಣಕ್ಕೆ, ಹೆಂಡತಿ ಬೇರೆಯವರನ್ನು ಮದುವೆಯಾಗುವ ತೀರ್ಮಾನ ತೆಗೆದುಕೊಂಡಳು. ಅದನ್ನು ಗೌರವಿಸಿ, ಆಕೆಯ ಕ್ಷಮೆಯಾಚಿಸಿ ಬೀಳ್ಕೊಟ್ಟ ವ್ಯಕ್ತಿ ಎ.ಕೆ. ಗೋಪಾಲನ್. ಆ ದಿನ ಅವರ ಹುಟ್ಟು ಹಬ್ಬವಾದ್ದರಿಂದ ಪತ್ರಿಕಾಲಯದ ಹೊರಗೆ ಫೋಟೋ ಇಟ್ಟು ಹಾರ ಹಾಕಿದ್ದರು. ನಮ್ಮ ಗೈಡ್ ಗಂಗಾಧರನ್ ಕೂಡ ಎ.ಕೆ.ಜಿ. ಹಿಂಬಾಲಕರಾಗಿದ್ದರಿಂದ ಪತ್ರಿಕಾಲಯದಲ್ಲೇ ಊಟ ಕೊಡಿಸಿ ಸಂತೋಷಪಟ್ಟರು.

ಚುನಾವಣೆಗಳು ಹತ್ತಿರ ಬರುತ್ತಿರುವ ಕಾರಣಕ್ಕೆ ಅಲ್ಲಲ್ಲಿ ಪಕ್ಷದ ಫ್ಲೆಕ್ಸ್‌ಗಳು, ಭಾಷಣಗಳು ಆರಂಭವಾಗಿದ್ದವು. ಈ ಕೇರಳ ಇಡೀ ಪ್ರಪಂಚದಲ್ಲಿ ಅತಿಹೆಚ್ಚು ಪಾರ್ಟಿಗಳನ್ನು ಹೊಂದಿರುವ ರಾಜ್ಯ. ಆದರೆ ಪ್ರಧಾನವಾಗಿ ಕಮ್ಯುನಿಸ್ಟ್, ಕಾಂಗ್ರೆಸ್ ಮತ್ತು ಬಿಜೆಪಿಗಳಿವೆ. ಈ ಬಿಜೆಪಿಗೆ ಉತ್ತರವಾಗಿ ಮುಸ್ಲಿಂ–ಕ್ರಿಶ್ಚಿಯನ್ನರೂ ಕೂಡ ಪಾರ್ಟಿ ಸ್ಥಾಪಿಸಿಕೊಂಡು ಮತೀಯ ಆವರಣದಲ್ಲಿ ಸಂಘಟಿತವಾಗುತ್ತಿವೆ.

ಗುರುವಾಯೂರಲ್ಲೊಂದು ವಿಚಿತ್ರ ನೋಡಿದೆ. ಕಾಂಗ್ರೆಸ್ ಪಾರ್ಟಿಯ ಲೀಡರೊಬ್ಬ ಭಾಷಣ ಮಾಡುತ್ತಿದ್ದ. ವೇದಿಕೆ ಮೇಲೆ ಏಳೆಂಟು ಜನ ಬಿಟ್ಟರೆ ಎದುರುಗಡೆ ಒಂದೇ ಒಂದು ನರಕುನ್ನಿಯೂ ಇರಲಿಲ್ಲ. ಕಾಸು ಕೊಟ್ಟು ಜನ ತರಿಸದೇ ಹೋದರೆ ನಮ್ಮಲ್ಲೂ ಇಂತಹ ಪ್ರಸಂಗ ಜರುಗಬಹುದು ಅನ್ನಿಸಿತು.

ಹೊರಡುವ ದಿನ ಕಾಸರಗೋಡಿನ ಚಿನ್ನ ಅದ್ಭುತವಾದ ಬಾರೊಂದರಲ್ಲಿ ಪಾರ್ಟಿ ಕೊಡಿಸಿದ. ನಾನು, ಚಂದ್ರ, ಗಂಗಾಧರನ್ ಕಟ್ಟಡವೊಂದರ ಎರಡನೇ ಮಹಡಿಯನ್ನತ್ತಿ ಮೂರನೇ ಮಹಡಿಗೆ ಹೋಗಲು ತಿರುಗಿದೆವು. ಆ ಮೂಲೆಯ ಕತ್ತಲಲ್ಲಿದ್ದ ಮೋಟುಗೋಡೆಯ ಮೇಲೆ ಚಿನ್ನ ವಿಸ್ಕಿ, ಚಕ್ಕುಳಿ, ಸೋಡ ಇಟ್ಟುಕೊಂಡು ಭರ್ಜರಿ ಪಾರ್ಟಿ ಅರೇಂಜ್ ಮಾಡಿರುವ ಗತ್ತಿನಲ್ಲಿದ್ದರು. ಜೊತೆಗೆ ಬೇಗಬೇಗ ಎಂಬಂತೆ ಪ್ಲಾಸ್ಟಿಕ್ ಲೋಟ ಕೊಟ್ಟು ವಿಸ್ಕಿ ಹೂದರು. ಕತ್ತಲಾದ್ದರಿಂದ ನಮಗೆ ಅಳತೆ ಗೊತ್ತಾಗಲಿಲ್ಲ. ನಮ್ಮ ಹಳ್ಳಿಯ ಹೆಣ್ಣುಮಕ್ಕಳು ನಮ್ಮ ಬಗ್ಗೆ ಬಹಳ ಗೌರವ ಇಟ್ಟುಕೊಂಡಿರುವುದರಿಂದ ನಮ್ಮ ಪಾನೀಯ ಚಾಪಲ್ಯಕೆ ಇಂತಹ ಅಜ್ಞಾತ ಸ್ಥಳ ಹೇಳಿಮಾಡಿಸಿದಂತಿತ್ತು. ಆಹಾ ಪಾರ್ಟಿ ಎಂದರೆ ಇದಪ್ಪ ಇದರ ಖುಷಿಯನ್ನ ಯಾವ ಹೈಟೆಕ್ ಬಾರುಗಳೂ ಕೊಡಲಾರದು ಅನ್ನಿಸಿತು.

ಚಂದ್ರ ಬೀಳ್ಕೊಡುವ ಪುಟ್ಟ ಪ್ರಸಂಗವನ್ನು ಸೃಷ್ಟಿಸಿ ಬಸ್ಸಿನ ಮುಂದೆಯೇ ಚಿನ್ನ ಗಂಗಾಧರನ್, ಡ್ರೈವರ್ ಮತ್ತು ಸಹಾಯಕನಿಗೆ ನೆನಪಿನ ಕಾಣಿಕೆ ಕೊಟ್ಟು ಜೊತೆಗೆ ಮೈಸೂರು ಸ್ಯಾಂಡಲ್ ಸೋಪು ಕೊಟ್ಟು ಶಾಲು ಹೊದಿಸಿದ.

ಮಂಗಳೂರಲ್ಲಿ ಪ್ರವಾಸಿ ಬಸ್ಸಿನಿಂದ ಕೆಳಗಿಳಿಯುತ್ತಾ "ಬರ್ಲೇನ್ರಪ್ಪಾ?" ಎಂದು ಸುಳ್ಳು ಸುಳ್ಳೆ ಕಣ್ಣೊರೆಸಿಕೊಂಡೆ. ರೈತ ಮಕ್ಕಳು ಗಹಗಹಿಸಿ ನಕ್ಕ ಧ್ವನಿ ನನ್ನಲ್ಲಿನ್ನೂ ಉಳಿದಿದೆ.

• ಬಿ. ಚಂದ್ರೇಗೌಡ

▶▶ 3

ಆತ ಮಂತ್ರವಾದಿಗಳ ಕಲೆಗೇ ಅಪಮಾನವೆಸಗುತ್ತಿದ್ದಾನೆ" ಎಂಬುದು!

ಸಾಯಿಬಾಬಾನ ಧೋಂಗಿತನ ಬಟಾಬಯಲಾಗಿದ್ದು 1992ರ ನವೆಂಬರ್ 23ರಂದು. ಅಂದು ಹೈದರಾಬಾದಿನಲ್ಲಿ ಸಾಯಿಬಾಬಾ ಒಂದು ಬೃಹತ್ ಕಲ್ಯಾಣ ಮಂಟಪವನ್ನು ಉದ್ಘಾಟಿಸಬೇಕಿತ್ತು. ಆ ಕಾರ್ಯಕ್ರಮಕ್ಕೆ ಸಾಯಿಬಾಬಾನ ಪರಮ ಭಕ್ತನೂ ಆಗಿನ ಪ್ರಧಾನಿಯೂ ಆಗಿದ್ದ ನರಸಿಂಹರಾವ್ ಕೂಡ ಆಗಮಿಸಿದ್ದರು. ಸಾಯಿಬಾಬಾ, ರಾವ್ ಇತ್ಯಾದಿ ಗಣ್ಯರಿದ್ದ ಆ ಕಾರ್ಯಕ್ರಮವನ್ನು ಪ್ರಸಾರ ಮಾಡಲು ದೂರದರ್ಶನ ಹಲವಾರು ಕ್ಯಾಮೆರಾಮೆನ್‌ಗಳನ್ನು ಕಳುಹಿಸಿತ್ತು. ಅವರೆಲ್ಲ ವಿವಿಧ ಆ್ಯಂಗಲ್‌ಗಳಿಂದ ಕಾರ್ಯಕ್ರಮವನ್ನು ಶೂಟ್ ಮಾಡುತ್ತಿದ್ದರು. ಅಂದು ಆ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದ ಕಾಂಟ್ರಾಕ್ಟುದಾರನಿಗೆ ಸಾಯಿಬಾಬಾ ತಮ್ಮ ಎಂದಿನ ಶೈಲಿಯಲ್ಲಿ ಗಾಳಿಯಿಂದ ಒಂದು ಚಿನ್ನದ ಸರವನ್ನು 'ಸೃಷ್ಟಿಸಿ' ಆತನ ಕೊರಳಿಗೆ ಹಾಕಿದ್ದ. ಈ 'ಅದ್ಭುತ'ವನ್ನು ಕಂಡು ಅಲ್ಲಿದ್ದ ಜನರೆಲ್ಲ ಉದ್ಘಾರವೆತ್ತಿದ್ದರು.

ಕಾರ್ಯಕ್ರಮ ಮುಗಿದ ನಂತರ ದೂರದರ್ಶನದ ಕ್ಯಾಮೆರಾಮೆನ್‌ಗಳೆಲ್ಲ ಸ್ಟುಡಿಯೋಗೆ ಹೋಗಿ ನೋಡಿದರೆ ಒಂದು ಕ್ಯಾಮೆರಾ ಸಾಯಿಬಾಬಾನ ಬೂಟಾಟಿಕೆಯನ್ನು ಸೆರೆಹಿಡಿದಿತ್ತು. ಕಾಂಟ್ರಾಕ್ಟುದಾರನಿಗೆ ಹೂವಿನ ಹಾರ ಮತ್ತು ನೆನೆಪಿನ ಕಾಣಿಕೆ ನೀಡುತ್ತಿರುವಾಗ ಸಾಯಿಬಾಬಾನ ನಿಕಟವರ್ತಿಯೊಬ್ಬ ಒಂದು ಚಿನ್ನದ ಸರವನ್ನು ಬಾಬಾನಿಗೆ ಗೌಪ್ಯವಾಗಿ ಹಸ್ತಾಂತರಿಸಿದ್ದು, ಬಾಬಾ ಅದನ್ನು ತನ್ನ ಖಾವಿ ಬಟ್ಟೆಯ ತೋಳಿನಲ್ಲಿ ಬಚ್ಚಿಟ್ಟುಕೊಂಡಿದ್ದು, ಆನಂತರ ತಾನು ಆ ಸರವನ್ನು ಗಾಳಿಯಿಂದ ಸೃಷ್ಟಿಸಿದ್ದೇನೆಂಬಂತೆ ನಾಟಕವಾಡಿದ್ದು ಎಲ್ಲವೂ ಆ ಕ್ಯಾಮೆರಾದಲ್ಲಿತ್ತು. ಸಹಜವಾಗಿಯೇ ಇದರಿಂದಾಗಿ ಹೈದರಾಬಾದಿನ ದೂರದರ್ಶನ ಕೇಂದ್ರದಲ್ಲಿ ತಲ್ಲಣವುಂಟಾಯಿತು. ಕೂಡಲೇ ಈ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಲಾಯಿತು. ಆಗ ಪ್ರಧಾನಿ ರಾವ್ ಅವರೇ ಖುದ್ದು ನಿಗಾವಹಿಸಿ ಸಾಯಿಬಾಬಾನನ್ನು ಎಕ್ಸ್‌ಪೋಸ್ ಮಾಡುವ ಆ ದೃಶ್ಯಗಳು ಪ್ರಸಾರವಾಗದಂತೆ ನೋಡಿಕೊಂಡರು. ಅಷ್ಟೇ ಅಲ್ಲ, ಅವುಗಳನ್ನು ನಾಶಮಾಡಬೇಕೆಂದು ರಾವ್ ಸರ್ಕಾರ ಸೂಚಿಸಿತ್ತು. ಆದರೆ ಅದೃಷ್ಟವಶಾತ್ ದೂರದರ್ಶನದ ಪತ್ರಕರ್ತರೊಬ್ಬರು ಕೂಡಲೇ ಅದರ ಪ್ರತಿಯೊಂದನ್ನು ಮಾಡಿಕೊಂಡರು. ಮಾತ್ರವಲ್ಲ, ಆ ವಿಡಿಯೋ ರೆಕಾರ್ಡಿಂಗ್‌ನ ದೃಶ್ಯಗಳನ್ನು ಫೋಟೋ ರೂಪದಲ್ಲಿ ಹೈದರಾಬಾದಿನ ಡೆಕ್ಕನ್ ಕ್ರಾನಿಕಲ್ ಪತ್ರಿಕೆ ತನ್ನ 1992ರ ನವೆಂಬರ್ 24ರ ಸಂಚಿಕೆಯಲ್ಲಿ ಪ್ರಕಟಿಸಿತ್ತು!

ಇದೆಲ್ಲಕ್ಕಿಂತ ಆಘಾತಕಾರಿಯಾದದ್ದು ಸಾಯಿಬಾಬಾನ ವಿರುದ್ಧ ಕೇಳಿಬಂದ ಲೈಂಗಿಕ ಶೋಷಣೆಯ ಆರೋಪಗಳು. ಅಂತಹ ಆರೋಪಗಳನ್ನು ಹಲವಾರು ವಿದೇಶಿಯರು ಮಾಡಿದ್ದಾರೆ. ಆದರೆ ಈತನಕ ಈ ಆರೋಪಗಳಿಗೆ ಸಂಬಂಧಪಟ್ಟಂತೆ ಒಮ್ಮೆಯೂ ಸಾಯಿಬಾಬಾನ ವಿಚಾರಣೆ ನಡೆದಿಲ್ಲ.

ತನ್ನ ಬುದ್ಧಿಗೇಡಿ/ಬುದ್ಧಿಮಾಂದ್ಯ ಭಕ್ತರಿಗೆ "ನಾನಿರುವಾಗ ನೀವೇಕೆ ಭಯಪಡುತ್ತೀರಿ?" ಎನ್ನುವ ಸಾಯಿಬಾಬಾನಿಗೆ ತನ್ನ ಬಗ್ಗೆಯೇ ನಂಬಿಕೆ ಇಲ್ಲ ಎಂಬುದು 1995ರ ಜೂನ್ ರಂದು ಸಾಬೀತಾಗಿತ್ತು. ಅಂದು ಹಲವು ಭಕ್ತರಿಂದ ಸಾಯಿಬಾಬಾನ 'ಕೊಲೆಯತ್ನ' ನಡೆದಿತ್ತು. ಆ ಪ್ರಕರಣದಲ್ಲಿ ಸಾಯಿಬಾಬಾ ತನ್ನ ಜೀವಕ್ಕೆ ಹೆದರಿ ಪೇರಿ ಕಿತ್ತಿದ್ದನಲ್ಲದೆ ಆರು ಜನ ಸಾವನ್ನಪ್ಪಿದ್ದರು. ಅಂದು ನಿಜವಾಗಲೂ ನಡೆದದ್ದು ಏನು ಎಂಬುದು ಸಾಯಿಬಾಬಾನಿಗೆ ಮತ್ತು ಆ ಪ್ರಕರಣದಲ್ಲಿ ಜೀವಂತವಾಗಿ ಉಳಿದವರಿಗೆ ಮಾತ್ರ ಗೊತ್ತಿದೆ. ಆದರೆ ಈ ಬಗ್ಗೆ ಒಮ್ಮೆಯೂ ಸಾಯಿಬಾಬಾನ ಬಂಧನವಾಗಲಿ, ವಿಚಾರಣೆಯಾಗಲಿ ನಡೆದೇ ಇಲ್ಲ.

ಸಾಯಿಬಾಬ ನಮ್ಮೆಲ್ಲರಂತೆ ಓರ್ವ ಹುಲುಮಾನವ, ಅಷ್ಟೇ. ಆದರೆ ಜನರ ಅಸಹಾಯಕತೆ ಮತ್ತು ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು, ತಾನು ಕರಗತ ಮಾಡಿಕೊಂಡಿದ್ದ ಒಂದೆರಡು ಕೈಚಳಕದ ತಂತ್ರಗಳನ್ನೇ ಉಪಯೋಗಿಸಿಕೊಂಡು, ಜನರಿಗೆ ಮಂಕುಬೂದಿ ಎರಚಿ ಕೋಟ್ಯಾಂತರ ರೂಪಾಯಿಗಳನ್ನು ದೋಚಿದ, ರಾಜಕಾರಣಿಗಳು, ಅಧಿಕಾರಿಗಳು, ನ್ಯಾಯಾಧೀಶರು ಹಾಗೂ, ಪ್ರಭಾವಿಗಳನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದುಕೊಂಡು ತನ್ನ ಸಾಮ್ರಾಜ್ಯವನ್ನು ಬೆಳೆಸಿಕೊಂಡ ಖಿಲಾಡಿ ಸಾಯಿಬಾಬಾ.

ಇಂತಹ ಸಾಯಿಬಾಬಾ ಇವತ್ತು ಮರಣಶಯ್ಯೆಯಲ್ಲಿದ್ದಾನೆ. ನಾಳೆ ಏನಾಗುತ್ತದೋ ಗೊತ್ತಿಲ್ಲ, ಆದರೆ ಕೊವ್ವೂರ್, ಅವರ ಉತ್ತರಾಧಿಕಾರಿಯಾಗಿದ್ದ ಪ್ರೇಮಾನಂದ ಮತ್ತು ಇವತ್ತು ಭಾರತದ ವೈಚಾರಿಕ ಸಂಘಟನೆಯ ಮುಖ್ಯಸ್ಥರಾಗಿರುವ ಮಿತ್ರ ನರೇಂದ್ರ ನಾಯಕ್‌ರಂತಹವರ ಸಂತತಿ ವಿಚಾರವಂತರಾಗುವವರೆಗೆ ಭಾರತದಂತಹ ಮೂಢನಂಬಿಕೆಗಳ ದೇಶದಲ್ಲಿ ಸಾಯಿಬಾಬಾನಂತಹ ಕಪಟ ಸ್ವಾಮಿ ಮೊದಲಿಗನೂ ಅಲ್ಲ, ಕೊನೆಯವನೂ ಅಲ್ಲ...

• ಗೌರಿ ಲಂಕೇಶ್

ನಾನ್ಯಾರು ಅಂತ ಹೇಳಿ ನೋಡಣ!

ನಮ್ಮ ಸಂತೆ ಶಿವರದ ಚೆಡ್ಡಿ ಭೈರಣ್ಣ ಜ್ಞಾನಪೀಠ ಪ್ರಶಸ್ತಿಗಾಗಿ ಕಾಯುತ್ತ ಕುಳಿತಿದ್ದರೆ 'ಮಂದ್ರ' ಎಂಬ ಕೃತಿಗೆ 'ಸರಸ್ವತಿ ಸಮ್ಮಾನ್' ಪ್ರಶಸ್ತಿ ಕೊಟ್ಟು ಸುಮ್ಮನಿರಿಸಿದ್ದಾರಂತಲ್ಲಾ! ಸಹಜವಾಗಿ ಸಂತೋಷದಿಂದ ಕುಣಿದಾಡಿದ ವಿಭಟ್ಟ "ಸರಸ್ವತಿ ಸಮ್ಮಾನ್ ಜ್ಞಾನಪೀಠಕ್ಕಿಂತಲೂ ಎತ್ತರದಲ್ಲಿದೆ. ಆ ಪ್ರಶಸ್ತಿ ಸಿಗಬೇಕಾದರೆ ತುಂಬಾ ಪ್ರಭಾವ ಬೀರಬೇಕು" ಎಂದಿದ್ದಲ್ಲದೆ ಪ್ರಲಾಪ ಸಿಮ್ಮನನ್ನು ಕಳುಹಿಸಿ ಅಪ್ಯಾಯಮಾನವಾದ ಸಂದರ್ಶನವನ್ನು ಮಾಡಿಸಿದರಂತಲ್ಲಾ. ಭೈರಣ್ಣನ 'ಮಂದ್ರ' ಕೃತಿಗೆ ಸನ್ಮಾನ ಸಿಗಬೇಕಾದರೆ ಅದರಲ್ಲೇನೋ ಇದೆ ಎಂದು ಭೈರಪ್ಪನನ್ನು ಕಂಡರಾಗದವರೂ ಆ ಪುಸ್ತಕವನ್ನು ಕೂಡಕೊಂಡು ಓದಲು ಯತ್ನಿಸಿ, ಆಕಳಿಸಿ, ನಿದ್ದೆ ಮಾಡಿ ಕಡೆಗೆ ಕಡೆಯ ಚಾಪ್ಟರುಗಳನ್ನು ಓದಿದರಂತಲ್ಲಾ. ಹಾಗೆ ಓದಿದವರು "ಭೈರಣ್ಣ ಈ ಕೃತಿ ಬರೆಯಲು ಬಹಳ ಸಿನಿಮಾ ನೋಡಿರಬೇಕು. ಸಂಗೀತಗಾರನ ಪಾತ್ರವಂತೂ ಭೈರಪ್ಪನಂತೆಯೇ ಮಾತನಾಡುತ್ತದೆ. ನಿಜಕ್ಕೂ ಇದು ತುಂಬ ತೂಕವಾದ ಸಿನಿಮಾ ಸ್ಕ್ರಿಪ್ಟು. ಹಾಗಂತ ಯಾವನಾದರೂ ಇದನ್ನು ತೆಗೆದುಕೊಂಡು ಸಿನಿಮಾ ಮಾಡಿದರೆ ಆತ ಯಕ್ಕುಟ್ಟಿ ಹೋಗಿ ಶಾಶ್ವತವಾಗಿ ಸಂಘ ಸೇರಿಕೊಳ್ಳಬೇಕಾಗುತ್ತ" ಎಂದರಂತಲ್ಲಾ, ಥೂತ್ತೇರಿ!

* * * *

ಮಂದ್ರಕ್ಕೆ ಸಿಕ್ಕಿರುವ ಮಾನ್ಯತೆ ಮತ್ತು ಕಾಸಿನ ಬಗ್ಗೆ ಯೋಚಿಸುತ್ತ ಕೂತಿರಬೇಕಾದರೆ ಪತ್ರಿಕೆ ಆಫೀಸಿನ ಫೋನ್ ರಿಂಗಾಯ್ತು, ನಾನೇ ತೆಗೆದುಕೊಂಡು "ಹಲೋ" ಎಂದೆ.

"ಯಾರ್ರಿ ಮಾತಾಡ್ತಯಿರೋದು?"

"ನಾನು ಯಾಹು ಅಂತ, ನೀವ್ಯಾರು?"

"ನಾನ್ಯಾರು ಅಂತ ಜಗತ್ತಿಗೇ ಗೊತ್ತಿದೆ. ನಿಮಗೆ ಗೊತ್ತಿಲ್ಲ ಅಂದ್ರೆ ಗೊತ್ತು ಮಾಡಿ ಕೊಡಬೇಕಾಗ್ತದೆ."

"ಆಯ್ತು, ಗೊತ್ತು ಮಾಡಿ ಕೊಡಿ ಸಾರ್."

"ಡಾ. ರಾಜ್‌ಕುಮಾರ್ ಜೊತೆ ಹನ್ನೊಂದು ಸಿನುಮಾದಲ್ಲಿ ಆ್ಯಕ್ಟ್ ಮಾಡಿದ್ದಿನಿ ಕಂಡ್ರಿ."

"ಗೊತ್ತಾಗಲಿಲ್ಲ ಸಾರ್."

"ವಿಷ್ಣುವರ್ಧನ್ ನಟಿಸಿರೋ ಹದಿನಾರು ಸಿನುಮದಲ್ಲಿ ನಾನು ಆ್ಯಕ್ಟ್ ಮಾಡಿದ್ದೀನಿ ಕಂಡ್ರಿ."

"ನಾನು ವಿಷ್ಣು ಸಿನುಮ ಜಾಸ್ತಿ ನೋಡಿಲ್ಲ ಸಾರ್."

"ನಾನು ಬಾಲನಟ ಆಗಿದ್ದಾಗ ಒಂದು ಸಿನುಮಾದಲ್ಲಿ ಜಯಲಲಿತನ ತೊಡೆ ಮೇಲೆ ಕುಳಿತಿದ್ದೆ, ಹೆದ್ರಿಕೊಂಡು ಆಕೆ ತೊಡೆ ಮೇಲೆ ಮೂತ್ರ ಮಾಡಿದ್ದೆ ಗೊತ್ತೆ?"

"ಹೌದ ಸಾರ್?"

"ಹೌದು ಕಂಡ್ರಿ, ಆದಕ್ಕೇ ಆಕೆ ಮುಖ್ಯಮಂತ್ರಿಯಾದ್ದು!"

"ಕಕ್ಕಸ್ ಮಾಡಿದ್ರೆ ಪ್ರಧಾನಿಯಾಗ್ತಿದ್ದಳಲ್ಲ ಸಾರ?"

"ಹೌದು ಕಂಡ್ರೀ!"

"ಈಗ್ಲೂ ಟ್ರೈ ಮಾಡಕ್ಕಾಗಲ್ಲವ ಸಾರ್?"

"ಈಗಾಗಲ್ಲ, ನಮ್ಮಿಬ್ಬರ ದೇಹಾಕೃತಿ ಒಂದೇ ಆಗಿರೊದ್ರಿಂದ ಕಷ್ಟ ಆಗುತ್ತೆ. ಹೋಗ್ಲಿ ಈಗಲಾದ್ರು ನಾನು ಯಾರು ಅಂತ ಗೊತ್ತಾಯ್ತಾ?"

"ದೇವರಾಣೆ ಗೊತ್ತಾಗಲಿಲ್ಲ ಸಾರ್."

"ಬಂಗಾರಪ್ಪ ರಾಮಕೃಷ್ಣ ಹೆಗಡೆ ಇವರ ಜೊತೆಲೆಲ್ಲಾ ರಾಜಕಾರಣ ಮಾಡಿದ್ದಿನಿ."


"ಬಗೆಹರಿತಯಿಲ್ಲ ಸಾರ್."

"ವಾಜಪೇಯಿನ ಹತ್ರದಿಂದ ನೋಡಿದ್ದಿನಿ. ಅದ್ವಾನಿ ಜೊತೆ ಕುಳಿತಿದ್ದಿನಿ. ದೇವೇಗೌಡ್ರ ಜೊತೆ ನಿದ್ದೆ ಮಾಡಿದ್ದಿನಿ."

"ಅಲ್ಲಿಗೆ ನೀವು ರಾಜಕಾರಣಿ ಅಂದಂಗಾಯ್ತು."

"ಜುಜುಬಿ ರಾಜಕಾರಣಿ ಅಲ್ಲ ಕಂಡ್ರಿ, ಇಡೀ ಬ್ರಹ್ಮಾಂಡನ ಅಂಗೈಯಲ್ಲಿ ಇಟ್ಟುಕೊಂಡೂ ಅದರ ಹಣೆಬರಹ ಬರಿತಾಯಿರೊ ಬೃಹಸ್ಪತಿ ನಾನು."

"ಓ ಗೊತ್ತಾಯ್ತು ಗೊತ್ತಾಯ್ತು. ರೀ ದಯಾನಂದ್, ಏನ್ರಿ ಇಷ್ಟೊಂದು ಕಾಡಿಸಿಬಿಟ್ರಿ, ನಾನು ಮಿಮಿಕ್ರಿ ದಯಾನಂದ ಅನ್ನಕ್ಕೇನಾಗಿತ್ರಿ ನಿಮಗೆ?"



"ಯಾವನ್ರಿ ಅವ್ನು ದಯಾನಂದ? ನಾನಿಲ್ದೆಯಿದ್ರೆ ಅವ್ನಿಲ್ಲ ತಿಳಕೊಳಿ. ನನ್ನನ್ನ ಅನುಕರಣೆ ಮಾಡಿ ಟಿವಿಲಿ ಅವಕಾಶ ಗಿಟ್ಟಿಸಿಕೊಳ್ತಾಯಿರೊ ಅಲ್ಪಮಾನವ ಆತ. ನಾನಾದ್ರೊ ಎಲ್ಲಾನು ಅರೆದು ಕುಡದು ಕುಳಿತಿರೊ ನರರಿಗೆಲ್ಲಾ ಇಂದ್ರನಾಗಿ ಶೋಭಿಸ್ತಿರತಕ್ಕಂತ ಶರ್ಮ. ಈಗ್ಲಾದ್ರು ಗೊತ್ತಾಯ್ತ?"

"ಗೊತ್ತಾಯ್ತು ಸಾರ್. ಬಂಡಲ್ ಬ್ರಹ್ಮಾಂಡ ಶರ್ಮ ಅಲ್ಲವೆ?"

"ಏನ್ರಿ, ಪತ್ರಿಕೆಲಿ ಹಾಗೆ ಬರದಿದ್ದಿರಿ? ನನ್ನ ಮುಖಾಂತರ ನೀವು ಪ್ರಚಾರ ಪಡಕೊಂಡು, ಪತ್ರಿಕೆ ಪ್ರಸಾರ ಸಂಖ್ಯೆ ಜಾಸ್ತಿ ಮಾಡಿಕೊಳ್ತಾಯಿದೀರ. ನಿಮಗೆ ನಿಜವಾಗ್ಲು ಮಾನಮರ್ಯಾದೆ ಇದ್ರೆ ನನ್ನ ಕಾರಣಕ್ಕೆ ಹೆಚ್ಚು ಸೇಲಾಗಿರೊ ಪತ್ರಿಕೆ ಹಣದಲ್ಲಿ ಪಾಲು ಕೊಡಬೇಕು. ಇಲ್ಲ ಅಂದ್ರೆ ಮುಂದಿನ ಜನ್ಮದಲ್ಲಿ ನೀವೆಲ್ಲಾ ನಾಯಿಗಳಾಗಿ ನನ್ನ ಮನೆಬಾಗಿಲಲ್ಲಿ ಬಿದ್ದಿರತೀರ."

ಥೂತ್ತೇರಿ

ಯಾಹೂ

"ಮುಂದಿನ ಜನ್ಮದಲ್ಲಿ ನೀವೇನಾಗಿರತಿರಿ?"

"ಘೇಂಡಾಮೃಗ ಆಗಿರತಿನಿ. ಆ ಸುದ್ದಿ ಬೇಡ. ನನ್ನ ಉಪನ್ಯಾಸನ ಎಷ್ಟು ಜನ ಕೇಳ್ತಾರೆ, ನನಗೆಷ್ಟು ಜನ ಭಕ್ತಾದಿಗಳಿದಾರೆ ಅನ್ನೋದೇನಾದ್ರೂ ಗೊತ್ತಿದೆಯಾ ನಿಮಗೆ ಕತ್ತೆಗಳಿಗೆ?"

"ಹಂದಿ ಬೈತಾಯಿದ್ರೆ ಕತ್ತೆಗಳಾದ ನಾವು ಸುಮ್ಮನಿರಬೇಕಾಗುತ್ತೆ ಸಾರ್. ಇಂತ ಭಾಷೆ ಎಲ್ಲಿ ಕಲ್ತಿರಿ ಇವರೆ?"

"ನಮ್ಮಪ್ಪ ಅಮ್ಮನೆ ಕಲಿಸಿದ್ರು ಕಂಡ್ರೀ. ಜನಗಳು ಒಳ್ಳೆ ಮಾತಿಗೆ ಬಗ್ಗೊದಿಲ್ಲ ಅಂತ ಅವರ ಕಲಿಸಿದ್ದು, ಅದ್ಕೆ ನೋಡಿ ನನ್ನ ಉಪನ್ಯಾಸದಲ್ಲೆ ನಾನೆಷ್ಟೇ ಬೈದರೂ ಜನ ತುಟಪಿಟಕ್ ಅನ್ನಲ್ಲ."

"ನಿಜ ಕಂಡ್ರಿ. ಮೊನ್ನೆ ನಿಮ್ಮ ಸಭೆಗೆ ಬಂದಿದ್ದೆ, ಅಲ್ಲಿದ್ದ ಸಾವಿರಾರು ಜನಗಳು ನಿಮ್ಮ ಸಂಬಂಧಿಗಳ ತರನೇ ಇದ್ರು. ನಮ್ಮಲ್ಲಿ ಬುದ್ಧಿಮಾಂದ್ಯರ ಸಂಖ್ಯೆ ಜಾಸ್ತಿಯಾಗ್ತಾ ಇದೆ ಅನುಸ್ತು."

"ಅದ್ಕೆ ಕಂಡ್ರಿ ಅವರನ್ನೆಲ್ಲಾ ಬೈದು ಎಚರಸ್ತಾಯಿದ್ದಿನಿ. ಜನಗಳನ್ನು ಬೈದು ತಿದ್ದಿ ತೀಡತಾಯಿರೊ ನನ್ನನ್ನ ಟೀಕೆ ಮಾಡ್ತಿರ, ಆಡಿಕೊಳ್ತಿರ. ನಾನು ಶಾಪ ಕೊಟ್ರೇ ನಿಮ್ಮ ಪತ್ರಿಕೆ ಸರ್ವನಾಶವಾಗಿ ಹೋಗುತ್ತೆ, ನಿಮಗೆಲ್ಲ ಬರಿಯಕ್ಕೆ ಅಂತ ಕೈನೆ ಎತ್ತಕ್ಕಾಗಲ್ಲ, ಎತ್ತಿದ್ರೂ ಬರಿಯಕ್ಕಾಗಲ್ಲ, ಬರದ್ರೂ ಇಂಕೇ ಬರಲ್ಲ. ಪತ್ರಿಕೆ ಪ್ರಿಂಟ್ ಮಾಡೊ ಮಿಷಿನ್ ಕೂಡ ಓಡಲ್ಲ."

"ಅಂತ ಶಾಪ ಕೊಡ್ತಿರ?"

"ಕೊಡ್ತಿರ ಅಂತ ಕೇಳ್ತಿರ? ಕೊಟ್ಟೆ ಕೊಡ್ತಿನಿ!"

"ಪರಿಯಾರ ಏನೂ ಇಲ್ಲವಾ?"

"ಪರಿಯಾರ ಇದೆ, ಮಾಡ್ತಿರಾ?"

"ಓ ಹೇಳಿ. ಇವತ್ತೆ ಮಾಡ್ತಿವಿ."

"ನಿಮ್ಮ ಪತ್ರಿಕೆಯವರೆಲ್ಲಾ ಒಟ್ಟಾಗಿ ಸೇರಿ, ಅಂಗೈಗೆ ಗುಲಗಂಜಿ ಮುಳಗೋವಷ್ಟು ರಂ ಬಟಕೊಂಡು 'ಓಂ ನರೇಂದ್ರ ಶರ್ಮಾಯ ನಮಃ' ಅಂತ ಮೂರು ಸತಿ ಹೇಳಿ ಗುಟಕರಿಸಬೇಕು. ಹಿಂಗೆ ಒಬ್ಬೊಬ್ಬರೂ ಒಂದೊಂದು ಬಾಟ್ಲಿ ಖಾಲಿ ಮಾಡಬೇಕು."


"ಲೋ ಬಂಡಲ್ ಶರ್ಮ, ನಿನ್ನನ್ನ ಟಿವಿ ಮುಂದೆ ಮಕ್ಕಳು ಯಾಕೆ ಕರದು ಕೂರುಸ್ತರೆ ಅಂತ ಈಗ್ಗೊತ್ತಾಯ್ತು."

"ಏನು ಗೊತ್ತಾಯ್ತು?"

"ಆಧ್ಯಾತ್ಮ, ರಾಜಕಾರಣ, ಸಾಹಿತ್ಯ, ಮನುಷ್ಯರ ಬದುಕನ್ನೆ ಮನರಂಜನೆ ಮಾಡಿ ತೋರಸಕ್ಕೆ ಅಂತ ಹೊಂಟರೊ ಟಿವಿ ಮೂರ್ಖರಿಗೆ ಅಗ್ಗವಾಗಿ ಸಿಕ್ಕಿರೊ ಮಹಾಮೂರ್ಖ ನೀನು. ಆತ್ಮವನ್ನು ಶಬ್ದಿಸುವುದಗೆ ಹೋಲಿಕೆ ಮಾಡ್ತಿಯಲ್ಲಾ ನಿನ್ನಂತ ನಗೆಗಾರ ಈ ಭೂಮಂಡಲದಲ್ಲಿ ಇಲ್ಲ, ರಿಯಲಿ ಯೂ ಆರ್ ಗ್ರೇಟ್!"

"ನಾನು ಗ್ರೇಟ್ ಅಂತ ಈಗ್ಲಾರ ಗೊತ್ತಾಯ್ತಲ್ಲ, ನಿಮ್ಮ ಸಂಪಾದಕರಿಗೂ ಹೇಳಿಬಿಡಿ."

"ಥೂತ್ತೇರಿ!!!"



ಮಂಡ್ಯದಲ್ಲಿ ಪುನರ್ಜನ್ಮ! ಸಾವಿರಾರು ಕೋಟಿ ರೂ ಆಸ್ತಿ ಉತ್ತರಾಧಿಕಾರಿ ಯಾರು?

ಮಠಾಧೀಶರಾದವರು ವೈರಾಗ್ಯ ಜೀವನ ನಡೆಸಬೇಕೆಂಬ ನಿಯಮವಿದ್ದರೂ ಇಂಡಿಯಾದ ಹಿಂದೂ ಮಠಾಧೀಶರನೇಕರು ತಮ್ಮ ನೆಂಟರ ಮಕ್ಕಳನ್ನೋ ಅಥವಾ ತಮ್ಮ ಅಕ್ರಮ ಸಂತಾನವನ್ನೋ ತಂದು ಉತ್ತರಾಧಿಕಾರಿಯನ್ನಾಗಿಸುವ ಕೆಟ್ಟ ಚಾಳಿ ಹೊಂದಿದ್ದಾರೆ. ಅವರಿಗೆ ಹೋಲಿಸಿದರೆ ಸಾಯಿಬಾಬಾ ಸ್ವಜನಪಕ್ಷಪಾತಿಯಲ್ಲ. ಬದಲಾಗಿ ಹಂಡ್ರೆಡ್ ಪರ್ಸೆಂಟ್ ಸ್ವಪ್ರೇಮಿ. ಇವನು ಈಗ ನಿರ್ಗಮಿಸಿ ಮುಂದೆಂದೋ ಒಂದು ದಿನ ಮಂಡ್ಯ ಜಿಲ್ಲೆಯಲ್ಲಿ ಪ್ರೇಮಾ ಸಾಯಿಯಾಗಿ ಜನ್ಮವೆತ್ತಿ ಬರುವಷ್ಟರಲ್ಲಿ ಈಗಿರುವ ಸಾಯಿ ಸಾಮ್ರಾಜ್ಯ ಹಾಗೇ ಇರುತ್ತದೋ ಅಥವಾ ಒಳಜಗಳಗಳಿಗೆ ಸಿಕ್ಕು ಕುಸಿದು ಬಿದ್ದಿರುತ್ತದೋ ಬಲ್ಲವರ್ಯಾರು?

• ಪಾರ್ವತೀಶ

ಬಹುಶಃ ಸತ್ಯಸಾಯಿಬಾಬಾ ಮತ್ತೆ ಎದ್ದೇಳುವುದಿಲ್ಲ!

ಪುಟ್ಟಪರ್ತಿಯಲ್ಲಿ ತಾನೇ ಕಟ್ಟಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಈಗ ತಾನೇ ರೋಗಿಯಾಗಿ ಪ್ರಜ್ಞೆತಪ್ಪಿ ಮಲಗಿರುವ ಸಾಯಿಬಾಬಾಗೆ ಈಗ ಎಂಬತ್ತಾರು ವರ್ಷ. ಸ್ವತಃ ಸಾಯಿಬಾಬಾನೆ ಹೇಳಿಕೊಂಡಂತೆ ಮತ್ತವನ ಭಕ್ತರ ನಂಬಿಕೆಯಂತೆ ಸಾಯಿಬಾಬಾನ ದೇಹಾಂತ್ಯ 2020ಕ್ಕೆ ಆಗಬೇಕಿತ್ತು. ಅಂದರೆ ಬಾಬಾಗೆ ತೊಂಭತ್ತಾರು ವರ್ಷಗಳಾದಾಗ ಆತ ದೇಹ ಬಿಡಲು ನಿರ್ಧರಿಸಿದ್ದನಂತೆ. ಆದರೆ ದೇವರಾಗಲಿ ಕೊನೆಗೆ ಸಾಯಿಬಾಬಾನೇ ಆಗಲಿ ಪ್ರಕೃತಿಯ ನಿಯಮವನ್ನು ಮೀರಲಾಗುತ್ತಿಲ್ಲ.

ಸಾಯಿಬಾಬಾನ ಕಿಡ್ನಿ, ಶ್ವಾಸಕೋಶಗಳು ಈಗ ಕೆಲಸ ಮಾಡುತ್ತಿಲ್ಲ, ಆತ life supporting system ನೆರವಿನಿಂದ ಈಗ ಉಸಿರಾಡುತ್ತಿದ್ದಾನೆ. ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ದಿನ ಸಂಭವಿಸುವ ಸಾವು ಎಂಬುದು ಈಗ ಸಾಯಿಬಾಬಾನ ಬೆನ್ನ ಹಿಂದೆಯೇ ಬಂದು ನಿಂತಂತೆ ಕಾಣುತ್ತಿದೆ. ತನ್ನ ಭಕ್ತರಿಗಾಗಿ ಶೂನ್ಯದಿಂದ ಬೂದಿ, ವಾಚು, ಉಂಗುರಗಳನ್ನು ಚಕ್ ಅಂತಾ ತೆಗೆದುಕೊಡುತ್ತಿದ್ದ ಸಾಯಿಬಾಬಾ ಈಗ ತನಗಾಗಿ ಹೊಸ ಕಿಡ್ನಿಯನ್ನೋ, ಮತ್ತೊಂದನ್ನೋ ಸೃಷ್ಟಿಸಿಕೊಳ್ಳಲಾಗದೆ ಅಸಹಾಯಕನಾಗಿದ್ದಾನೆ.

ಆಶ್ಚರ್ಯ ಅಂದರೆ ಸಾಕ್ಷಾತ್ ಸಾಯಿಬಾಬಾನಿಗೆ ಅರ್ಥವಾಗಿರಬಹುದಾದ ಈ ಕಹಿಸತ್ಯವು ಅವನ ಲಕ್ಷಾಂತರ ಭಕ್ತರಿಗೆ ಅರ್ಥವಾಗಿಲ್ಲದಿರುವುದು. ಅವರೆಲ್ಲಾ ಪುಟ್ಟಪರ್ತಿಯಲ್ಲಿದ್ದ ಪುರಾತನ ಸತ್ಯಮ್ಮ ದೇವಸ್ಥಾನದಿಂದ ದೇವತೆಯ ವಿಗ್ರಹ ತೆಗೆದುಹಾಕಿದ್ದರಿಂದಲೇ ಸಾಯಿಬಾಬಾನ ಆರೋಗ್ಯ ಕೆಟ್ಟಿತೆಂದು ನಂಬಿದ್ದಾರೆ. ದೇವಾಲಯ ನವೀಕಾರಣಕ್ಕಾಗಿ ಕೆಲವರು ಅಲ್ಲಿದ್ದ ಸತ್ಯಮ್ಮ ದೇವತೆಯ ವಿಗ್ರಹ ತೆಗೆದು ಚಿತ್ರಾವತಿ ನದಿಯಲ್ಲಿ ಮುಳುವಾಗಿಸಿ ಆ ಜಾಗದಲ್ಲೇ ಹೊಸ ವಿಗ್ರಹ ಸ್ಥಾಪಿಸಿದ್ದರು. ಆದರೀಗ ಬಾಬಾ ಹಿಂಬಾಲಕರ ಆಕ್ರೋಶ ನೋಡಿ ನದಿಯೊಳಗೆ ಹಾಕಿದ್ದ ಸತ್ಯಮ್ಮದೇವಿಯ ವಿಗ್ರಹವನ್ನು ಮತ್ತೆ ಹುಡುಕಿ ತೆಗೆದು ತಂದು ಮರು ಸ್ಥಾಪಿಸಿದ್ದಾರೆ.

ಆದರೆ ಇದರಿಂದೇನೂ ಸಾಯಿಬಾಬಾಗೆ ಪ್ರಜ್ಞೆ ಬಂದಿಲ್ಲವೆಂಬುದು ಬೇರೆ ವಿಷಯ. ಇದನ್ನೆಲ್ಲಾ ಬದಿಗಿಟ್ಟು ನೋಡುವುದಾದರೆ ಉತ್ತರ ಸಿಗದ ಅನೇಕ ಪ್ರಶ್ನೆಗಳು ಈ ಸಾಯಿಬಾಬಾನ ಸುತ್ತಾ ಕೇಳಿಬರುತ್ತಿವೆ.

ಸಾಯಿಬಾಬಾನ ಸಾಮ್ರಾಜ್ಯದ ಒಟ್ಟು ಆಸ್ತಿ ಮೌಲ್ಯ ಎಷ್ಟು?

ಸಾಯಿಬಾಬಾನ ಉತ್ತರಾಧಿಕಾರಿ ಯಾರಾಗಲಿದ್ದಾರೆ?

ಸಾಯಿಬಾಬಾನೆ 1976 ರಲ್ಲೇ ಹೇಳಿದ್ದಂತೆ ಆತ ಮಂಡ್ಯ ಜಿಲ್ಲೆಯಲ್ಲಿ ಪ್ರೇಮಾ ಸಾಯಿಯಾಗಿ ಹುಟ್ಟುತ್ತಾನಂತೆ. ಅದು ಯಾವಾಗ?

ಅಸಲಿಗೆ ಈ ಸಾಯಿಬಾಬಾ ನಿಜಕ್ಕೂ ಎಂತವನು?

ವಂಚಕ ಸ್ವಾಮಿಯಾ?

ಸಮಾಜ ಸೇವಕನಾ? ಸ್ವಚ್ಛಮನಸ್ಸಿನ ಆಧ್ಯಾತ್ಮಿಕ ಗುರುವಾ?

ಸಲಿಂಗಕಾಮ ಪ್ರವೃತ್ತಿಯ ಶಿಶುಕಾಮಿಯಾ?

ಇವನಲ್ಲಿ ಅದಿನ್ಯಾವ ಶಕ್ತಿ-ಗುಣ ಕಂಡು ಭಾರತ ದೇಶದ ಹಾಗೂ ಅನೇಕ ವಿದೇಶಿ ಗಣ್ಯರು ಬಂದು ಕಾಲಿಗೆ ಬಿದ್ದು ಹೋಗುತ್ತಿದ್ದರು!?

40 ಸಾವಿರ ಕೋಟಿ ರೂಪಾಯಿ ಆಸ್ತಿ

ಕಳೆದ ಅರವತ್ತು ವರ್ಷಗಳಿಂದ ಭಾರತದ ಅತ್ಯಂತ ಶಕ್ತಿಶಾಲಿ ಆಧ್ಯಾತ್ಮಿಕ ಗುರುವಾಗಿ ಮೆರೆದ ಸಾಯಿಬಾಬಾನ ಒಟ್ಟು ಆಸ್ತಿ ಮೌಲ್ಯ ನಲವತ್ತು ಸಾವಿರ ಕೋಟಿ ರೂಪಾಯಿಗಳು ಎನ್ನಲಾಗಿದೆ.

ಸತ್ಯ ಸಾಯಿ ಸೇವಾ ಟ್ರಸ್ಟ್ ಎಂಬ ಹೆಸರಿನ ಟ್ರಸ್ಟ್ ಒಂದು ಸಾಯಿಬಾಬಾನ ಸಮಸ್ತ ಚಟುವಟಿಕೆ, ಆದಾಯ, ಖರ್ಚು, ಕಟ್ಟಡ, ಕಾಲೇಜು, ಪುಸ್ತಕ, ಭಜನೆ... ಹೀಗೆ ಸಕಲೆಂಟನ್ನೂ ನಿಭಾಯಿಸುತ್ತಿದೆ.



ಸಾಯಿಬಾಬಾನೇ ಈ ಟ್ರಸ್ಟಿನ ಅಧ್ಯಕ್ಷ.

1926 ರಲ್ಲಿ ಸತ್ಯನಾರಾಯಣ ರಾಜುವಾಗಿ ಹುಟ್ಟಿದಾಗ ಈ ಸಾಯಿಬಾಬಾ ಬಡಪಾಯಿ ಬಡವನಾಗಿದ್ದ. ನಂತರ ತಾನು ಶಿರಡಿ ಸಾಯಿಬಾಬಾನ ಪುನರಾವತಾರವೆಂದು ಹೇಳಿಕೊಂಡು ಸತ್ಯಸಾಯಿಬಾಬಾ ಆಗಿ ಬದಲಾದಾಗ ಅವನ ಸುತ್ತ ಈಗಿನಷ್ಟು ಭಕ್ತರ ಹಿಂಡೂ ಇರುತ್ತಿರಲಿಲ್ಲ. ಆದರೆ 1960-70 ರ ದಶಕದಲ್ಲಿ ಸಾಯಿಬಾಬಾ ಲೈಮ್‌ಲೈಟಿಗೆ ಬಂದ. ಗಾಳಿಯಲ್ಲಿ ಕೈ ಅಲ್ಲಾಡಿಸಿ ಬೂದಿ, ವಾಚು, ಉಂಗುರ ತೆಗೆದುಕೊಡುತ್ತಾ ಭಕ್ತರಲ್ಲಿ ದಿಗ್ಭ್ರಮೆ ಮೂಡಿಸಿದ. ಭಾರತದಲ್ಲಿ ಹುಟ್ಟುವ ಕೋಟ್ಯಂತರ ಹಿಂದೂ ಕುರಿಗಳಿಗೆ ಧರ್ಮ, ಆಧ್ಯಾತ್ಮ, ವೈಚಾರಿಕತೆ, ತರ್ಕ, ಪವಾಡ ಯಾವುದನ್ನೂ ಸರಿಯಾಗಿ ಗ್ರಹಿಸಲು ಆಗುವುದಿಲ್ಲವಾದ್ದರಿಂದ ಸಾಯಿಬಾಬಾ ವೇಗವಾಗಿ ಬೆಳೆದ. ಡಾ. ಅಬ್ರಹಾಂ ಕೊವೂರ್, ಡಾ. ಎಚ್. ನರಸಿಂಹಯ್ಯ, ಬಸವ ಪ್ರೇಮಾನಂದ ಮುಂತಾದ ವಿಚಾರವಾದಿಗಳು ಸಾಯಿಬಾಬಾನ ಬೂದಿ ಪವಾಡಗಳ ವಿರುದ್ಧ ಬಹಿರಂಗ ಜಗಳ ನಡೆಸಿಬಿಟ್ಟರು. ಡಾ. ಎಚ್ಚೆನ್ ಬೂದಿ ಬದಲು ನನಗೆ ಕುಂಬಳಕಾಯಿ ತರಿಸಿಕೊಡು ಎಂದು ಸಾಯಿಬಾಬಾಗೆ ಇಕ್ಕಟ್ಟು ಸೃಷ್ಟಿಸಿದರು. ಬೆಂಗಳೂರಿನಲ್ಲಿ ಇವರ ಗಲಾಟೆ ತಡೆಯಲಾಗದೆ ಸಾಯಿಬಾಬಾ ಅನೇಕ ಸಾರಿ ತಲೆ ಮರೆಸಿಕೊಂಡು ಪುಟ್ಟಪರ್ತಿಗೆ ಓಡಿಹೋಗುತ್ತಿದ್ದ.

ಇದೇನೆ ಇರಲಿ, ವಿಚಾರವಾದಿಗಳ ಹಾಗೂ ಸಾಯಿಬಾಬಾ ನಡುವಿನ ಕದನದಲ್ಲಿ ಇಬ್ಬರೂ ಗೆದ್ದರು ಅಥವಾ ಯಾರೂ ಸೋಲಲಿಲ್ಲ, ಬಾಬಾ ಒಬ್ಬ ಸುಳ್ಳು ಬುರುಕ, ಅವನದು ನಕಲಿ ಪವಾಡ ಎಂಬುದನ್ನು ವಿಚಾರವಾದಿಗಳೇನೊ ಸಾಬೀತು ಮಾಡಿದರು. ಆದರೆ ಅದರಿಂದ ಬಾಬಾನ ಪಾಪುಲಾರಿಟಿಯೇನೂ ಕಡಿಮೆಯಾಗಲಿಲ್ಲ.

ಅದು ದೇಶವಿದೇಶಗಳಲ್ಲೂ ಹಬ್ಬಿ ಸ್ವದೇಶಿ ಹಾಗೂ ವಿದೇಶಿ ಕುರಿಗಳೆರಡೂ ಮಿಲಾಕತ್ ಆಗಿ ಭಕ್ತರ ಹೊಸ ಕುರಿ ಸಂತತಿಯೊಂದು ಸೃಷ್ಟಿಯಾಯಿತು.

ಸಾಯಿಬಾಬಾನ ಆಸ್ತಿ ವೇಗವಾಗಿ ಬೆಳೆಯತೊಡಗಿದ್ದು ಆ ನಂತರವೆ.

ಈಗ ಕಣ್ಣಂದಾಜಿನಲ್ಲೇ ಹೇಳಬೇಕೆಂದರೆ ಬಾಬಾನ ಪವಾಡ ಸಾಮ್ರಾಜ್ಯ ನಲವತ್ತು ಸಾವಿರ ಕೋಟಿ ರೂಪಾಯಿನಷ್ಟು ಬೆಳೆದಿದೆ. ಬಹುಶಃ ಅದೇ ಕಾಲಘಟ್ಟದಲ್ಲೇ ತಮ್ಮ ಉದ್ಯಮ ಸಾಮ್ರಾಜ್ಯ ಕಟ್ಟಲು ಶುರು ಮಾಡಿದ್ದ ಟಾಟಾ, ಬಿರ್ಲಾ, ಅಂಬಾನಿಗಳು ಮಾತ್ರ ಸಾಯಿಬಾಬಾನಿಗಿಂತ ಹೆಚ್ಚು ವಹಿವಾಟು ಹೊಂದಿದ್ದಾರೆ. ಇನ್ನುಳಿದ ಅನೇಕ ದೊಡ್ಡ ಉದ್ದಿಮೆದಾರರಿಗೆ ಹೋಲಿಸಿದರೆ ಸಾಯಿಬಾಬಾನೆ ಶ್ರೀಮಂತ.

ಪುಟ್ಟಪರ್ತಿಯಲ್ಲಿ ಸಾಯಿಬಾಬಾಗೆ ಒಂದು ಖಾಸಗಿ ಏರ್‌ಪೋರ್ಟ್ ಹಾಗೂ ಒಂದು ರೈಲ್ವೆ ನಿಲ್ದಾಣವೇ ಇದೆ. ಜೊತೆಗೊಂದು ಔಟ್‌ಡೋರ್ ಹಾಗೂ ಇನ್‌ಡೋರ್ ಸ್ಟೇಡಿಯಂಗಳಿವೆ. ಬೃಹತ್ತಾದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತಲೆಯೆತ್ತಿದೆ. ಇಷ್ಟಲ್ಲದೆ ಡಜನ್‌ಗಟ್ಟಲೆ ಶಾಲಾ ಕಾಲೇಜುಗಳು, ಸಾಯಿ ಮಂದಿರಗಳು, ಹಾಸ್ಟೆಲ್‌ಗಳು, ಗೆಸ್ಟ್‌ಹೌಸುಗಳಿವೆ. ಪುಸ್ತಕ ಪ್ರಕಾಶನ, ಭಜನೆ, ಪ್ರವಚನಗಳ ಕ್ಯಾಸೆಟ್ ಹಾಗೂ ಸಿಡಿಗಳ ವ್ಯಾಪಾರಗಳಿವೆ. ಒಂದರ್ಥದಲ್ಲಿ ಇಡೀ ಪುಟ್ಟಪರ್ತಿಯೇ ಸಾಯಿಬಾಬಾನ ಖಾಸಗಿ ಆಸ್ತಿಯಂತಿದೆ. ಟೂರಿಸಂ, ಸಾರಿಗೆ, ಹೋಟೆಲ್, ಅಂಗಡಿ ವ್ಯಾಪಾರ-ಲಾಡ್ಜ್‌ಗಳ ಪರ್ಯಾಯ ಆರ್ಥಿಕತೆಯೇ ಇಲ್ಲಿ ರೂಪು ತಳೆದಿದೆ.

ಸರಿಯಾಗಿ ಹೇಳಬೇಕೆಂದರೆ ಸಾಯಿಬಾಬಾನ ಒಟ್ಟಾರೆ ವಾರ್ಷಿಕ ಹಣಕಾಸಿನ ವಹಿವಾಟಿನ ಬಗ್ಗೆ ಆಂಧ್ರ ಸರ್ಕಾರಕ್ಕಾಗಲಿ ಅಥವಾ ಕೇಂದ್ರ ಸರ್ಕಾರದ ಆದಾಯ ತೆರಿಗೆ ಇಲಾಖೆಗಾಗಲಿ ಇವತ್ತಿಗೂ ನಿಖರ ಮಾಹಿತಿ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಕಾರ್ಯ ನಿರ್ವಹಿಸಬೇಕಾದ ಸರ್ಕಾರವೇ ಸಾಯಿಬಾಬಾನ ಗುಲಾಮನಂತೆ ವರ್ತಿಸುವಾಗ ಬಾಬಾನ ಆದಾಯ, ಖರ್ಚುಗಳ ಲೆಕ್ಕ ಕೇಳುವ ಮಾತೆಲ್ಲಿ?

ಆದರೆ ಸಾಯಿಬಾಬಾನ ಕೊನೆಗಾಲ ಹತ್ತಿರವಾಗುತ್ತಿದ್ದಂತೆ ಆಂಧ್ರ ಸರ್ಕಾರ ಎಚ್ಚೆತ್ತುಕೊಂಡಿದೆ. ಅಕಸ್ಮಾತ್ ಈಗೇನಾದರೂ







ಚಿನ್ನದ ರಥ, ಚಿನ್ನದ ಸಿಂಹಾಸನ ಭವ್ಯ ಅರಮನೆಗಳ ಖಯಾಲಿ



ಸಾಯಿಬಾಬಾ ಪರಮ ವೈರಾಗ್ಯ ಮೂರ್ತಿಯೇನಲ್ಲ, ಇಂಡಿಯಾದ ಇನ್ನಿತರ ಜಗದ್ಗುರುಗಳ ತರದವನೂ ಅಲ್ಲ. ...ವನ ಬೋಧನೆಗಳಲ್ಲಿ ಮಹತ್ವವಾದದ್ದೇನೂ ಇಲ್ಲ. ಹುಡುಕಿ ಜರಡಿ ಹಿಡಿದರೆ ಉಳಿಯುವುದು ಬರೀ ಲೊಳಲೊಟ್ಟೆ ಮಾತ್ರ. ತನ್ನ ಭಕ್ತರಿಗೆ ಭಜನೆ ಮಾಡಿಸುವುದು, ಎಲಿಮೆಂಟರಿ ಲೆವೆಲ್‌ನ ಜೀವನ ಮೌಲ್ಯಗಳ ಬಗ್ಗೆ ಮಾತನಾಡುವ ...ಸಿಸವನ್ನಷ್ಟೇ ಬಾಬಾ ಮಾಡುತ್ತಿದ್ದ. ಆದರೆ ಈ ಮಿಡಿಯೋಕರ್ ಕೆಲಸ ಮಾಡಿಯೇ ಸಾಯಿಬಾಬಾ ಭಾರೀ ಸಂಪತ್ತು ...ಳಿಸಿದ್ದ. ನೀವೊಮ್ಮೆ ಇಲ್ಲಿ ಪ್ರಕಟಿಸಿರುವ ಫೋಟೋಗಳತ್ತ ನೋಡಿ.

ಸಾಯಿಬಾಬಾ ಕುಳಿತಿರುವ ಪ್ರತಿ ಸಿಂಹಾಸನವೂ ಒಂದೋ ಚಿನ್ನದ್ದು ಇಲ್ಲ ಬೆಳ್ಳಿಯದ್ದು. ತನ್ನ ಸಂಚಾರಕ್ಕಾಗಿ ಕೆಲವು ...ಥಗಳನ್ನೇ ರೆಡಿ ಮಾಡಿಸಿಕೊಂಡಿದ್ದ ಸಾಯಿಬಾಬಾ ಅನೇಕ ಆಶ್ರಮದ ವಿದ್ಯಾರ್ಥಿಗಳನ್ನೇ ರಥ ಎಳೆಯುವ ಕುದುರೆಗಳಂತೆ ...ಳಸುತ್ತಿದ್ದ. ಸಮಾಜ ಸೇವೆ ಮಾಡಬೇಕೆನ್ನುವವರಿಗೆ ಈ ಚಿನ್ನದ ಸಿಂಹಾಸನ, ಬೆಳ್ಳಿ ರಥಗಳ ಖಯಾಲಿ ಯಾಕೆ ಬೇಕು?

ಈ ಸಾಯಿಬಾಬಾ ಪುಟ್ಟಪರ್ತಿ, ಊಟಿ ಹಾಗೂ ಬೆಂಗಳೂರಿನ ವೈಟ್ ಫೀಲ್ಡ್‌ಗಳಲ್ಲಿ ತನಗಾಗಿ ಕಟ್ಟಿಸಿಕೊಂಡಿರುವ ...ರಮನೆಗಳನ್ನು ನೋಡಬೇಕು. ಹೆಸರಿಗೆ ಇವನ್ನು ಪ್ರಶಾಂತಿಧಾಮ, ಆಶ್ರಮ ಎನ್ನಲಾಗುತ್ತದೆಯಾದರೂ ಒಳಗಡೆ ಇವೆಲ್ಲ ...ಭವೋಪೇತ ಅರಮನೆಗಳೇ ಆಗಿವೆ. ಈ ಬಾಬಾ ಅದೆಂತ ತಿಕ್ಕಲನೆಂದರೆ ತನ್ನ ಆಶ್ರಮ ಮಾತ್ರವಲ್ಲ, ಕಟ್ಟಿಸಿರುವ ...ಸ್ಪತ್ರೆಗಳನ್ನೂ ಅರಮನೆಗಳ ರೀತಿಯ ಡಿಸೈನ್ ಮಾಡಿಸಿದ್ದಾನೆ.

...ಬಾಬಾ ಮತ್ತೆ ಎದ್ದು ಬರದಿದ್ದರೆ ಅವನ ...ಜ್ಯದ ಉಸ್ತುವಾರಿಯನ್ನು ಹೇಗೆ ...ಸಬೇಕೆಂದು ಯೋಚಿಸಿದೆ. ಹಿರಿಯ ...ಸ್ ಅಧಿಕಾರಿ ಎಲ್.ವಿ. ಸುಬ್ರಮಣ್ಯ ...ವರ ನೇತೃತ್ವದಲ್ಲಿ ಇನ್ನೂ ನಾಲ್ವರು ಹಿರಿಯ ...ರಿಗಳನ್ನು ನೇಮಿಸಿ ಮುಂದಿನ ಕಾರ್ಯ ...ಜನೆ ಬಗ್ಗೆ ನಿಗಾ ಇಡಲು ಆದೇಶಿಸಿದೆ.

...ದರೆ ಈ ಸಾಯಿಬಾಬಾ ಸೃಷ್ಟಿಸಿರುವ ಹೊಸ ... ಏನೆಂದರೆ ತನ್ನ ಉತ್ತರಾಧಿಕಾರಿ ಯಾರೆಂದು ...ರುವುದು. ಅದೀಗ ನಾನಾ ರೀತಿಯ ತಿರುವು ...ಯುತ್ತಾ, ಅನೇಕ ವಿವಾದಗಳಿಗೆ ...ವಾದರೂ ಆಶ್ಚರ್ಯವಿಲ್ಲ.

ಟ್ರಸ್ಟ್‌ನಲ್ಲಿ ಒಳಜಗಳ

... ಸಾಯಿಬಾಬಾ ತನ್ನ ಉತ್ತರಾಧಿಕಾರಿ ...ಂದು ನೇಮಿಸದೇ ಹೋದರೂ ತನ್ನ ...ಜ್ಯದ ಉಸ್ತುವಾರಿ ನಿಯಂತ್ರಿಸಲು ಒಂದು ... ಅಂತೂ ಮಾಡಿದ್ದಾನೆ. ತನ್ನ ಪವಾಡ ...ದುದ್ದಕ್ಕೂ ನೆಂಟರಿಷ್ಟರನ್ನು ದೂರವೇ ಇಟ್ಟಿದ್ದ ... ಇತ್ತೀಚೆಗೆ ರತ್ನಾಕರ್ ಎಂಬುವನನ್ನು ...ಂಡಿದ್ದ.

ಈ ರತ್ನಾಕರ್ ಬೇರೆ ಯಾರೂ ಅಲ್ಲ ಸಾಯಿಬಾಬಾನ ಕಿರಿಯ ತಮ್ಮ ಜಾನಕಿರಾಂನ ಮಗ. ಈಗ ರತ್ನಾಕರ್‌ಗೂ ಟ್ರಸ್ಟ್ ಸೆಕ್ರೆಟರಿ ಕೆ. ಚಕ್ರವರ್ತಿಗೂ ಚಕಮಕಿ ಹತ್ತಿಕೊಳ್ಳುತ್ತಿದೆ. ಮಾಜಿ ಐಎಎಸ್ ಅಧಿಕಾರಿಯಾಗಿರುವ ಚಕ್ರವರ್ತಿ ಬಹಳ ವರ್ಷಗಳಿಂದ ಸಾಯಿಬಾಬಾ ಟ್ರಸ್ಟ್‌ಗೆ ಸೆಕ್ರೆಟರಿಯಾಗಿದ್ದಾನೆ. ಅದೇ ಟ್ರಸ್ಟ್‌ನಲ್ಲಿ ಮುಂಬೈನ ಬ್ಯುಸಿನೆಸ್‌ಮೆನ್ ಇಂದೂಲಾಲಾ ಶಾ ಮುಖ್ಯ ಸಂಚಾಲಕನಾಗಿದ್ದಾನೆ. ಇವನಿಗೆ ಸತ್ಯಸಾಯಿ ಆರ್ಗನೈಸೇಷನ್‌ನ ಉಸ್ತುವಾರಿ ಕೊಡಲಾಗಿತ್ತು. ಚೆನ್ನೈದ ಉದ್ಯಮಿ ಟಿವಿಎಸ್ ಗ್ರೂಪ್‌ನ ವೇಣು ಶ್ರೀನಿವಾಸನ್ ಕೂಡ ಸಾಯಿ ಟ್ರಸ್ಟ್‌ಗೆ ಮೆಂಬರ್ ಆಗಿದ್ದಾನೆ. ಎಂ. ಶ್ರೀನಿವಾಸ್ ಎನ್ನುವ ಇನ್ನೊಬ್ಬ ಟ್ರಸ್ಟ್ ಸದಸ್ಯತ್ವವಲ್ಲದೆ ಸಾಯಿ ಸೋಷಿಯಲ್ ಚಾರಿಟಿ ವರ್ಕ್‌ನ ಮುಖ್ಯಸ್ಥನಾಗಿ ಕುಳಿತಿದ್ದಾನೆ. ಇವರೆಲ್ಲರ ಜೊತೆಗೆ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ಭಗವತಿಯೂ ಮೆಂಬರ್ ಆಗಿದ್ದಾರೆ. ಎಸ್.ವಿ. ಗಿರಿ ಎನ್ನುವಾತನೂ ಇದ್ದಾನೆ. ಈತ ಸಾಯಿ ವಿಶ್ವವಿದ್ಯಾಲಯದ ಮಾಜಿ ಉಪ ಕುಲಪತಿ.

ಈಗೇನಾಗಿದೆಯೆಂದರೆ ಯಾವಾಗ ಸಾಯಿಬಾಬಾನ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಿ ಪ್ರಜ್ಞೆ ತಪ್ಪಿ ಮಲಗಿದನೋ ಟ್ರಸ್ಟ್‌ನ ಕಂಟ್ರೋಲಿಗಾಗಿ ಒಳಜಗಳದ ಬೆಂಕಿ ಹತ್ತಿಕೊಂಡಿದೆ. ಈ ಮೊದಲು ಅನಂತಪುರಂನ ಜಿಲ್ಲಾಧಿಕಾರಿಯಾಗಿದ್ದ, ನಂತರ 1970ರಲ್ಲಿ ಟ್ರಸ್ಟ್‌ಗೆ ಸೇರಿದ ಹಾಲಿ ಸೆಕ್ರೆಟರಿ ಚಕ್ರವರ್ತಿ ಬಗ್ಗೆ ಯಾರಿಗೂ ದೂರುಗಳಿಲ್ಲ. ಮತ್ತೊಂದೆಡೆ ಬಾಬಾನ ನೆಂಟ ರತ್ನಾಕರ್ ಟ್ರಸ್ಟ್‌ಗೆ ಹೊಸದಾಗಿ ಸೇರಿದ್ದರೂ ಕೆಲವು ಸಾಯಿ ಭಕ್ತರ ಬೆಂಬಲ ಅವನಿಗಿದೆ. ಮುಂದಿನ ದಿನಗಳಲ್ಲಿ ಒಂದೋ ಆಂಧ್ರ ಸರ್ಕಾರ ಇಡೀ ಸಾಯಿ ಸಾಮ್ರಾಜ್ಯವನ್ನೇ ತನ್ನ ವಶಕ್ಕೆ ಪಡೆದು ನಿಭಾಯಿಸಬೇಕು ಇಲ್ಲಾ ಸಾಯಿ ಟ್ರಸ್ಟ್‌ನವರಿಗೆ ಸಾಮ್ರಾಜ್ಯ ಬಿಟ್ಟು ಕೊಡಬೇಕು.

ಆಂಧ್ರ ಸರ್ಕಾರದ 1966 ರ ಧಾರ್ಮಿಕ ದತ್ತಿ ಹಾಗೂ ಹಿಂದೂ ಕಾಯ್ದೆ ಪ್ರಕಾರ ಸಾಯಿಬಾಬಾನ ಆಸ್ತಿಯನ್ನು ಸರ್ಕಾರ ವಶಪಡಿಸಿಕೊಳ್ಳಲು ಸಾಧ್ಯವಿದೆ. ಈ ಕಾಯ್ದೆಯ ಪ್ರಕಾರವೇ 1966 ರಲ್ಲಿ ತಿರುಪತಿ ದೇವಸ್ಥಾನ ಮತ್ತದರ ಸಮಸ್ತ ವಹಿವಾಟುಗಳು ಆಂಧ್ರ ಸರ್ಕಾರದ ವಶಕ್ಕೆ ಬಂದಿದ್ದು. ಸಾಯಿಬಾಬಾನ ಭಕ್ತವೃಂದ ಹಾಗೂ ಆಧ್ಯಾತ್ಮದ ಬ್ಯುಸಿನೆಸ್ ಸುಮಾರು ನೂರೈವತ್ತು ದೇಶಗಳಲ್ಲಿ ಹರಡಿವೆ.

ಹೆಚ್ಚುಕಡಿಮೆ ಇವೆಲ್ಲಾ ಒಟ್ಟು ಸೇರಿದರೆ ಐವತ್ತು ಲಕ್ಷ ಅನುಯಾಯಿಗಳು ಅವನಿಗಿದ್ದಾರಂತೆ.

ಸಾಯಿಬಾಬಾ ನಂತರವೂ ಇದೆಲ್ಲಾ ಹೀಗೇ ಮುಂದುವರಿಯುತ್ತದೆಂದು ಹೇಳಲಾಗದು. ಬಾಬಾನ ಆರೋಗ್ಯ ಕೆಡುತ್ತಿರುವುದು ಇದೇ ಮೊದಲೇನಲ್ಲ, ಈ ಹಿಂದೆ 1963 ರಲ್ಲೇ ಅವನಿಗೆ ಒಮ್ಮೆ ಲಕ್ವಾ ಹೊಡೆದಿತ್ತು, ನಾಲ್ಕು ಸಾರಿ ಹೃದಯಾಘಾತವೂ ಆಗಿತ್ತು, ಇದನ್ನೆಲ್ಲಾ ಜಯಿಸಿಕೊಂಡು ವೀಲ್ ಚೇರ್‌ನಲ್ಲಿ ಕುಳಿತೇ ಬದುಕಿಕೊಂಡಿದ್ದ ಸಾಯಿಬಾಬಾಗೆ ತನ್ನ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ನೇಮಿಸಬೇಕು ಎನ್ನುವ ವಿಚಾರ ತಿಳಿಯದೆ ಏನಿರಲಿಲ್ಲ. ಆದರೆ ಅರ್ಜೆಂಟಾಗಿ ತಾನೇ ಪುನರ್ಜನ್ಮವೆತ್ತಿ ಬರುವ ಛಾನ್ಸ್ ಇರುವಾಗ stop gap ಅರೇಂಜ್‌ಮೆಂಟೆಂದು ಬೇರೊಬ್ಬರನ್ನು ತಂದು ಯಾಕೆ ಕೂರಿಸಬೇಕೆನ್ನುವುದೇ ಬಾಬಾನ ತರ್ಕವಾಗಿದೆ. ಹಾಗೆ ನೋಡಿದರೆ ಇತರ ಹಿಂದೂ ಮಠಾಧೀಶರಿಗಿಂತ ಸಾಯಿಬಾಬಾನೇ ವಾಸಿ ಎನ್ನಬೇಕು. ಯಾಕೆಂದರೆ ಮಠಾಧೀಶರಾದವರು ವೈರಾಗ್ಯ ಜೀವನ ನಡೆಸಬೇಕೆಂಬ ನಿಯಮವಿದ್ದರೂ ಇಂಡಿಯಾದ ಹಿಂದೂ ಮಠಾಧೀಶರನೇಕರು ತಮ್ಮ ನೆಂಟರ ಮಕ್ಕಳನ್ನೋ ಅಥವಾ ತಮ್ಮ ಅಕ್ರಮ ಸಂತಾನವನ್ನೋ ತಂದು ಉತ್ತರಾಧಿಕಾರಿಯನ್ನಾಗಿಸುವ ಕೆಟ್ಟ ಚಾಳಿ ಹೊಂದಿದ್ದಾರೆ. ಅವರಿಗೆ ಹೋಲಿಸಿದರೆ ಸಾಯಿಬಾಬಾ ಸ್ವಜನಪಕ್ಷಪಾತಿಯಲ್ಲ, ಬದಲಾಗಿ ಹಂಡ್ರೆಡ್ ಪರ್ಸೆಂಟ್ ಸ್ವಪ್ರೇಮಿ. ಇವನು ಈಗ ನಿರ್ಗಮಿಸಿ ಮುಂದೆಂದೋ ಒಂದು ದಿನ ಮಂಡ್ಯ ಜಿಲ್ಲೆಯಲ್ಲಿ ಪ್ರೇಮಾ ಸಾಯಿಯಾಗಿ ಜನ್ಮವೆತ್ತಿ ಬರುವಷ್ಟರಲ್ಲಿ ಈಗಿರುವ ಸಾಯಿ ಸಾಮ್ರಾಜ್ಯ ಹಾಗೇ ಇರುತ್ತದೋ ಅಥವಾ ಒಳಜಗಳಗಳಿಗೆ ಸಿಕ್ಕು ಕುಸಿದು ಬಿದ್ದಿರುತ್ತದೋ ಬಲ್ಲವರ್ಯಾರು?

ಇಪ್ಪತ್ತನೇ ಶತಮಾನಕ್ಕೇ ಮುಗಿದುಹೋಗಬೇಕಿದ್ದ ಬೂದಿಬಾಬಾಗಳು ಮತ್ತವರ ಪವಾಡಗಳು ಅಷ್ಟು ಬೇಗ ಅಳಿದು ಹೋಗುವುದಿಲ್ಲ. ಸಾಯಿಬಾಬಾ ತರದವರೇ ಆದ ಚಂದ್ರಸ್ವಾಮಿ, ಚಂಚಂಭಟ್ಟ ಮುಂತಾದವರು ಆಯಕಟ್ಟಿನಲ್ಲಿ ಜಾಗ ಮಾಡಿಕೊಂಡು ಪವರ್ ಬ್ರೋಕರುಗಳಾಗಿ, ಶಸ್ತ್ರಾಸ್ತ್ರ ದಲ್ಲಾಳಿಗಳಾಗಿ, ಕಮಿಷನ್ ಏಜೆಂಟರಾಗಿ ಕಪ್ಪುಹಣ ನಿಭಾಯಿಸುವ ದಲ್ಲಾಳಿಗಳಾಗಿ ನಾನಾ ತರದ ಕೆಲಸಗಳನ್ನು ಮಾಡಿಕೊಡುತ್ತಿರುತ್ತಾರೆ. ರಾಜಕಾರಣಿಗಳು, ಅಧಿಕಾರಶಾಹಿ, ದೇಶ ವಿದೇಶಗಳ ಉದ್ದಿಮೆದಾರರ ನಡುವಿನ ಕೊಂಡಿಯಂತೆ ಕೆಲಸ ಮಾಡುತ್ತಿರುತ್ತಾರೆ. ಸಾಯಿಬಾಬಾ ಇದಕ್ಕಿಂತ ಭಿನ್ನವಾಗಿದ್ದ ಆಧ್ಯಾತ್ಮಿಕ ಗುರು ಏನಲ್ಲ.

...ಮಂಡ್ಯದಲ್ಲಿ ಹುಟ್ಟುತ್ತಾನಂತೆ ಬಾಬಾ ...ನಾರಾಗಬಹುದು ಪ್ರೇಮಾ ಸಾಯಿ?



...ಾಯಿಬಾಬಾಗೆ ತನ್ನ ಉತ್ತರಾಧಿಕಾರಿ ...ಬ ಬಗ್ಗೆ ಕಿಂಚಿತ್ತೂ ಗೊಂದಲವಿಲ್ಲ. ...ಕರೆ ಅವನೇ ಮತ್ತೆ ಜನ್ಮ ತಾಳಿ ...ತ್ತಾನಂತೆ! ಅದು ...ಲ್ಲಿ, ಅಲ್ಲ ...ಟಕದಲ್ಲಿ! ಮಂಡ್ಯ ...ಯಲ್ಲಿ!! ...ದರೆ ಬಾಬಾ ...ನ ಜನ್ಮದಲ್ಲಿ ... ದೇಹ ಧರಿಸಿ ...ತ್ತಾನಂತೆ, ಮತ್ತವರ ... ಪ್ರೇಮಾ ಸಾಯಿ ... ಬಗ್ಗೆ 1976ರಿಂದ ...ಬಾಬಾನೇ ...ತ್ತಿರುವ ಕತೆ ಹೀಗಿದೆ. ...ಯಿಬಾಬಾ ...ರಿಯು ಶಿವ ಮತ್ತು ...ಪಾರ್ವತಿಯು ...ದಿಂದ ಆಗಿದೆಯಂತೆ. 1918ರಲ್ಲಿ ...ದ ಶಿರಡಿ ಸಾಯಿಬಾಬಾ ಕೇವಲ ಶಿವನ



ಅವತಾರವಾಗಿದ್ದರಂತೆ. ನಂತರ 1926ರಲ್ಲಿ ಹುಟ್ಟಿದ್ದ ಸತ್ಯನಾರಾಯಣ ರಾಜು ಶಿವ ಮತ್ತು ಶಕ್ತಿಯರ ಜಂಟಿ ಅವತಾರವಂತೆ. ಆತನೇ ಮುಂದೆ ಸತ್ಯ ಸಾಯಿಬಾಬಾ ಆದ. ಶಿರಡಿ ಸಾಯಿಬಾಬಾನ ಪರಂಪರೆಗೆ ವಾರಸುದಾರನಾದ. ಶಿರಡಿ ಸಾಯಿಬಾಬಾ ಸಹ ತನ್ನ ಉತ್ತರಾಧಿಕಾರಿಯು ಆಗಿನ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಹುಟ್ಟುತ್ತಾನೆಂದು ಭವಿಷ್ಯ ನುಡಿದಿದ್ದನಂತೆ!


ಈಗ ಈ ಸಾಯಿಬಾಬಾ ಕೂಡಾ ತನ್ನ ಉತ್ತರಾಧಿಕಾರಿಯು ಮಂಡ್ಯದಲ್ಲಿ ಜನ್ಮ ತಾಳಲಿದ್ದಾನೆಂದು ಹೇಳಿದ್ದಾನೆ. ಈ ಬಾರಿ ಕೇವಲ ಶಕ್ತಿಯ ಅವತಾರ ಇದಾಗಲಿದ್ದು ತನ್ನ ಹೊಸ ಅವತಾರಕ್ಕೆ ಪ್ರೇಮಾ ಸಾಯಿ ಎಂತಲೂ ಅನೌನ್ಸ್ ಮಾಡಿಬಿಟ್ಟಿದ್ದಾನೆ.

ಇದು ಇವತ್ತಲ್ಲಾ ನಾಳೆ ಹೊಸ ಸಮಸ್ಯೆಗೆ ಕಾರಣವಾಗದಿರದು. ಯಾರೋ ಕಿಲಾಡಿಗಳು ಅಥವಾ ತಲೆಕೆಟ್ಟ ಗಿರಾಕಿಗಳು ತಾನೇ ಪ್ರೇಮಾ ಸಾಯಿ ಅಂತ ಪುಟ್ಟಪರ್ತಿಗೆ ಹೊರಟುನಿಂತರೆ ಏನು ಮಾಡುವುದು? ಅಥವಾ ಮಂಡ್ಯ ಜಿಲ್ಲೆಯಲ್ಲಿ ಠಿಕಾಣಿ ಹಾಕಿ ಹೊಸ ಆಧ್ಯಾತ್ಮಿಕ ಧಂಧೆ ಚಾಲೂ ಮಾಡಿಕೊಂಡರೆ ಆ ತಲೆನೋವನ್ನು ಸಹಿಸುವುದಾದರೂ ಹೇಗೆ?


ಆದರೆ ಸಾಯಿಬಾಬಾನ ಇನ್ನೊಂದು ಭಕ್ತರ ಗುಂಪು ಬಾಬಾರ ಮುಂದಿನ ಅವತಾರ ಫಾರಿನ್‌ನಲ್ಲಾಗುತ್ತದೆ ಎಂದು ಈಗಾಗಲೇ ಪ್ರಚಾರ ಮಾಡುತ್ತಿದ್ದಾರೆ.

ಯಾರಿಗೆ ಗೊತ್ತು ನಾಳೆ ಮಂಡ್ಯದಲ್ಲೋ ಮತ್ತೊಂದೆಡೆಯಲ್ಲೋ ಏಕಕಾಲದಲ್ಲಿ ತಾನೇ ಸಾಯಿಬಾಬಾ ಪುನರಾವತಾರವೆಂದು ಕೆಲವರು ಗದ್ದಲವೆಬ್ಬಿಸಲೂಬಹುದು. ಈ ಹಿಂದೆ ಶ್ರೀರಂಗಪಟ್ಟಣದಲ್ಲಿ ಯಾರೋ ತಾನೇ ಸಾಯಿಬಾಬಾನ ಹೊಸ ಅವತಾರವೆಂದು ಸೀನ್ ಕ್ರಿಯೇಟ್ ಮಾಡಿದ್ದರು.

ಸಾಯಿಬಾಬಾಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲೆ ಮುಂದಿನ ದಿನಗಳಲ್ಲಿ ಸುದ್ದಿಯಲ್ಲಿರುತ್ತದೆಂಬ ಬಗ್ಗೆ ಅನುಮಾನವೇ ಇಲ್ಲ.



ಸಾಯಿಬಾಬಾ ಸುತ್ತ ಸೆಕ್ಸ್ ಸ್ಕ್ಯಾಂಡಲ್



ಭಾರತದ ಕಳೆದ ಅರವತ್ತು ವರ್ಷಗಳ ಧಾರ್ಮಿಕ ಇತಿಹಾಸವನ್ನು ಅವಲೋಕಿಸಿದರೆ, ಇಲ್ಲಿ ಬಂದುಹೋದ ಸ್ವಾಮಿಗಳಿಗೆ ಲೆಕ್ಕವಿಲ್ಲ. ರಜನೀಶ್, ಚಂದ್ರಶೇಖರ, ನಿತ್ಯಾನಂದ, ಸತ್ಯಾನಂದ ತರಹದವರು ಹಲವೊಮ್ಮೆ ಕ್ಲಿಕ್ ಆಗಿ, ಕೆಲವೊಮ್ಮೆ ಫೇಲಾಗಿ ತಮ್ಮ ಅದೃಷ್ಟದೊಂದಿಗೆ ಕೊಂಚಕಾಲ ಸೆಣಸಾಡಿ ಹೋದರು. ಆದರೆ ಸಾಯಿಬಾಬಾ ಮಾತ್ರ ಈ ಅವಧಿಯಲ್ಲಿ ಪ್ರಖ್ಯಾತಿಯ ಉತ್ತುಂಗ ಏರಿದ 'ಧಾರ್ಮಿಕ' ಪುರುಷ. ಈತನ ಲಕ್ಷಾಂತರ ಆರಾಧಕರು ಈತನಲ್ಲಿ ದೈವಾಂಶ ಗುರುತಿಸಿದ್ದರೆ, ಅನೇಕರು ಈತನನ್ನು ದೇವರ ಅವತಾರ ಎಂದೇ ಭಾವಿಸಿದ್ದರು.

ಮೊದಮೊದಲು ಈತನ ದೈವಶಕ್ತಿಯ ವಿರುದ್ಧ ಕೊವೂರ್, ಎಚ್.ನರಸಿಂಹಯ್ಯ, ಬಸವ ಪ್ರೇಮಾನಂದ ತರಹದ ವಿಚಾರವಾದಿಗಳು ಸಮರ ಸಾರಿದ್ದರು ನಿಜ. ಆದರೆ ಅದರಿಂದ ಸಾಯಿ ಬಾಬಾನ ಇಮೇಜಿಗೆ ಯಾವ ಧಕ್ಕೆಯೂ ಆಗಿರಲಿಲ್ಲ. ಆದರೆ ಕಳೆದ ಶತಮಾನದ 70ನೇ ದಶಕದಿಂದ ಸಾಯಿ ಬಾಬಾ ವಿರುದ್ಧ ಇನ್ನೂ ಹೆಚ್ಚಿನ ಆಘಾತಕಾರಿ ಆರೋಪಗಳು ಕೇಳಿಬಂದವು. ಅದು ಬಾಲಕರ, ಯುವಕರ ಮೇಲೆ ಸಾಯಿ ಬಾಬಾ ನಡೆಸಿದ್ದ ಲೈಂಗಿಕ ಅತ್ಯಾಚಾರಗಳನ್ನು ಕುರಿತ ಆರೋಪಗಳು.


ಮೊದಮೊದಲು ಈತನ ದೈವಶಕ್ತಿಯ ವಿರುದ್ಧ ಕೊವೂರ್, ಎಚ್.ನರಸಿಂಹಯ್ಯ, ಬಸವ ಪ್ರೇಮಾನಂದ ತರಹದ ವಿಚಾರವಾದಿಗಳು ಸಮರ ಸಾರಿದ್ದರು ನಿಜ. ಆದರೆ ಅದರಿಂದ ಸಾಯಿ ಬಾಬಾನ ಇಮೇಜಿಗೆ ಯಾವ ಧಕ್ಕೆಯೂ ಆಗಿರಲಿಲ್ಲ. ಆದರೆ ಕಳೆದ ಶತಮಾನದ 70ನೇ ದಶಕದಿಂದ ಸಾಯಿ ಬಾಬಾ ವಿರುದ್ಧ ಇನ್ನೂ ಹೆಚ್ಚಿನ ಆಘಾತಕಾರಿ ಆರೋಪಗಳು ಕೇಳಿಬಂದವು. ಅದು ಬಾಲಕರ, ಯುವಕರ ಮೇಲೆ ಸಾಯಿ ಬಾಬಾ ನಡೆಸಿದ್ದ ಲೈಂಗಿಕ ಅತ್ಯಾಚಾರಗಳನ್ನು ಕುರಿತ ಆರೋಪಗಳು.

ಕರಡಿ ಕೂದಲಿನ, ಉದ್ದನೆಯ ಕಾವಿ ಧರಿಸುವ ಸಾಯಿಬಾಬಾ ತಾನು ಹೇಳಿಕೊಳ್ಳುವಂಥ ದೈವೀ ಸ್ವರೂಪದವನಲ್ಲ, ಬದಲಾಗಿ ತನ್ನೊಳಗೆ ಎಲ್ಲಾ ತರಹದ ವಿಕೃತಿಗಳನ್ನು ಹೊಂದಿರುವ; ಅಮಾಯಕರನ್ನು, ಮುಗ್ಧರನ್ನು ಭಕ್ತಿಯ ಹೆಸರಿನಲ್ಲಿ ತನ್ನ ಕಾಮತೃಷೆಗಾಗಿ ಬಳಸಿಕೊಂಡಿರುವ ಪರಮ ವಿಕೃತಮನುಷ್ಯ ಎಂದು ಆತನ ಮಾಜಿ ಭಕ್ತರಾಗಿದ್ದ ಹಲವಾರು ವಿದೇಶಿಯರು 90ರ ದಶಕದಲ್ಲಿ ಆರೋಪಿಸಿದ್ದರು. ಆಗ ಅವರೆಲ್ಲ ಹೊರಗೆಡವಿದ ಸತ್ಯಗಳು ಸಾಯಿಬಾಬಾನ ಅಸ್ತಿತ್ವವನ್ನೇ ಅಲ್ಲಾಡಿಸಿದ್ದವು.


ಎಲ್ಲರನ್ನೂ ಬೆಚ್ಚಿಬೀಳಿಸಿದ್ದ ಈ ಆರೋಪಗಳು 'ಸತ್ಯ' ಸಾಯಿಬಾಬಾನ 'ಸತ್ಯ' ಮುಖವನ್ನು ಬಹಿರಂಗಗೊಳಿಸಿತ್ತು. ಇದು ಬರೀ ಆತನ ಲೈಂಗಿನ ಬದುಕಿಗೆ ಸಂಬಂಧಿಸಿದ್ದರೆ ಅದು ಮನುಷ್ಯ ಸಹಜ ಪ್ರಕ್ರಿಯೆ ಎಂದು ಸುಮ್ಮನಾಗಬಹುದಿತ್ತು. ಆದರೆ ಸಾಯಿಬಾಬಾ ಹಲವಾರು ಬಾಲಕರನ್ನು, ಯುವಕರನ್ನು ತನ್ನ ಲೈಂಗಿಕ ಕ್ರಿಯೆಗೆ ಬಲಿಪಶುಗಳನ್ನಾಗಿ ಮಾಡಿಕೊಂಡಿದ್ದು ಎಂತಹವರನ್ನೂ ದಂಗುಬಡಿಸುವಂತಿತ್ತು.

ಉದಾಹರಣೆಗೆ ವೈಟ್‌ಫೀಲ್ಡ್‌ನಲ್ಲಿರುವ ಸಾಯಿ ಸಂಸ್ಥೆಯಲ್ಲಿ ಓದುತ್ತಿದ್ದ ಮೀನಾಕ್ಷಿ ಶ್ರೀನಾಥ್ ಎಂಬ ವಿದ್ಯಾರ್ಥಿನಿ ತಾನು ಅಲ್ಲಿ ಗಮನಿಸಿದ್ದನ್ನು ಬಹಿರಂಗಪಡಿಸಿದ್ದಳು. ಆಕೆ ಹೇಳಿದ್ದು ಇಲ್ಲಿದೆ:

"ನಾನು ಆ ಸಂಸ್ಥೆಯಲ್ಲಿ ಓದುತ್ತಿದ್ದಾಗ ಕೆಲವು




ವಿದ್ಯಾರ್ಥಿಗಳನ್ನು ಪ್ರತ್ಯೇಕಿಸಿ ಅವರು 'ಫಾರಂನಲ್ಲಿದ್ದಾರೆ' ಎಂದು ಸೂಚಿಸಲಾಗುತ್ತಿತ್ತು. 'ಫಾರಂ'ನಲ್ಲಿರುವ ವಿದ್ಯಾರ್ಥಿಗಳಿಗೆ ಅಲ್ಲಿ ಹೆಚ್ಚಿನ ಒಲವು ತೋರಿಸಲಾಗುತ್ತಿತ್ತು. ನಂದನ್ ಎಂಬಾತ ಇದೇ ಕಾಲೇಜಿನ ವಿದ್ಯಾರ್ಥಿಯಾಗಿದ್ದ. ಮೂರು




ಬಾಬಾ ಬೆಡ್‌ರೂಮ್‌ನಲ್ಲೇ ಕೊಲೆಗಳಾದವು




pic.7





ಎನ್. ರಾಧಾಕೃಷ್ಣನ್, ಸಾಯಿ ಕುಮಾರ್ ಮಹಾಜನ್, ಸುರೇಶ್ ಸಂತಾನಂ, ಪ್ರಭು, ಸಾಯಿರಾಂ, ಜಗನ್ನಾಥನ್, ಸುರೇಶ್ ಕುಮಾರ್....

1993 ರ ಜೂನ್ ತಿಂಗಳ 6 ನೇ ತಾರೀಖು ಸಾಯಿಬಾಬಾನ ಖಾಸಗಿ ರೂಮಿನಲ್ಲಿ ಕೊಲೆಯಾದ ನತದೃಷ್ಟರಿವರು. ಇವರ ಪೈಕಿ ಮೊದಲನೇ ಇಬ್ಬರು ಚೂರಿ ಇರಿತದಿಂದ ಸತ್ತರೆಂತಲೂ ಉಳಿದವರನ್ನು ಪೊಲೀಸರು ಗುಂಡಿಟ್ಟು ಕೊಂದರೆಂತಲೂ ಸುದ್ದಿಯಾಗಿತ್ತು. ಹಾಗೆ ಪೊಲೀಸರಿಂದ ಹತ್ಯೆಗೀಡಾದವರು ಸಾಯಿಬಾಬಾನ ಹಾಸ್ಟೆಲ್ ವಿದ್ಯಾರ್ಥಿಗಳೇ ಆಗಿದ್ದರು. ಪ್ರಭು, ಸಾಯಿರಾಂ, ಜಗನ್ನಾಥನ್ ಹಾಗೂ ಸುರೇಶ್ ಕುಮಾರ್ ಎಂಬ ಆ ನಾಲ್ವರು ಜೂನ್ 6 ರ ರಾತ್ರಿ ಸಾಯಿಬಾಬಾನನ್ನು ಕೊಲ್ಲಲು ಕೈಲಿ ಚಾಕು ಹಿಡಿದು ಬಂದಿದ್ದರೆಂತಲೂ, ಆಗ ಅವರನ್ನು ತಡೆಯಲು ಯತ್ನಿಸಿದ ರಾಧಾಕೃಷ್ಣ ಹಾಗೂ ಮಹಾಜನ್ ಕೊಲೆಯಾದರೆಂದೂ ಮೊದಲು ಕತೆ ಹೇಳಲಾಯಿತು. ನಂತರ ಪೊಲೀಸರು ಬಂದು ಬಾಬಾ ಹತ್ಯೆಗೆಂದು ಆಶ್ರಮಕ್ಕೆ ನುಗ್ಗಿದ್ದ ನಾಲ್ವರನ್ನು ಗುಂಡಿಟ್ಟು ಕೊಂದರೆಂದು ಆಂಧ್ರ ಪೊಲೀಸರು, ಆಂಧ್ರ ಸರ್ಕಾರ ಹಾಗೂ ಸ್ವತಃ ಸಾಯಿಬಾಬಾನೇ ಹೇಳಿಕೊಂಡರು.





ಸಾಯಿಬಾಬಾನ ಬದುಕಿನಲ್ಲಿ ಇದೊಂದು ಭಯಾನಕ ಕ್ರೂರ ಘಟನೆಯಾಗಿದೆ. ಈ ಹತ್ಯಾಕಾಂಡದಲ್ಲಿ ಬಾಬಾ ಮುಗ್ಧನಾಗಿರಲಿಲ್ಲ. ಸಾಯಿಬಾಬಾನ ವಿಕೃತ ಲೈಂಗಿಕ ಪ್ರವೃತ್ತಿಯಿಂದ ರೋಸಿಹೋಗಿದ್ದ ಆಶ್ರಮದ ವಿದ್ಯಾರ್ಥಿಗಳೇ ಒಂದು ದಿನ ತಿರುಗಿಬಿದ್ದು ಪ್ರತಿಭಟಿಸಿದಾಗ ಅದು ವಿಕೋಪಕ್ಕೆ ಹೋಗಿ ಒಟ್ಟು ಆರು ಯುವಕರ ಹತ್ಯೆಯಲ್ಲಿ ಅಂತ್ಯ ಕಂಡಿತ್ತು.

ಈ ಭಯಾನಕ ಹತ್ಯೆಗಳು ಆಗ ಭಾರತದಾದ್ಯಂತ ಪ್ರಚಾರ ಪಡೆದರೂ ಆಂಧ್ರ ಪೊಲೀಸರೂ ಇಡೀ ಘಟನೆಯನ್ನು ತಿರುಚಿ, ಸಾಕ್ಷ್ಯ ನಾಶಪಡಿಸಿ ತನಿಖೆಯನ್ನೇ ಸರಿಯಾಗಿ ನಡೆಸದೆ ಎಲ್ಲವನ್ನೂ ತಿಪ್ಪೇಸಾರಿಸಿದ್ದರು. ಅವತ್ತಿನ ಪುಟ್ಟಪರ್ತಿಯ ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ ರೆಡ್ಡಿಯಿಂದ ಹಿಡಿದು ಆಂಧ್ರ ಪೊಲೀಸ್ ಚೀಫ್ ದೊರಾವರೆಗೂ ಕೊನೆಗೆ ಪ್ರಧಾನ ಮಂತ್ರಿಯಾಗಿದ್ದ ಪಿ.ವಿ. ನರಸಿಂಹರಾವ್ ತನಕ ಎಲ್ಲರೂ ವೈಯಕ್ತಿಕ ಗಮನಹರಿಸಿ ಈ ಕೊಲೆಗಳನ್ನು ಮುಚ್ಚಿಹಾಕಿದ್ದ

ಆದರೆ ಸಾಯಿಬಾಬಾನ ವಂಚನೆಗಳ ಬಗ್ಗೆ ಹೋರಾಟಕ್ಕಿಳಿದ ಬಸವ ಪ್ರೇಮಾನಂದರು ಎಷ್ಟೇ ಶ್ರಮಿಸಿದರೂ ಸುಪ್ರೀಂಕೋರ್ಟ್‌ವರೆಗೂ ಹೋದರೂ ಈ ಹತ್ಯಾಕಾಂಡ ಮರುಜೀವ ನೀಡಲಾಗಲಿಲ್ಲ.

ಇಂಡಿಯಾದ ರಾಜಕಾರಣಿಗಳು, ಪೊಲೀಸರು, ಕೊನೆ ನ್ಯಾಯಾಂಗವೂ ಹೇಗೆ ಸಾಯಿಬಾಬಾನ ತಲೆ ಉಳಿಸ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿದರೆಂಬುದಕ್ಕೆ ಈ ಕೊಲೆಗಳೇ ಸಾಕ್ಷಿಯಾಗಿವೆ. ಸಾಯಿಬಾಬಾ ಆಂಧ್ರ ಅನಂತಪುರ, ಮೆಹಬೂಬ್ ನಗರ ಜಿಲ್ಲೆಗಳ ಅನೇ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿರುವುದು ನಿಜ. ಅದೇ ರೀತಿ ಅತ್ಯಾಧುನಿಕ ಆಸ್ಪತ್ರೆಗಳನ್ನು ಕಟ್ಟಿ ಬಡವರಿಗೆ ಉಚಿತ ವೈದ್ಯಕೀಯ ನೆರವು ನೀಡಿರುವುದು ಅಷ್ಟೇ ಸತ್ಯ. ಸರ್ಕಾರಗಳು ಜನಪರ ಕೆಲಸಗಳ ಜವಾಬ್ದಾರಿಯಿಂದ ವಿಮುಖರಾದಾಗ ಸಾಯಿಬಾಬಾ ತರಹ ಖಾಸಗಿ ವ್ಯಕ್ತಿಗಳು ಸರ್ಕಾರದ ನೆರವಿನಿಂದಲೇ ಇಂತಹ ಸಮಾಜ ಸೇವೆ ಮಾಡುವ ಅವಕಾಶ ಪಡೆಯುತ್ತಾರೆ. ಆದರೂ ಸಾಯಿಬಾಬಾನ ಬೆಡ್‌ರೂಂನಲ್ಲೇ ಆದ ಕೊಲೆಗಳು ಅವನು ಮುಗ್ಧ ಧಾರ್ಮಿಕ ಗುರುವಾಗಿರಲಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.





ನಗಳಿಗೊಮ್ಮೆ ಬಾಬಾ ಅವನನ್ನು 'ಖಾಸಗಿ ಂದರ್ಶನ'ಕ್ಕೆಂದು ಕರೆಯುತ್ತಿದ್ದರು. ನಂದನ್ ಂತಹ ಸಂದರ್ಶನ ಮುಗಿಸಿ ಹೊರಬಂದನಂತರ, ನ್ನ ಎದೆ ಮತ್ತು ಗಲ್ಲದ ಮೇಲಾಗಿದ್ದ ರುತುಗಳನ್ನು ತೋರಿಸಿ ಬಾಬಾನನ್ನು ಶಪಿಸುತ್ತಿದ್ದ. ನೇಕ ಸಾರಿ ನಂದನ್‌ನನ್ನು ಗರಿಗರಿಯಾದ ನೂರು ಪಾಯಿ ನೋಟುಗಳಿದ್ದ ಕವರ್‌ಗಳು ಡುಕಿಕೊಂಡು ಬರುತ್ತಿದ್ದವು. ನಂದನ್‌ನಿಗೆ

ದರ್ಶನದ ವೇಳೆ ಸ್ವಾಮೀಜಿ 'ಈ ವಿಶ್ವದಲ್ಲಿ ನೊಬ್ಬನೇ ಪುರುಷ. ಇಡೀ ಪ್ರಪಂಚವೇ ನನ್ನ ಂಡತಿ' ಎನ್ನುತ್ತಿದ್ದನಂತೆ. ಅಷ್ಟೇ ಅಲ್ಲ, 'ಕೃಷ್ಣನಿಗೆ ಪೂರ್ಣ ಸಮರ್ಪಿಸಿಕೊಂಡ ರಾಧೆಯಂತೆ ನಿನ್ನನ್ನು ವಿಸಿಕೋ'. ಎಂದೂ ಹೇಳುತ್ತಿದ್ದನಂತೆ.

ಕುಮಾರ್ ಎಂಬ ಇನ್ನೊಬ್ಬ ವಿದ್ಯಾರ್ಥಿಗೂ ಮಿಯಿಂದ ಖಾಸಗಿ ಸಂದರ್ಶನಕ್ಕೆಂದು ಒಮ್ಮೆ ಬಂತು. ಆತ ಸಂದರ್ಶನ ಮುಗಿಸಿಕೊಂಡು ದಾಗ ಆನಂದಭರಿತನಾಗಿದ್ದ. ಏನಾಯಿತು ಎಂದು ಚಾರಿಸಿದಾಗ 'ನಿನಗೆ ಹೊಟ್ಟೆ ನೋವಿದೆಯೇ?' ದು ಸ್ವಾಮೀಜಿ ಕೇಳಿದರು. ನಾನು ಮೀಜಿಯ ದಯೆಯಿಂದ ಇಲ್ಲ' ಎಂದೆ. ಆಗ ನರು 'ನನ್ನಿಂದ ಏಕೆ ಮುಚ್ಚಿಡುತ್ತಿರುವೆ? ನಿನಗೆ ಹೊಟ್ಟೆನೋವಿಲ್ಲವೇ?' ಎಂದು ಮತ್ತೆ ಕೇಳಿದರು. ನಾನು 'ಹೌದು' ಎಂದು ಉತ್ತರಿಸಿದೆ. ಆಗ ಮಿ ಗಾಳಿಯಿಂದ ಪವಾಡದಂತೆ ಎಣ್ಣೆ ತಂದರು. ಹೊಟ್ಟೆ ಮತ್ತು ಅದರ ಕೆಳಗೆ ನೀವಿದರು. ಗೆ 'ಶುದ್ಧೀಕರಣ' ಮಾಡಿದರು. ಆ ನುಭವವನ್ನು ನಾನು ಮರೆಯಲಾರೆ' ಎಂದ ಮಾರ್.

ಸಾಯಿಬಾಬಾನ ಕಾಮತೃಷೆಗೆ ಬಲಿಯಾದ ದೇಶಿಯರೂ ಹಲವರು. ಅಮೆರಿಕಾದ ಸ್ಯಾಮ್ ಂಗ್ ಎಂಬ 16 ವರ್ಷದ ಯುವಕ ಬಾಬಾನ ಸಗಿ ಸಂದರ್ಶನ ಪಡೆದ 'ಅದೃಷ್ಟವಂತ'ರಲ್ಲಿ . ಸ್ಯಾಮ್‌ನ ತಂದೆತಾಯಿ ಬಾಬಾನ ಮಭಕ್ತರಾಗಿದ್ದರು. ಮುಗ್ಧ ಸ್ಯಾಮ್‌ನನ್ನು ಕಂಡ ಬಾ 'ನೀನು ನಿನ್ನ ಪೂರ್ವಜನ್ಮದಲ್ಲಿ ಶಿರಡಿ ಯಿಬಾಬಾನ ಆರಾಧಕನಾಗಿದ್ದೆ' ಎಂದು ಹೊಗಳಿ ನಿಗೆ ಅನೇಕ ಖಾಸಗಿ ಸಂದರ್ಶನಗಳನ್ನು ನೀಡಿದ. ಮ್‌ಗೂ ಎಣ್ಣೆ ಒರೆಸಿ ಪ್ರತಿ ಬಾರಿ ದ್ಧೀಕರಣ'ದ ಶಾಸ್ತ್ರವನ್ನು ಸಾಯಿಬಾಬಾ ಡುತ್ತಿದ್ದ. ಮಾತ್ರವಲ್ಲ, ಅದಕ್ಕೆ ಪ್ರತಿಯಾಗಿ ಮ್‌ಗೆ ಗಡಿಯಾರ, ಉಂಗುರ, ಬ್ರೇಸ್‌ಲೆಟ್, ದು ಇತ್ಯಾದಿಗಳನ್ನು ಸಾಯಿಬಾಬಾ ನೀಡಿದ್ದ.

ಹೀಗೆ ಆ ಹುಡುಗನಿಗೆ ಸಾಯಿಬಾಬಾ ನೀಡಿದ್ದ ಗಿಫ್ಟ್‌ನ ಒಟ್ಟು ಮೌಲ್ಯ 19 ಸಾವಿರ ಡಾಲರ್‌ಗಳಷ್ಟು!

ಈ ಮಧ್ಯೆ ಈ ವಿಷಯವನ್ನು ತನ್ನ ಅಪ್ಪ 'ಅಮ್ಮನಿಗೆ ಹೇಳಬಾರದು ಎಂದು ಸಾಯಿಬಾಬಾ ಆ ಹುಡುಗನಿಗೆ ತಾಕೀತು ಮಾಡಿದ್ದ. ಏಕೆಂದು ಹುಡುಗ ಕೇಳಿದರೆ 'ನೀನು ವಿಶೇಷವಾದ ಭಕ್ತನಾದ್ದರಿಂದ ಇದನ್ನು ಮಾಡುತ್ತಿದ್ದೇನೆ. ಇದು ನಿನಗೊಂದು ದೊಡ್ಡ ಆಶೀರ್ವಾದ, ವಿಶೇಷ ದರ್ಶನ' ಎಂದು ಹೇಳುತ್ತಿದ್ದ.

ಮೂರು ವರ್ಷಗಳ ಕಾಲ ಸತತವಾಗಿ ಇಂಥ ಆಶೀರ್ವಾದ ಪಡೆದ ಸ್ಯಾಮ್. ಆದರೆ ಕೊನೆಗೊಂದು ದಿನ ಬಾಬಾ ಆತನ ಮೇಲೆ ಅತ್ಯಾಚಾರ ಎಸಗಲು ಮುಂದಾದಾಗ ಸ್ಯಾಮ್‌ಗೆ ಸುಮ್ಮನಿರಲಾಗಲಿಲ್ಲ. ಅಮೆರಿಕಕ್ಕೆ ವಾಪಸ್ ಆದನಂತರ ಬಾಬಾನಿಂದ ತನಗಾಗಿದ್ದನ್ನೆಲ್ಲ ತನ್ನ ತಂದೆತಾಯಿಗೆ ಹೇಳಿದ. ಇದರಿಂದ ಉಗ್ರರಾದ ಆತನ ಹೆತ್ತವರು ಅಮೆರಿಕಾದಲ್ಲಿರುವ ಶ್ರೀ ಸಾಯಿ ಸಂಘಟನೆಯವರನ್ನು ವಿಚಾರಿಸಿದರು. ಆದರೆ ಆ ಸಂಘಟನೆಯವರು "ಬಾಬಾ ಅವರು ಸ್ಯಾಮ್ ಮೇಲೆ ಕೆಲವು ಪರೀಕ್ಷೆಗಳನ್ನು ನಡೆಸಿರಬೇಕು" ಎಂದು ಉತ್ತರಿಸಿದ್ದು ಸ್ಯಾಮ್‌ನ ತಂದೆತಾಯಿಯನ್ನು ಮತ್ತಷ್ಟು ಕುಪಿತರನ್ನಾಗಿಸಿತು. ಅಂದಿನಿಂದ ಸಾಯಿ ಸಂಸ್ಥೆಯೊಂದಿಗಿನ ಎಲ್ಲಾ ಸಂಬಂಧಗಳನ್ನೂ ಅವರು ಕಳಚಿಕೊಂಡರು.

ಹಿಂದೊಮ್ಮೆ ಭಕ್ತನಾಗಿದ್ದು ಆನಂತರ ಬಾಬಾನಿಂದ ವಂಚನೆಗೊಳಗಾಗಿದ್ದ ಟಾಲ್ ಬ್ರೂಕ್ ಎಂಬುವವರು 80ರ ದಶಕದ ಆರಂಭದಲ್ಲಿ 'ಲಾರ್ಡ್ ಆಫ್ ದಿ ಏರ್' ಎಂಬ ಪುಸ್ತಕ ಬರೆದು ಪ್ರಕಟಿಸಿದ್ದರು. ಆ ಪುಸ್ತಕದಲ್ಲಿ ತನ್ನ ಮೇಲೆ ಸಾಯಿ ಬಾಬ ನಡೆಸಿದ್ದ ಲೈಂಗಿಕ ದೌರ್ಜನ್ಯದ ಬಗ್ಗೆ ವಿವರಿಸಿದ್ದರು. ಆ ವಿವಾದಾತ್ಮಕ ಪುಸ್ತಕತ ಎಲ್ಲಾ ಪ್ರತಿಗಳನ್ನು ಬಾಬಾನ ನಿಕಟವರ್ತಿಗಳು ಕೊಂಡು ನಾಶಮಾಡಿದ್ದರು.

ಬಾಬಾನಿಂದ ಲೈಂಗಿಕ ಶೋಷಣೆಗೆ ಒಳಗಾದ ಆತನ ಮಾಜಿ ಭಕ್ತರು ಇಂಟರ್‌ನೆಟ್‌ನಲ್ಲಿ ತಮ್ಮ ಸಮರವನ್ನು ಈಗಲೂ ಮುಂದುವರೆಸಿದ್ದಾರೆ. ಬಾಬಾನ ಕತ್ತಲಕಾಂಡದ 'ನೀಲಿ' ನಕಾಶೆಯನ್ನು ಇಂಟರ್‌ನೆಟ್‌ನಲ್ಲಿ ಪ್ರಕಟಿಸುತ್ತಿದ್ದಾರೆ. ಬಾಬಾನ ಮುಖವಾಡದ ಹಿಂದಿರುವ ನಿಜಸ್ವರೂಪದ ಬಗ್ಗೆ ಅಂತರಜಾಲದಲ್ಲಿ ಅನೇಕ ತಾಣಗಳಿವೆ, ಪುಟಗಳಿವೆ, ಹೇಳಿಕೆಗಳಿವೆ. ಅವುಗಳಲ್ಲಿ ಪ್ರಮುಖವಾದದ್ದು ಬಾಬಾನ ಮಾಜಿ ಭಕ್ತರಾದ ಡೇವಿಡ್ ಬೇಯ್ಲಿ ಮತ್ತು ಆತನ ಹೆಂಡತಿ ಸಂಗ್ರಹಿಸಿರುವ 'ದಿ ಫೈಂಡಿಂಗ್ಸ್.'

ಡೇವಿಡ್ ಬೇಯ್ಲಿ ಸಾಯಿಬಾಬಾನ ಅಪ್ರತಿಮ ಆರಾಧಕನಾಗಿದ್ದ, ದೇಶವಿದೇಶಗಳಲ್ಲಿ ಬಾಬಾನ ಕುರಿತು ಪ್ರಚಾರ ಮಾಡುತ್ತಿದ್ದ, ಬಾಬಾನ ಆಶ್ರಮದಲ್ಲೇ ಸಹಭಕ್ತೆಯೊಬ್ಬಳನ್ನು ವಿವಾಹವಾಗಿ ಬಾಬಾನಿಗೆ ಇನ್ನಷ್ಟು ಆಪ್ತನಾದ. ಈ ಆಪ್ತತೆಯಿಂದ ಡೇವಿಡ್‌ಗೆ ಹಲವು ಸತ್ಯಗಳು ಗೋಚರವಾದವು. ಬಾಬಾ ಒಬ್ಬ ಸಾಮಾನ್ಯ ತಾಂತ್ರಿಕ, ಆತನ ಪವಾಡಗಳಿಗೆ ಯಾವುದೇ ದೈವಿಕ ಶಕ್ತಿ ಇಲ್ಲ ಎಂಬುದರ ಜೊತೆಗೆ ಹದಿಹರೆಯದ ಹುಡುಗರೊಂದಿಗೆ ಬಾಬಾ ವಿಕೃತ ಕಾಮದಲ್ಲಿ ತೊಡಗಿರುವುದು ಬೇಯ್ಲಿಗೆ ತಿಳಿಯಿತು. ಆಗ ಆತ ಬಾಬಾನ ಜೊತೆಗಿನ ಎಲ್ಲಾ ಸಂಬಂಧ ಕಡಿದುಕೊಂಡು ಸಾಯಿಬಾಬಾನ ನಿಜ ಬಣ್ಣ ಬಯಲುಗೊಳಿಸಲು ಪಣತೊಟ್ಟು ನಿಂತ.

ಅಮೆರಿಕದ ತಾಯಿಯೊಬ್ಬಳು ಅಮೆರಿಕದಲ್ಲಿ ಸಾಯಿ ಸಂಸ್ಥೆಯನ್ನು ನಡೆಸುತ್ತಿದ್ದ ಗೈ ಮೆಲಾಯ್ ಎಂಬಾತನಿಗೆ ಪತ್ರ ಬರೆದು, ಅದರಲ್ಲಿ ಪುಟ್ಟಪರ್ತಿಯಲ್ಲಿ ಬಾಬಾನೊಂದಿಗೆ ತನ್ನ ಮಗನಿಗಾದ ಕಹಿ ಅನುಭವವನ್ನು ವಿವರಿಸಿದ್ದಳು. ತನ್ನ ಮಗ ಬಾಬಾನ ದರ್ಶನಕ್ಕೆ ಹೋದಾಗ ಆತನನ್ನು ಸಂದರ್ಶನದ ಕೊಠಡಿಗೆ ಕರೆದುಕೊಂಡು ಹೋದ ಬಾಬಾ 'ಶುದ್ಧೀಕರಣ'ದ ನೆಪದಲ್ಲಿ ಏನೇನೂ ತಿಳಿಯದ ಮುಗ್ಧ ಬಾಲಕನಿಗೆ ಮುಷ್ಟಿಮೈಥುನ ಮಾಡಲು ಬಾಬಾ ಯತ್ನಿಸಿದ್ದ ಎಂದು ಆರೋಪಿಸಿದ್ದಳು. ಅಷ್ಟು ಸಾಲದೆಂಬಂತೆ ಅದಾದನಂತರ ತನ್ನ ಚಿಕ್ಕ ವಯಸ್ಸಿನ ಮಗನಿಗೆ ಗಡಿಯಾರವೊಂದನ್ನು ಆಮಿಷವಾಗಿ ಕೊಟ್ಟು ಆತನನ್ನು oral sexಗೆ ಬಾಬಾ ಒತ್ತಾಯಿಸಿದ್ದ ಎಂದೂ ಆರೋಪಿಸಿದ್ದಳು. 'ನಿನಗೆ ಒಳ್ಳೆಯ ಬದುಕು ಕೊಡುತ್ತೇನೆ. ನೀನು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಚೆನ್ನಾಗಿರುವಂತೆ ಮಾಡುತ್ತೇನೆ' ಎಂದು ಈ ಪುಟ್ಟ ಹುಡುಗನಿಗೆ ಹೇಳಿದ ಬಾಬಾ ತನ್ನ ಮರ್ಮಾಂಗಗಳನ್ನು ಹುಡುಗನಿಂದ ತಡವಿಸಿಕೊಂಡು 'ಶಿವರೂಪ' ಪ್ರಕಟಿಸುವುದಾಗಿ ಹೇಳಿ 'ಲಿಂಗ' ನಮಸ್ಕಾರ ಮಾಡಿಸಿ, 'ರಕ್ಷಣೆ, ರಕ್ಷಣೆ' ಎನ್ನುತ್ತಾ ಒಂದು ಬ್ರೇಸ್‌ಲೆಟ್ ಕೊಟ್ಟಿದ್ದ ಎಂಬುದು ಆಕೆ ಮಾಡಿದ್ದ ಇನ್ನೊಂದು ಆರೋಪ.


ಹಿಂದೂ ಧರ್ಮದ ಯಾವುದೇ ಪವಿತ್ರ ಗ್ರಂಥಗಳು ಉಲ್ಲೇಖಿಸದ 'ಶುದ್ಧೀಕರಣ' ವಿಧಿಗಳನ್ನು ಬಾಬಾ ನಡೆಸುತ್ತಿರುವ ಬಗ್ಗೆ ಸಂಶಯಗೊಂಡ ಇರಾನಿಯನ್ ಭಕ್ತ ಅಫ್‌ಶಿನ್ ಎಂಬಾತ ಬಾಬಾನ ಚಟುವಟಿಕೆಗಳ ಬಗ್ಗೆ ಗೊಂದಲಗೊಂಡು ಸಾಯಿ ಸಂಸ್ಥೆಯೊಂದಿಗೆ ಸಂಬಂಧ ಕಡಿದುಕೊಂಡ.

ಜರ್ಮನ್ ದೇಶದ ಜೆನ್ಸ್ ಸೇತು ಎಂಬ ಭಕ್ತನದ್ದು ಇನ್ನೊಂದು ಬಗೆಯ ಗೋಳು. ಎರಡು ವರ್ಷಗಳ ಕಾಲ ಬಾಬಾನ ಸಾರ್ವಜನಿಕ ದರ್ಶನ ಮಾತ್ರ ಪಡೆಯುತ್ತಿದ್ದ ಸೇತು ಅವರಿಂದ ಖಾಸಗಿ ಸಂದರ್ಶನವನ್ನು ಬಯಸಿದ್ದ. ಒಂದು ದಿನ ಬಾಬಾನೊಂದಿಗೆ ತನಗೆ ಖಾಸಗಿ ಸಂದರ್ಶನ ಇದೆ ಎಂದು ಗೊತ್ತಾದಾಗ ಸೇತು ಸಂತೋಷದಿಂದ ಬೀಗಿದ್ದ. 'ಸಂದರ್ಶನ'ದಲ್ಲಿ ಸೇತುವಿನ ತಲೆ ನೇವರಿಸಿದ ಬಾಬಾ 'ನೀನು ಬದುಕಿನಲ್ಲಿ ಸುಖವಾಗಿಲ್ಲ ಎಂದು ನನಗೆ ಗೊತ್ತು. ನಿನಗೆ ಏನು ಬೇಕೋ ಎಲ್ಲವನ್ನೂ ಕೊಡುತ್ತೇನೆ. ನಾನು ನೀನು ಒಂದಾಗುತ್ತೇವೆ' ಎಂದ. ಮುಂದಿನ ಬಾರಿ ಸೇತು ಹೋದಾಗ "ಆತ ನನ್ನನ್ನು ಚುಂಬಿಸಲು, ನನ್ನ ಮರ್ಮಾಂಗಗಳನ್ನು ಮುಟ್ಟಲು ಬಂದಾಗ ನನಗೆ ಜಿಗುಪ್ಸೆ ಹುಟ್ಟಿ ಹೊರಬಂದೆ" ಎಂದು ಸೇತು ಆರೋಪಿಸಿದ್ದ.


ಕೆಲವು ದಿನಗಳ ಕಾಲ ಬಾಬಾನ ವಿರುದ್ಧ ಮಾಹಿತಿ ಸಂಗ್ರಹಿಸಿ ಪುಟ್ಟಪರ್ತಿಗೆ ಸೇತು ಪುನಃ ಹೋದಾಗ ಅಲ್ಲಿನ ಪೊಲೀಸರು ಆತನ ಬಳಿ ಇದ್ದ ದಾಖಲೆಗಳನ್ನೆಲ್ಲ ವಶಪಡಿಸಿಕೊಂಡು ಸೇತುಗೆ ಕಿರುಕುಳ ಕೊಡಲಾರಂಭಿಸಿದರು. ಜರ್ಮನಿಗೆ ಹಿಂತಿರುಗಲು ಆತನ ಬಳಿ ಪಾಸ್‌ಪೋರ್ಟ್ ಕೂಡ ಇಲ್ಲದಂತಾಯಿತು. ದೆಹಲಿಗೆ ಹೋಗಿ ಹೊಸ ಪಾಸ್‌ಪೋರ್ಟ್ ಮಾಡಿಸಿಕೊಂಡು ಹಿಂತಿರುಗಬೇಕಾಯಿತು ಎಂದು ಆ ದಿನಗಳನ್ನು ಸಿಟ್ಟು, ವಿಷಾದಗಳಿಂದ ನೆನಪಿಸಿಕೊಂಡಿದ್ದ ಸೇತು.

ಬಾಬಾನ ಇಂತಹ ಕೃತ್ಯಗಳನ್ನು ಕುರಿತು ಅವರ ಮಾಜಿ ಭಕ್ತನೊಬ್ಬ ಸ್ವೀಡನ್ ದೇಶದಲ್ಲಿ 'ದಿ ಕ್ಲೌನ್ ಬಿಹೈಂಡ್ ದ ಮಾಸ್ಕ್' ಎಂಬ ಪುಸ್ತಕ ಬರೆದಿದ್ದರು. ಆ ಪುಸ್ತಕ ಪ್ರಕಟವಾದ ನಂತರ ಸ್ವೀಡನ್ ದೇಶದಲ್ಲಿ ಸಾಯಿ ಸಂಸ್ಥೆ ನಡೆಸುತ್ತಿದ್ದ ಶಾಲೆಯನ್ನು ಅಲ್ಲಿನ ಸರ್ಕಾರ ಬಂದ್ ಮಾಡಿತ್ತು. ●


ಬಲಿಯಾದ ಸಾಯಿ ಭಕ್ತರು



ಕೊಂದ ಪೊಲೀಸರು



ಬಾಬಾನ ಅರಮನೆ-ಆಶ್ರಮ-ಆಸ್ಪತ್ರೆಗಳು

ಕ್ರಿಕೆಟ್ ಬಗ್ಗೆ ನನಗೆ ಅಷ್ಟೇನೂ ವೈಯಕ್ತಿಕವಾದ ಆಸಕ್ತಿ ಇಲ್ಲ. ಆದರೂ ಅನಿವಾರ್ಯ ಕಾರಣಗಳಿಂದಾಗಿ ನನ್ನ ಸ್ನೇಹಿತ ಕೆಲಸ ಮಾಡುವ ಕಚೇರಿಯಲ್ಲಿ ಇಂಡಿಯಾ-ಶ್ರೀಲಂಕಾ ತಂಡಗಳ ವಿಶ್ವಕಪ್ ಫೈನಲ್ ಪಂದ್ಯವನ್ನು ನೋಡುವ ಸನ್ನಿವೇಶ ಸೃಷ್ಟಿಯಾಯಿತು. ಆ ಕಚೇರಿಯಲ್ಲಿ ದೊಡ್ಡದಾದ ಸ್ಕ್ರೀನ್, ಸೌಂಡ್ ಎಫೆಕ್ಟ್ ಎಲ್ಲವೂ ಇದ್ದುದರಿಂದ ಸಹಜವಾಗಿಯೇ ಅನೇಕರು ಅಲ್ಲಿ ಸೇರಿಕೊಂಡಿದ್ದರು. ನಾನು ನನ್ನ ಕಂಪ್ಯೂಟರ್ ಕೆಲಸಗಳಿಗಾಗಿ ಆ ಕಚೇರಿಯನ್ನು ಆಗಾಗ್ಗೆ ಅವಲಂಬಿಸುತ್ತಿದ್ದುದರಿಂದ ಅಂದು ನಾನೂ ಅವರೆಲ್ಲರೊಂದಿಗೆ ಅನಿವಾರ್ಯವಾಗಿ ಕ್ರಿಕೆಟ್ ಪಂದ್ಯದ ಫೈನಲ್ ಆಟವನ್ನು ನೋಡುವಂತಾಯಿತು.

ಹಾಗೆಂದು ನಾನೇನೂ ಕ್ರೀಡಾದ್ವೇಷಿಯಲ್ಲ; ಎಲ್ಲಕ್ಕಿಂತ ಮುಖ್ಯವಾಗಿ ಕ್ರಿಕೆಟ್ ಅನ್ನು ಕುರುಡಾಗಿ ವಿರೋಧಿಸುವ ಕೆಲವೇ ಕೆಲವು ಮನುಷ್ಯರ ಹಾಗೂ ಅಲ್ಲ. ಎಲ್ಲ ಆಟಗಳನ್ನೂ ನೋಡುವ, ಪರಿಗಣಿಸುವ ಹಾಗೆಯೇ ಕ್ರಿಕೆಟ್‌ಅನ್ನೂ ಕೂಡ ನನ್ನ ಆಸಕ್ತಿ, ತಿಳಿವಳಿಕೆಯ ಮಿತಿಯೊಳಗೆ ಅದರ ಕ್ರೀಡಾ ಚತುರತೆ, ಹುಮ್ಮಸ್ಸುಗಳನ್ನು ಇಷ್ಟಪಡುವವನು. ಆದರೆ ಅಂದಿನ ವಿಶ್ವಕಪ್ ಫೈನಲ್ ಪಂದ್ಯವನ್ನು ನೋಡುತ್ತ ನನ್ನ ಸುತ್ತಲಿನ ಮನುಷ್ಯರು ಆ ಕ್ರಿಕೆಟ್ ಆಟವನ್ನು ಕಂಡು, ಅನುಭವಿಸಿದ ಬಗೆಯನ್ನು ಗಮನಿಸುತ್ತ ನಾನು ಅಂದು ಬೆರಗಾಗುವಂತಾಯಿತಲ್ಲದೆ, ಇಡೀ ದಿನ ವಿಷಾದವನ್ನೂ ಅನುಭವಿಸುವಂತಾಯಿತು.

ನಾನು ತಿಳಿದುಕೊಂಡ ಹಾಗೆ; ಅಲ್ಲಿದ್ದ ಕೆಲವರು ನನಗೆ ಪರಿಚಯವಿದ್ದ ಹಾಗೆ, ಅಂದು ಆ ಪಂದ್ಯ ನೋಡಲು ಸೇರಿದ್ದವರೆಲ್ಲರೂ ಹೋಟೆಲ್ ಸಪ್ಲೈಯರ್‌ಗಳು, ಕಟ್ಟಡ ಕಾರ್ಮಿಕರು, ಟೀ ಅಂಗಡಿಗಳ ಹುಡುಗರು, ಕೇಬಲ್ ಕೆಲಸ ಮಾಡುವ ಜನ-ಹೀಗೆ ಅಸಂಘಟಿತ ವಲಯದ, ಕಡಿಮೆ ಆದಾಯದ ಕೆಲಸಗಳನ್ನು ಅವಲಂಬಿಸಿದ್ದಂಥ, ಬಹುತೇಕ ಕೆಳವರ್ಗಗಳಿಗೆ ಸೇರಿದವರು.

ಫೈನಲ್ ಪಂದ್ಯದಲ್ಲಿ ಇಂಡಿಯಾ ಜಯಿಸಿತು. ಅದಕ್ಕೆ ಅನೇಕ ಕಾರಣಗಳು ಇದ್ದವು. ಈ ಬಾರಿಯ ವಿಶ್ವಕಪ್ ಸರಣಿಯಲ್ಲಿ ಇಂಡಿಯಾ ತನ್ನ ಕ್ರೀಡಾಕ್ರಿಯಾಶೀಲತೆಯನ್ನು, ನೈಪುಣ್ಯತೆಯನ್ನು ಮತ್ತಷ್ಟು ಹುರಿಗೊಳಿಸಿಕೊಂಡಿದ್ದುದು, ವಿಶ್ವಕಪ್ ಗೆಲ್ಲುವ ಒತ್ತಡವನ್ನು ಹಿಂದೆಂದಿಗಿಂತಲೂ ಚೆನ್ನಾಗಿ ನಿಭಾಯಿಸಿದ್ದುದು, ತನ್ನ ಫೀಲ್ಡಿಂಗ್ ಕಾರ್ಯಾಚರಣೆಯಲ್ಲಿ ಹೆಚ್ಚು ಕೌಶಲವನ್ನು ಗಟ್ಟಿಗೊಳಿಸಿಕೊಂಡಿದ್ದುದು-ಇವೆಲ್ಲವೂ ಅದರಲ್ಲಿ ಸೇರಿದ್ದವು. ಆ ಕಾರಣದಿಂದಾಗಿ ಪಾಕಿಸ್ತಾನ ತಂಡವನ್ನು ಸೋಲಿಸಿದ ಹಾಗೆಯೇ ಕ್ರಿಕೆಟ್‌ನಲ್ಲಿ ಬಲಿಷ್ಠ ತಂಡವೆನ್ನಿಸಿಕೊಂಡಿದ್ದ ಶ್ರೀಲಂಕಾವನ್ನು ಸೋಲಿಸಲು ಇಂಡಿಯಾ ಟೀಮ್‌ಗೆ ಸಾಧ್ಯವಾಗಿತ್ತು.


ಇಡೀ ಕ್ರಿಕೆಟ್ ಪಂದ್ಯವನ್ನು ನಾನು ಇವಿಷ್ಟೇ ಕ್ರೀಡಾ ಕಾರಣಗಳಿಗಾಗಿ, ಕುತೂಹಲದಿಂದ ನೋಡಿದ್ದೆನಷ್ಟೆ. ಆದರೆ ಈ ಪಂದ್ಯವನ್ನು ವೀಕ್ಷಿಸುತ್ತಿದ್ದ ಅಲ್ಲಿನ ನನ್ನ ಗೆಳೆಯರ ಉನ್ಮಾದವನ್ನು, ವಿಚಿತ್ರ ಮನೋವಿಕಾರಗಳನ್ನು ನೋಡುತ್ತಿದ್ದಂತೆಯೇ ನನಗೆ ಎಂತಹುದೋ ಕಳವಳ ಶುರುವಾಗಿತ್ತು. ಅವರೆಲ್ಲರೂ ಅಲ್ಲಿನ ದೊಡ್ಡ ಪರದೆಯಲ್ಲಿ ಪ್ರತಿಕ್ಷಣವೂ ಪ್ರಕಟಗೊಳ್ಳುತ್ತಿದ್ದ ಆಟದ ವಿವಿಧ ಮಜಲುಗಳನ್ನು ವಿಚಿತ್ರ ರೀತಿಯ ಭಾವೋದ್ರೇಕದೊಂದಿಗೆ ಅನುಭವಿಸುತ್ತಿರುವುದನ್ನು ಕಂಡು ದಿಗಿಲಾಯಿತು. ಅವರೆಲ್ಲರ ನಿತ್ಯದ ಬದುಕಿನಲ್ಲಿ ಎಂದೂ ಕಾಣಿಸಿಕೊಳ್ಳದ ದೇಶಪ್ರೇಮ, ರಾಷ್ಟ್ರಧ್ವಜದ ಆರಾಧನೆ ಎಲ್ಲವೂ ಆ ಕ್ಷಣದಲ್ಲಿ ಅಸಹಜವಾಗಿ, ಒಂದು ರೀತಿಯಲ್ಲಿ ವಿಕೃತವೆನ್ನಿಸುವ ಹಾಗೆ ಪ್ರಕಟಗೊಳ್ಳುತ್ತಿದೆಯೇನೋ ಎಂದೂ ಅನ್ನಿಸಿ, ಎಂತಹುದೋ ಕಳವಳ ಶುರುವಾದಂತಾಯಿತು.

ಪಂದ್ಯ ಮುಗಿದ ನಾಲ್ಕಾರು ಗಂಟೆಗಳ ತರುವಾಯ; ನಾನು ಮನೆ ತಲುಪುವ ಮಧ್ಯರಾತ್ರಿಯವರೆಗೂ ದಾರಿಯುದ್ದಕ್ಕೂ ನಡೆದ ರಾಷ್ಟ್ರಧ್ವಜದ ಮೆರವಣಿಗೆ, ಯುವಕರ ಕೇಕೆ, ಕುಣಿತ, ಪಟಾಕಿಗಳ ಸಿಡಿತ ಎಲ್ಲವೂ ನನ್ನನ್ನು ಅರೆಕ್ಷಣ ಅಲುಗಾಡಿಸಿದವು.

ಇದಕ್ಕೂ ಮುಂಚೆ ಪಂದ್ಯ ನಡೆಯುತ್ತಿದ್ದಾಗ ನನ್ನ ಸ್ನೇಹಿತನ ಕಚೇರಿಯಲ್ಲಿ ಕ್ರಿಕೆಟ್ ನೋಡಲು ಬಂದಿದ್ದ ಯುವಕನೊಬ್ಬ "ನೋಡಿದ್ರಾ ಸಾರ್, ಹೋಮ, ಪೂಜೆ ಮಾಡಿದ್ದಕ್ಕೂ ಸಾರ್ಥಕ ಆಯ್ತು..." ಎಂದು ತಾನು ಅದಕ್ಕೂ ಮುಂಚೆ ತನ್ನ ಏರಿಯಾದಲ್ಲಿ ಕಂಡ, ಟೀವಿಯಲ್ಲಿ ನೋಡಿದ ಪೂಜೆ-ಪುನಸ್ಕಾರಗಳ ಬಗ್ಗೆಯೆಲ್ಲ ಬಡಬಡಿಸ ತೊಡಗಿದ.

ಅವನ ಮಾತು ಕೇಳುತ್ತಲೇ ಕಕ್ಕಾಬಿಕ್ಕಿಯಾದ ನಾನು, ವಿಶ್ವಕಪ್ ಪಂದ್ಯಗಳು ಆರಂಭಗೊಂಡ ದಿನಗಳಿಂದಲೂ ನಮ್ಮ ಟೀವಿ ಚಾನೆಲ್‌ಗಳು ಕ್ರಿಕೆಟ್ ಆಟದ ಕುರಿತು, ಎಂತಹುದೋ ಹುರಿಕೆ ಕಾಯಿಲೆ ತಗುಲಿಸಿಕೊಂಡಂತೆ ಓತಪ್ರೋತವಾಗಿ ಹೋಮ-ಹವನಗಳ ಅಪದ್ಧಗಳನ್ನೆಲ್ಲ, ಜ್ಯೋತಿಷಿಗಳ ಮೂಢ ಪ್ರಲಾಪಗಳನ್ನೆಲ್ಲ ಪ್ರಸಾರ ಮಾಡಿದ್ದು ನೆನಪಾಯಿತು. ಆ ಚಾನೆಲ್‌ಗಳ ಐಲಾಟಗಳನ್ನು ನೋಡಿ ನೋಡಿಯೇ ಈ ಹುಡುಗ ಹೀಗೆ ಮಾತಾಡುತ್ತಿರಬಹುದು ಎಂದುಕೊಂಡೆ.

"ನೀನು ಏನು ಕೆಲಸ ಮಾಡ್ತಾ ಇದ್ದೀಯಾ ಗುರು?" ಎಂದೆ.



ಕ್ರಿಕೆಟ್ ಎಂಬ ಉನ್ಮಾದವೂ ದೇಶಪ್ರೇಮವೆಂಬ ಅಪದ್ಧವೂ

"ನಾನು ಇಲ್ಲೇ ಕೆಳಗಡೆ ಫಾಸ್ಟ್‌ಫುಡ್‌ನಲ್ಲಿ ದೋಸೆ ಹಾಕ್ತೀನಿ ಸಾರ್" ಎಂದ.

"ಅಲ್ಲಾ ಗುರು, ನೀನು ದೋಸೆ ಹಾಕೋದು, ಆ ದೋಸೆ ರುಚಿಸೋ ಹಾಗೆ ಆಗೋದು ನಿನ್ನ ಕೈಚಳಕ, ದೋಸೆ ಹಿಟ್ಟು, ಹದವಾಗಿ ಕಾದ ಎಣ್ಣೆ-ಕಾವಲಿ ಇವುಗಳಿಂದ ತಾನೆ? ನೀನು ದೋಸೆ ಚೆನ್ನಾಗಿ, ರುಚಿಕಟ್ಟಾಗಿ ಬರಲಿ ಅಂತ ಯಾವತ್ತಾದರೂ ಪೂಜೆ-ಪುನಸ್ಕಾರ-ಹೋಮ ಮಾಡಿದ್ದೇನಾದರೂ ಇದೆಯಾ?" ಎಂದೆ.

ಅರೆಕ್ಷಣ ಗಲಿಬಿಲಿಗೊಳಗಾದ ಆತ "ಅದೆಂಗೆ ಸಾರ್? ಇವೆಲ್ಲ ಒಂಥರ ನಂಬಿಕೆ ಅಲ್ವಾ ಸಾರ್..." ಎಂದು ಇನ್ನೇನೋ ಹೇಳಲು ಹೋದ.

ನಾನು "ಕ್ರಿಕೆಟ್ ಕೂಡ ನೀನು ದೋಸೆ ಹಾಕೋ ಹಾಗೆಯೇ ಒಂದು ಪ್ರಾಕ್ಟೀಸ್, ಕಲೆ, ಪ್ರತಿಭೆ ತಾನೆ? ಯಾರು ಚೆನ್ನಾಗಿ ಆಟ ಆಡ್ತಾರೋ ಅವರು ಗೆಲ್ತಾರೆ ಅನ್ನೋದು ಎಲ್ಲಾ ಸ್ಪೋರ್ಟ್ಸ್‌ಗಳಲ್ಲೂ ನಿಜ ತಾನೆ?" ಎಂದೆ.

ಆತ ನನ್ನ ಮಾತಿಗೆ ಏನೋ ಹೇಳಲು ಹೋಗಿ ಏನೂ ತೋಚದೆ ಕ್ರಿಕೆಟ್‌ನತ್ತ ಮಗ್ನನಾಗಿಬಿಟ್ಟ.

ಆ ಯುವಕನ ಗೊಂದಲದ ಮನಸ್ಥಿತಿಗೂ, ಈ ದೇಶಕ್ಕೆ ಕ್ರಿಕೆಟ್ ಎಂಬ ಕ್ರೀಡೆಯ ಮೂಲಕ ಅಂಟಿಕೊಂಡಿರುವ ಸಮೂಹ ಸನ್ನಿಗೂ, ನಮ್ಮ ನಡುವಿನ ಹತ್ತಾರು ಹುಡುಗರು ಕ್ರಿಕೆಟ್ ಒಂದಲ್ಲದೆ ಬೇರೇನೂ ಗೊತ್ತಿಲ್ಲದ ಅಂಗವಿಕಲರಂತೆ ಆಡುವುದಕ್ಕೂ ಸಂಬಂಧವಿದೆಯೇನೋ ಅನ್ನಿಸಿತು. ಹೀಗೆ ಕ್ರಿಕೆಟ್ ಎಂಬುದು ಒಂದು ಬಗೆಯ ವಿಕೃತ ಸಮೂಹ ಸನ್ನಿಯ ಹಾಗೆ ನಮ್ಮ ಜನಸಮುದಾಯಗಳನ್ನು ಹಿಡಿದುಕೊಂಡಿರುವುದರ ಹಿಂದೆ ಮೀಡಿಯಾಗಳ ಅಪ್ರಬುದ್ಧತೆಯೂ ಕಾರಣವಿರಬಹುದು ಎಂದುಕೊಂಡೆ. ಯಾಕೆಂದರೆ ದೇಶಾದ್ಯಂತ ನಿತ್ಯ ನಡೆಯುವ ಹಲವಾರು ಕ್ರೀಡಾ ಚಟುವಟಿಕೆಗಳ ಬಗ್ಗೆ ಎಂದೂ ಒಂದು ಸಣ್ಣ ಸುದ್ದಿಯನ್ನೂ ಪ್ರಸಾರ ಮಾಡದ ಮಾಧ್ಯಮಗಳು; ಅದರಲ್ಲೂ ಟೀವಿ ಚಾನೆಲ್‌ಗಳು, ಕ್ರಿಕೆಟ್ ಆಟದ ಸಂದರ್ಭದಲ್ಲಿ ಉದ್ರೇಕಕಾರಿಯಾಗಿ ವರ್ತಿಸುವುದನ್ನು ನೋಡಿದರೆ ಇದು ನಿಜವೆನ್ನಿಸುತ್ತದೆ.

ಸುಮ್ಮನೆ ಯೋಚಿಸಿ ನೋಡಿ: ಕ್ರಿಕೆಟ್ ಕೂಡ ಎಲ್ಲ ಆಟಗಳ ಹಾಗೆ ಒಂದು ಆಟ ತಾನೆ? ಆದರೆ ನಮ್ಮ ಇಂಡಿಯಾ ಸಮಾಜ ಅದನ್ನು ಎಂದಾದರೂ ಕ್ರೀಡೆಯ ಹಾಗೆ ಸ್ವೀಕರಿಸಿದ್ದಿದೆಯೆ? ಜಗತ್ತಿನ, ಅಷ್ಟೇಕೆ ಭಾರತದ ಯಾವ ಕ್ರೀಡೆಗಳನ್ನೂ ಅಷ್ಟಾಗಿ ಆಸಕ್ತಿಯಿಂದ ಗಮನಿಸದ ಇಂಡಿಯಾ ಸಮಾಜ ಕ್ರಿಕೆಟ್‌ಅನ್ನು ಮಾತ್ರ ಏಕಮೇವ ಭಾರತೀಯ ಕ್ರೀಡೆ ಎಂದು ಭಾವಿಸಿ, ಅದರ ಸುತ್ತ ಮೋಹದ ಪರದೆಯನ್ನು ಕಟ್ಟಿಕೊಂಡು ಉನ್ಮತ್ತ ಸ್ಥಿತಿಯನ್ನು ಅನುಭವಿಸುತ್ತಿರುವುದೇಕೆ? ಇಂಡಿಯಾ-ಪಾಕಿಸ್ತಾನದ ಸೆಮಿಫೈನಲ್‌ನ

> ಕ್ರಿಕೆಟ್ ಅನ್ನು ಪೂಜಿಸುವ ಈ ಎಲ್ಲಾ ವರ್ಗದ ಜನರು ಇದೇ ಕ್ರಿಕೆಟ್‌ನಲ್ಲಿ ಹರಿಯುವ ಹಣದ ಹೊಳೆ, ಜಾಹೀರಾತಿನ ಮಾರುಕಟ್ಟೆ, ಕ್ರಿಕೆಟಿಗರ ಕೋಟ್ಯಂತರ ಆದಾಯ, ಬುಕ್ಕಿಗಳ ಮಾಫಿಯಾ ಎಲ್ಲದರ ಬಗ್ಗೆಯೂ ಮಾತನಾಡಬಲ್ಲರು. ಹೆಂಡದ ಮಾಲೀಕರಿಗೆ, ಸಿನಿಮಾ ನಟಿಯರಿಗೆ ತಮ್ಮನ್ನು ಮಾರಿಕೊಳ್ಳುವ ಕ್ರಿಕೆಟಿಗರ ಗುಲಾಮಗಿರಿಯನ್ನು ನಿರ್ಲಿಪ್ತವಾಗಿ ನೋಡಬಲ್ಲರು.



ಸಂದರ್ಭದಲ್ಲಿ ನಮ್ಮ ಜನರು ವರ್ತಿಸಿದ ರೀತಿಯನ್ನೂ, ನಮ್ಮ ಮೀಡಿಯಾಗಳು ಅದಕ್ಕೊಂದು ಯುದ್ಧೋನ್ಮಾದದ ಪರಿಭಾಷೆಯನ್ನು ಕಲ್ಪಿಸಿಕೊಟ್ಟಿದ್ದನ್ನೂ ಗಮನಿಸಿದರೆ ಇದು ಅರ್ಥವಾಗಬಹುದು. ಇಂಡಿಯಾ-ಪಾಕಿಸ್ತಾನ ಎಂದಾದರೂ ಹಾಕಿ ಪಂದ್ಯವನ್ನೋ, ಕಬಡ್ಡಿ ಆಟವನ್ನೋ ಆಡಿದ್ದಾದರೆ ಈ ದೇಶದ ಕ್ರೀಡಾಪ್ರೇಮಿಗಳಲ್ಲಿ ಇದ್ದಿರಬಹುದಾದ ಮನಸ್ಥಿತಿಯನ್ನೂ ಕ್ರಿಕೆಟ್ ಆಡುವ ಸಂದರ್ಭದ ಮನಸ್ಥಿತಿಯನ್ನೂ ಊಹಿಸಿಕೊಳ್ಳಿ. ಇದರ ಹಿಂದೆ ಕ್ರೀಡಾಸಕ್ತಿ ಮಾತ್ರ ಕೆಲಸ ಮಾಡುತ್ತಿದೆಯೆಂದುಕೊಳ್ಳಬಹುದೆ? ಹಾಗಿದ್ದರೆ ಕ್ರಿಕೆಟ್ ಅನ್ನು ಆಸಕ್ತಿಯಿಂದ, ತಾಂತ್ರಿಕವಾಗಿ ವಿಶ್ಲೇಷಿಸುವ ಹಾಗೆ ಇತರೆ ಆಟಗಳನ್ನು ವಿಶ್ಲೇಷಿಸಲು ಈ ದೇಶದ ಕ್ರೀಡಾಪ್ರೇಮಿಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ? ಅಷ್ಟೇಕೆ, ಈ ದೇಶದಲ್ಲಿ ಚಾಲ್ತಿಯಲ್ಲಿರುವ ದೇಶಿ ಕ್ರೀಡೆಗಳ ಬಗ್ಗೆ, ಅವು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗಳಿಸಿಕೊಂಡಿರುವ ಸ್ಥಾನಮಾನಗಳ ಬಗ್ಗೆ ಈ 'ಕ್ರೀಡಾ ಪ್ರೇಮಿಗಳಿಗೆ' ಕಿಂಚಿತ್ತಾದರೂ 'ನಾಲೆಜ್' ಇದೆಯೆ? ಕ್ರಿಕೆಟ್‌ಅನ್ನು 'ದೇಶಪ್ರೇಮ'ದ ಭಾವನಾತ್ಮಕ ನೆಲೆಯಲ್ಲಿ ಆರಾಧಿಸುವ ಕೂಲಿ ಕಾರ್ಮಿಕರು, ಮಧ್ಯಮವರ್ಗದವರು, ಸರ್ಕಾರಿ ಕಚೇರಿಯ ನೌಕರರು, ಶಾಲಾ ಕಾಲೇಜುಗಳ ಹುಡುಗರು ಎಂದಾದರೂ ದೇಶದ ಇತರೆ ಆಟಗಳನ್ನು ಗಂಭೀರವಾಗಿ ಪರಿಗಣಿಸಿದ್ದಿದೆಯೆ?

ವಿಚಿತ್ರವೆಂದರೆ, ಹೀಗೆ ಕ್ರಿಕೆಟ್ ಅನ್ನು ಪೂಜಿಸುವ ಈ ಎಲ್ಲಾ ವರ್ಗದ ಜನರು ಇದೇ ಕ್ರಿಕೆಟ್‌ನಲ್ಲಿ ಹರಿಯುವ ಹಣದ ಹೊಳೆ, ಜಾಹೀರಾತಿನ ಮಾರುಕಟ್ಟೆ, ಕ್ರಿಕೆಟಿಗರ ಕೋಟ್ಯಂತರ ಆದಾಯ, ಬುಕ್ಕಿಗಳ ಮಾಫಿಯಾ ಎಲ್ಲದರ ಬಗ್ಗೆಯೂ ಮಾತನಾಡಬಲ್ಲರು. ಹೆಂಡದ ಮಾಲೀಕರಿಗೆ, ಸಿನಿಮಾ ನಟಿಯರಿಗೆ ತಮ್ಮನ್ನು ಮಾರಿಕೊಳ್ಳುವ ಕ್ರಿಕೆಟಿಗರ ಗುಲಾಮಗಿರಿಯನ್ನು ನಿರ್ಲಿಪ್ತವಾಗಿ ನೋಡಬಲ್ಲರು. ದೇಶದ ಪರವಾಗಿ ಆಡುತ್ತಿದ್ದೇವೆಂದು ಸುಳ್ಳು ಸುಳ್ಳೇ ಹೇಳುವ ಕ್ರಿಕೆಟಿಗರು 20-20 ಪಂದ್ಯಗಳಲ್ಲಿ ಇನ್ನೊಂದು ದೇಶದ ಆಟಗಾರರೊಂದಿಗೆ ಒಂದು ಟೀಮಾಗಿ ಆಡುವುದರ ಬಗ್ಗೆ ಮುಗುಮ್ಮಾಗಿ ಇರಬಲ್ಲರು.

-ಇವೆಲ್ಲವನ್ನೂ ಸೂಕ್ಷ್ಮವಾಗಿ ಯೋಚಿಸಿದರೆ ಸಾಕು. ಈ ದೇಶಕ್ಕೆ ತಗುಲಿರುವ ಅನೇಕ ಬಗೆಯ ಪೂರ್ವಾಗ್ರಹಗಳು ಎಂತಹವು ಎಂಬುದು ಅರ್ಥವಾಗುತ್ತದೆ. ಎಂದೂ ಕೂಡ ರಾಷ್ಟ್ರಗೀತೆಯನ್ನು ಪೂರ್ಣವಾಗಿ, ಸ್ಪಷ್ಟವಾಗಿ ಹಾಡಲು ಗೊತ್ತಿಲ್ಲದ, 'ವಂದೇ ಮಾತರಂ' ಗೀತೆಯನ್ನು ಬರೆದವರು ಯಾರೆಂಬುದು ಗೊತ್ತಿಲ್ಲದ, ಎಲ್ಲಿಯಾದರೂ ರಾಷ್ಟ್ರಗೀತೆಯ ಸ್ವರ ಕೇಳಿಬಂದಾಗ ಎದ್ದು ನಿಂತು ಗೌರವ ಸೂಚಿಸಬೇಕೆನ್ನುವ ಕನಿಷ್ಠ ಸಾಂವಿಧಾನಿಕ ನಡವಳಿಕೆಗಳೂ ತಿಳಿಯದ ಈ ದೇಶದ 'ಕ್ರಿಕೆಟ್ ಭಕ್ತರು' ಭಾರತ ತಂಡ ಕ್ರಿಕೆಟ್‌ನಲ್ಲಿ ಗೆದ್ದಾಗ ಮಾತ್ರ ಹುಚ್ಚರಂತೆ ಬಾವುಟ ಹಿಡಿದು ಕುಣಿಯುವುದನ್ನು, 'ವಂದೇ ಮಾತರಂ'ಅನ್ನು, ಜಾಹೀರಾತುಗಳ ಘೋಷಣೆಗಳನ್ನು ಅರಚುವುದನ್ನು ಕಂಡು ಅಸಹ್ಯವಾಗುತ್ತದೆ. ಈ ದೇಶದಲ್ಲಿ ನೆರೆ-ಬರ ಪರಿಸ್ಥಿತಿ ಉಂಟಾದಾಗ, ಬಡತನ, ಹಸಿವಿನಿಂದ ಯಾರಾದರೂ ಸಾಯುತ್ತಿದ್ದಾಗ, ಎಲ್ಲಿಯಾದರೂ ಶೋಷಣೆಯ ಕಾರಣದಿಂದಾಗಿ ಮನುಷ್ಯನೊಬ್ಬ ಕೊಲ್ಲಲ್ಪಟ್ಟಾಗ ಅವರೆಲ್ಲರೂ ನನ್ನ ದೇಶದ ಜನರೆಂಬ ಕಾರಣಕ್ಕೆ ಎಚ್ಚೆತ್ತುಕೊಳ್ಳದ ದೇಶಪ್ರೇಮ ಸಚಿನ್, ಧೋನಿ ಇವರೆಲ್ಲರ ಆಟಗಳನ್ನು ಕಂಡಾಗ ರೋಮಾಂಚನಗೊಳ್ಳುವುದರ ಹಿಂದಿನ ಮರ್ಮ ಏನಿರಬಹುದು? 'ದೇಶಪ್ರೇಮ' ಎನ್ನುವುದರ ಹಿಂದಿನ ಅರ್ಥ, ವ್ಯಾಖ್ಯಾನಗಳು ಈ ದೇಶದಲ್ಲಿ ಎಷ್ಟು ಬಗೆಯಲ್ಲಿ ಇರಬಹುದು?

ಎಲ್ಲಾ ಮುಗಿದು ತನ್ನ ಕಚೇರಿಯಿಂದ ನನ್ನನ್ನು ಮನೆಗೆ ಬೈಕ್‌ನಲ್ಲಿ ಕಳುಹಿಸಲು ಬಂದ ನನ್ನ ಗೆಳೆಯನ ಭಾವೋನ್ಮತ್ತ ಸ್ಥಿತಿಯನ್ನು ಕಂಡು ಕೇಳಿದೆ: "ಇಷ್ಟೆಲ್ಲ ಸಂಭ್ರಮಿಸಿದೆಯಲ್ಲ, ನಿನಗೆ ಈ ಕ್ರಿಕೆಟ್‌ನಿಂದಾಗಿ ಈ ಅರ್ಧರಾತ್ರಿಯ ಹುಚ್ಚಾಟಗಳ ಹೊರತಾಗಿ ಬೇರೇನಾದರೂ ಲಾಭವಾಯಿತೆ?"

"ಅದ್ರೂ ಒಂಥರಾ ಖುಷಿ ಅಲ್ವಾ?" ಎಂದ ಆತ.

"ಅದು ಎಂಥ ಖುಷಿ ಇರಬಹುದು ಹೇಳು ನೋಡೋಣ" ಎಂದೆ.


ನಿಜವಾಗಿಯೂ ಆತನಿಗೆ ಹೇಳಲು ಏನೂ ತೋಚಲಿಲ್ಲ. ಎಲ್ಲರೂ ಕುಣಿದು ಕುಪ್ಪಳಿಸಿದ ಹಾಗೆ ಆತ ಕೂಡ ಕುಣಿದಿದ್ದನಷ್ಟೆ. ಬೆಳಗಾದರೆ ತಾನು ಮಾಡಿರುವ ಸಾಲಕ್ಕೆ ಬಡ್ಡಿ ಕಟ್ಟಬೇಕಾಗಿರುವ, ತನ್ನ ಊರಿನಲ್ಲಿ ಪಾಳು ಬಿದ್ದಿರುವ ಜಮೀನನ್ನು ಉಳಲು ಅಸಹಾಯಕನಾಗಿರುವ, ಖಾಸಗಿ ಕಂಪೆನಿಯಲ್ಲಿನ ತನ್ನ ಕೆಲಸ ಯಾವತ್ತು ಕಳೆದುಹೋಗುತ್ತದೆಯೋ ಎಂದು ಕಳವಳದಲ್ಲಿರುವ, ತನ್ನ ಮಗುವನ್ನು ಸ್ಕೂಲಿಗೆ ಸೇರಿಸಲು ಎಲ್ಲಿಯಾದರೂ ಹಣ ಹೊಂಚಬೇಕಾಗಿರುವ ಆತ ತನ್ನ 'ಕ್ರಿಕೆಟ್‌ನ ಭಾವೋನ್ಮಾದ'ವನ್ನು ಬದುಕಿನ ಇವೆಲ್ಲ ವಾಸ್ತವ ಪ್ರಶ್ನೆಗಳನ್ನಿಟ್ಟುಕೊಂಡು ಹೇಗೆ ಹಂಚಿಕೊಳ್ಳಬಲ್ಲ?

ಕೊನೆಗೆ, ಈ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತದ ಕ್ರಿಕೆಟ್ ತಂಡ ಪಾಕಿಸ್ತಾನ ತಂಡವನ್ನೇನಾದರೂ ಮುಖಾಮುಖಿಯಾಗುವಂತಾಗಿದ್ದರೆ, ಅದರಲ್ಲಿ ಭಾರತ ಗೆಲ್ಲುವಂತಾಗಿದ್ದರೆ ನನ್ನ ಈ ಗೆಳೆಯನ ಪ್ರತಿಕ್ರಿಯೆ ಹೇಗಿರುತ್ತಿತ್ತು ಎಂದುಕೊಂಡೆ.

ನನ್ನ ಹಾಗೆಯೇ ಕೆಳಜಾತಿಯಲ್ಲಿ ಹುಟ್ಟಿರುವ ನನ್ನ ಆ ಸ್ನೇಹಿತ, ಏಳನೇ ಕ್ಲಾಸು ಮಾತ್ರ ಓದಿರುವ, ಹಿಂದೂವಾದ, ಕೋಮುವಾದ ಏನೆಂದರೆಂದು ಗೊತ್ತಿಲ್ಲದ; ಹೋಮ-ಹವನಗಳ ಪರಿಚಯವಿಲ್ಲದ, ಜ್ಯೋತಿಷ್ಯವೆಂದರೇನೆಂದು ತಿಳಿಯದ; ಆದರೆ ಟೀವಿ ಚಾನೆಲ್‌ಗಳಿಂದಾಗಿ ಅವೆಲ್ಲಕ್ಕೂ ತನ್ನದೇ ಅರ್ಥ ಕಲ್ಪಿಸಿಕೊಂಡಿರುವ ಆತ ತನ್ನ ಸುತ್ತಲಿನ ಕ್ರಿಕೆಟ್ ಉನ್ಮಾದವನ್ನು ಹೇಗೆ ಪ್ರಕಟಿಸುತ್ತಿದ್ದ ಎಂದು ಸುಮ್ಮನೆ ಯೋಚಿಸತೊಡಗಿದೆ.

• ಮಂಜುನಾಥ್‌ಲತಾ

ಕುವೆಂಪು ಕೃತಿಗಳ ಬಹುವಚನೀಯ ಓದು ಹಾಗೂ ಅರ್ಥೈಸುವಿಕೆ



...ವೆಂಪು ಅವರು ತಮ್ಮ ನಾಟಕಕ್ಕೆ ನೀಡಿರುವ ಶೀರ್ಷಿಕೆಯೇ ಬಹು ಬಗೆಯ ಅರ್ಥಗಳನ್ನು ...ೂರಡಿಸುತ್ತದೆ; 'ಶೂದ್ರ' ಹಾಗು 'ತಪಸ್ವಿ' ಎಂಬ ಸ್ಥಾಪಿತ ಪದಗಳ ವಿರುದ್ಧಾರ್ಥಗಳನ್ನು ಬುಡಮೇಲು ...ಾಡಿ ಹೊಸ ಬಗೆಯ ಅರ್ಥವನ್ನು ಹೊರಡಿಸಲು ಪ್ರಯತ್ನಿಸುತ್ತದೆ. ಈ ಅರ್ಥ 'ರಾಮ' ಅಥವಾ ...ರ್ಮಶ್ರದ್ಧೆ'ಯನ್ನು ಸಂಪೂರ್ಣವಾಗಿ ತ್ಯಜಿಸಿದಂತಹ ಸೃಜನಶೀಲ ದೃಷ್ಟಿಯೇ? ಎಂಬ ಪ್ರಶ್ನೆಯನ್ನು ...ವು ಎದುರಿಸಲೇಬೇಕು. ಇದಕ್ಕಾಗಿ ನಾವು ಕುವೆಂಪು ಅವರ ಬದುಕು ಹಾಗು ಕೃತಿಗಳನ್ನು ಅವುಗಳ ...ಹುಳ್ಯದಲ್ಲಿ ಕಾಣದೆ ವಿಧಿ ಇಲ್ಲ.

...ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಸಂಪತ್‌ಕುಮಾರ್, ನಾವು ...ಸ್ನಾನದ ಆಚರಣೆಯನ್ನು ಸಮರ್ಥಿಸುತ್ತಿದ್ದೇವೆ ಎಂದು ಬರೆದಿದ್ದಾರೆ. ...ವಿಷಯ ಕುರಿತ ಅಕ್ಷರ ಅವರ ಲೇಖನವನ್ನು ಪ್ರಕಟಿಸಿದ ಪ್ರಜಾವಾಣಿ, ... ಪ್ರತಿಕ್ರಿಯೆಯನ್ನು ಸಹ ಪ್ರಕಟಿಸಿದೆ. ನಾವಿಬ್ಬರೂ ಅಕ್ಷರ ಅವರ ...ಪ್ರಾಯಗಳ ಬಗ್ಗೆ ನಮಗಿರುವ ಆಕ್ಷೇಪಗಳನ್ನು ಸ್ಪಷ್ಟವಾಗಿ ಹೇಳಿದ್ದೇವೆ. ...ಂತರದ ತಮ್ಮ ಪ್ರತಿಕ್ರಿಯೆಯಲ್ಲಿ ಅಕ್ಷರ ಕೂಡ ತಾವು ಮಡೆಸ್ನಾನವನ್ನು ...ರ್ಥಿಸಿಲ್ಲ ಎಂಬ ಸ್ಪಷ್ಟೀಕರಣವನ್ನೂ ನೀಡಿದ್ದಾರೆ. ಇಷ್ಟಾಗಿಯೂ ...ವಿಷಯ ಹಿಡಿದುಕೊಂಡು ಸಂಪತ್ ...ಾರ್ ಮತ್ತೆ ಅದೇ ಆಪಾದನೆ ...ಡಿದ್ದಾರೆ. ಮಡೆಸ್ನಾನ ಕುರಿತು ನಮ್ಮ ...ವು ಏನು ಎಂದು ಇವರಿಗೆ ಮತ್ತೆ ...ರಿಸಿ ಹೇಳುವುದರಲ್ಲಿ ಯಾವ ...ಪ್ರಯೋಜನಾರ್ಥವೂ ಇಲ್ಲ, ಯಾಕೆಂದರೆ ... ಬಂದವರನ್ನು ಎಚ್ಚರಿಸಬಹುದು; ...ೆ ನಿದ್ರೆ ಬಂದಂತೆ ನಟಿಸುವವರನ್ನು ...ಪಿಸಲು ಸಾಧ್ಯವಿಲ್ಲ.



...ನೀನಾಸಂನಲ್ಲಿ ನಮ್ಮ ಪ್ರಜಾಪ್ರಭುತ್ವದ ಹಲವು ಸಂಸ್ಥೆಗಳಿಗಿಂತ ಹೆಚ್ಚು ...ತ್ಯವಿದೆ ಎಂಬ ಮಾತಿಗೆ ಪ್ರತಿಕ್ರಿಯೆಯಾಗಿ ಸಂಪತ್‌ಕುಮಾರ್ ...ಸಂ ದುಡ್ಡಿನ ಲೆಕ್ಕ ಕೊಡಲಿ ಎಂದು ತಾಕೀತು ಮಾಡಿದ್ದಾರೆ. ನಾವು ...ಸಂನ ನಾಟಕಗಳು, 'ತಿರುಗಾಟ'ದ ಕಾರ್ಯಕ್ರಮ, ರಂಗಶಿಕ್ಷಣ, ...ರಸಂಕಿರಣ ಮುಂತಾದವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಲ್ಲಿನ ...ಾರಿಕ ಸ್ವಾತಂತ್ರ್ಯದ ಬಗ್ಗೆ ಹೇಳಿದ್ದರೆ, ಇವರು ದುಡ್ಡಿನ ಲೆಕ್ಕ ಕೇಳುತ್ತಾರೆ! ...ಸಂ ಒಂದು ರಿಜಿಸ್ಟರ್ಡ್ ಸಂಸ್ಥೆ; ಹಾಗಾಗಿ ಆ ಸಂಸ್ಥೆಯ ಮುಖ್ಯಸ್ಥರು ಪ್ರತಿ ವರ್ಷದ ಆಯ-ವ್ಯಯದ ಆಡಿಟೆಡ್ ಲೆಕ್ಕಾಚಾರವನ್ನು ಸರಕಾರಕ್ಕೆ ಕೊಟ್ಟಿರುತ್ತಾರೆ; ಅಲ್ಲದೇ, ನೀನಾಸಂ ತನ್ನ ಸಂಸ್ಥೆಯ ಸಂಪರ್ಕ ಪತ್ರಿಕೆ 'ಮಾತುಕತೆ'ಯಲ್ಲಿ ವಾರ್ಷಿಕ ಆಯ-ವ್ಯಯಗಳ ವಿವರಗಳನ್ನೂ ಸಾರಾಂಶದಲ್ಲಿ ಪ್ರಕಟಿಸುತ್ತದೆ. ಇಷ್ಟಾಗಿಯೂ ಸಂಸ್ಥೆಯ ವ್ಯವಹಾರಗಳ ಬಗ್ಗೆ ಅನುಮಾನವಿರುವವರಿಗೆ ಸಂಬಂಧಪಟ್ಟ ಇಲಾಖೆಗಳಿಂದ ಸವಿವರವಾದ ಮಾಹಿತಿ ಸಂಗ್ರಹಿಸುವ ಸ್ವಾತಂತ್ರ್ಯವೂ ಇದೆ. ಅದಕ್ಕೆ ಹೊರ ತಾಗಿ, ಲೆಕ್ಕಪತ್ರವನ್ನು ಸಂತೆಯಲ್ಲಿ ನಿಂತು ಕರಪತ್ರದ ಹಾಗೆ ಹಂಚುವ ಗರಜು ಸಾರ್ವಜನಿಕ ಬಾಧ್ಯಸ್ತಿಕೆ ಇರುವ ಯಾವ ಸಂಸ್ಥೆಗೂ ಇಲ್ಲ; ನೀನಾಸಂ ಸಂಸ್ಥೆಯ ಲೆಕ್ಕಶೋಧವೂ ಪ್ರಜಾಪ್ರಭುತ್ವದ ಈ ಪರಿಶೀಲನಾ ನಡಾವಳಿಗಳ ಆಧಾರದಲ್ಲಿ ಮಾತ್ರವೇ ಇರಬೇಕು ಎಂಬುದು ನಮ್ಮ ಸ್ಪಷ್ಟವಾದ ನಿಲುವು.

ನೀನಾಸಂ 'ತಿರುಗಾಟ'ಕ್ಕೆ 'ಶೂದ್ರ ತಪಸ್ವಿ' ನಾಟಕವನ್ನು ನಿರ್ದೇಶಿಸಿದ ಮಂಜುನಾಥ ಬಡಿಗೇರ್ 'ಕುವೆಂಪು ಮೂಲಕ' ಶಂಭೂಕನನ್ನು ನೋಡಬೇಕು ಎಂದು ಸಂಪತ್‌ಕುಮಾರ್ ಅಪ್ಪಣೆ ಕೊಡಿಸಿದ್ದಾರೆ. ಮಂಜುನಾಥ್ ಕೂಡ 'ಕುವೆಂಪು ಮೂಲಕ'ವೇ ನಾಟಕವನ್ನು ತಮಗಿಂತ ಭಿನ್ನ ಬಗೆಯಲ್ಲಿ ಅರ್ಥೈಸಿಕೊಳ್ಳುವ ಸಾಧ್ಯತೆಗಳಿವೆ ಎಂಬ ಸಂಗತಿ ಸಂಪತ್‌ಕುಮಾರರಿಗೆ ಪಥ್ಯವಾದಂತೆ ಕಾಣುತ್ತಿಲ್ಲ; ಅವರ ಮಾತಿನ ಧ್ವನಿ, ಕುವೆಂಪು ಅವರ ಬೌದ್ಧಿಕ ಸಂಪತ್ತಿಗೆ ತಾವೇ ಏಕೈಕ ವಾರಸುದಾರ ಹಾಗು ವಕ್ತಾರ ಎಂಬಂತಿದೆ. ಈ ವಾಗ್ವಾದದಲ್ಲಿ ಸಂಪತ್‌ಕುಮಾರ್ ಕುವೆಂಪು ಅವ ರನ್ನು ಗುರಾಣಿಯಂತೆ ಬಳಸಿಕೊಳ್ಳುವುದರ ಮೂಲಕ, ಅವರ ಕೃತಿಗಳ ಬಹುವಚನೀಯ ಓದು ಹಾಗು ಅರ್ಥೈಸುವಿಕೆಗಳನ್ನು ಅಲ್ಲಗಳೆಯುತ್ತಿದ್ದಾರೆ ಮತ್ತು ಕುವೆಂಪು ಅವರ ಬಹುಮುಖಿ ವ್ಯಕ್ತಿತ್ವಕ್ಕೂ ಅಪಚಾರ ಮಾಡುತ್ತಿದ್ದಾರೆ. ಮಂಜುನಾಥ್ ಬಡಿಗೇರರ ನಿರ್ದೇಶನವನ್ನು ವಿಮರ್ಶೆಗೆ ಒಳಪಡಿಸುವುದನ್ನು ನಾವು ಆಕ್ಷೇಪಿಸುತ್ತಿಲ್ಲ, ಆದರೆ, ಕುವೆಂಪು ಅವರ ಬರವಣಿಗೆಗಳು ಮಂಜುನಾಥರ ಅರ್ಥೈಸುವಿಕೆಗೂ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ- ಇದು ಬರವಣಿಗೆಯ ಶಕ್ತಿಯೇ ಹೊರತು ದೌರ್ಬಲ್ಯವಲ್ಲ- ಎನ್ನುವುದನ್ನು ನಾವು ಗಮನಿಸಬೇಕು. ಕುವೆಂಪು ಅವರು ತಮ್ಮ ನಾಟಕಕ್ಕೆ ನೀಡಿರುವ ಶೀರ್ಷಿಕೆಯೇ ಬಹು ಬಗೆಯ ಅರ್ಥಗಳನ್ನು ಹೊರಡಿಸುತ್ತದೆ; 'ಶೂದ್ರ' ಹಾಗು 'ತಪಸ್ವಿ' ಎಂಬ ಸ್ಥಾಪಿತ ಪದಗಳ ವಿರುದ್ಧಾರ್ಥಗಳನ್ನು ಬುಡಮೇಲು ಮಾಡಿ ಹೊಸ ಬಗೆಯ ಅರ್ಥವನ್ನು ಹೊರಡಿಸಲು ಪ್ರಯತ್ನಿಸುತ್ತದೆ. ಈ ಅರ್ಥ 'ರಾಮ' ಅಥವಾ 'ಧರ್ಮಶ್ರದ್ಧೆ'ಯನ್ನು ಸಂಪೂರ್ಣವಾಗಿ ತ್ಯಜಿಸಿದಂತಹ ಸೃಜನಶೀಲ ದೃಷ್ಟಿಯೇ? ಎಂಬ ಪ್ರಶ್ನೆಯನ್ನು ನಾವು ಎದುರಿಸಲೇಬೇಕು. ಇದಕ್ಕಾಗಿ ನಾವು ಕುವೆಂಪು ಅವರ ಬದುಕು ಹಾಗು ಕೃತಿಗಳನ್ನು ಅವುಗಳ ಬಾಹುಳ್ಯದಲ್ಲಿ ಕಾಣದೆ ವಿಧಿ ಇಲ್ಲ.

ಕುವೆಂಪು ತಮ್ಮ ಯೌವನವನ್ನು ಕಳೆದದ್ದು ರಾಮಕೃಷ್ಣಾಶ್ರಮದಲ್ಲಿ. ರಾಮಕೃಷ್ಣ ಪರಮಹಂಸರ ಬದುಕಿನ ಕುರಿತ ಬಂಗಾಳಿ ಉದ್ಗ್ರಂಥ 'ಕಥಾಮೃತ'ದ ಕನ್ನಡ ಅನುವಾದ 'ರಾಮಕೃಷ್ಣ ವಚನ ವೇದ' ಕನ್ನಡಕ್ಕೆ ಕುವೆಂಪು ಅವರ ಮಹತ್ವದ ಕೊಡುಗೆ. ಎರಡು ಬೃಹತ್ ಸಂಪುಟಗಳಲ್ಲಿರುವ ಕುವೆಂಪು ಅವರ ಆತ್ಮಚರಿತ್ರೆ 'ನೆನಪಿನ ದೋಣಿಯಲ್ಲಿ' ಅವರ ಆಳವಾದ ಧಾರ್ಮಿಕ ಶ್ರದ್ಧೆಯ ಪರಿಚಯ ನಮಗೆ ಆಗುತ್ತದೆ. 'ನಾಸ್ತಿಕತೆ' ಹಾಗು 'ಧರ್ಮಶ್ರದ್ಧೆಯ ನಿರಾಕರಣೆ'ಯ ನೆಲೆಯಿಂದ ನಾವು ನಮ್ಮನ್ನು 'ಸೆಕ್ಯುಲಾರ್' ಎಂದು ಕರೆದುಕೊಳ್ಳುತ್ತಿದ್ದೇವಲ್ಲವೇ? ಆ ಅರ್ಥದಲ್ಲಿ ತಮ್ಮ ಬದುಕಿನಲ್ಲಿ ಕುವೆಂಪು ಯಾವತ್ತೂ 'ಸೆಕ್ಯುಲಾರ್' ಆಗಿರಲಿಲ್ಲ, ಆದರೆ, ಅದೇ ಹೊತ್ತಿಗೆ, 'ಧಾರ್ಮಿಕ ಶ್ರದ್ಧೆ' ಮತ್ತು ಅದರ ಅಭಿವ್ಯಕ್ತಿಯಲ್ಲಿ ಕುವೆಂಪು ಹಾಗು ಅವರಿಗೆ ಸಮಕಾಲೀನರಾಗಿದ್ದ ಮಾಸ್ತಿ, ಬೇಂದ್ರೆ, ಪು.ತಿ.ನ., ಕೆ.ಎಸ್.ಎನ್.ರ ನಡುವೆ ಇರುವ ಮಹತ್ವದ ವ್ಯತ್ಯಾಸಗಳನ್ನೂ, ಕುವೆಂಪು ಅವರ 'ಆಸ್ತಿಕ-ಧರ್ಮಶ್ರದ್ಧೆ' ಪ್ರೇರಿತ ವೈಚಾರಿಕತೆಗೂ ಶಿವರಾಮ ಕಾರಂತರ 'ನಾಸ್ತಿಕ-ಲೌಕಿಕ' ವೈಚಾರಿಕತೆಗೂ ಇರುವ ಚುಂಬಕ ವೈರುಧ್ಯತೆಯಲ್ಲಿ ಕನ್ನಡದ ಸಾಮಾಜಿಕ ಬದಲಾವಣೆಯ ಸಂಕಲ್ಪ ಶಕ್ತಿಯು ಪ್ರವಹಿಸಿದ್ದನ್ನೂ ನಾವು ಯಾಕೆ ಕಡೆಗಣಿಸಬೇಕು? 1947ರ ದೇಶವಿಭಜನೆಯ ಸಂದರ್ಭದಲ್ಲಿ ಗಾಂಧೀಜಿ ಇಂದಿನ ಬಾಂಗ್ಲಾದೇಶದ ಶ್ರೀರಾಮಪುರದಲ್ಲಿ ಏಕಾಂಗಿಯಾಗಿ ಕೋಮುದ್ವೇಷವನ್ನು ಶಮನ ಮಾಡಲು ಹೆಣಗುತ್ತಿದ್ದರು. ಆಗ ಕುವೆಂಪು ಮೈಸೂರಿನಲ್ಲಿ ಕುಳಿತು ಒಂದು ಪದ್ಯ ಬರೆಯುತ್ತಾರೆ:



• ಜಿ.ರಾಜಶೇಖರ



• ಕೆ.ಫಣಿರಾಜ್

ನಿನ್ನ ಹೆಸರಿನ ಹಳ್ಳಿ ಅದು, ಓ ರಾವಣಾರಿ;
ನಿನ್ನ ನಾಮದ ಭಕುತನಾ ಪೂಜ್ಯಗಾಂಧಿ.
ನಿನ್ನ ಚರಿತೆಯನೊಲಿದ ಕವಿಗೆ ನೀಡಿ ಭಿಕ್ಷೆ:
ಬೇಡುತಿಹೆನಸಹಾಯನಿಗೆ ಆಗು ರಕ್ಷೆ!

ಲೇಖಕರಿಗೆ ಪ್ರಗತಿಶೀಲ, ಪ್ರತಿಗಾಮಿ, ಸೆಕ್ಯುಲಾರ್, ಧಾರ್ಮಿಕ ಇತ್ಯಾದಿ ಲೇಬಲ್ಲುಗಳನ್ನು ಹಚ್ಚುವ ಭರದಲ್ಲಿ ನಾವು ಈ ಸೂಕ್ಷ್ಮಗಳನ್ನು ಗಮನಿಸುವುದು ಇಲ್ಲ; ಸಹಿಸುವುದೂ ಇಲ್ಲ. 'ಶೂದ್ರ ತಪಸ್ವಿ' ನಾಟಕದ ನೀನಾಸಂ ಪ್ರದರ್ಶನ ಕುರಿತು ಈಗ ಕೇಳಿಬರುತ್ತಿರುವ ಟೀಕೆಯಲ್ಲೂ ನಮಗೆ ಈ ಅಸಹನೆ ಕಾಣುತ್ತಿದೆ. •

ಬರಿಗಾಲ ಸಂತ



...ರರಂಚಿನ ಬರಿಗಾಲ ನನ್ನಪ್ಪ
ಎದ್ದಾಳು ಅಲ್ಲ
...ುಲಿದು ಉರಿಉರಿ ಉಜ್ಜುವ
...್ಯಧನ ಮೀಸೆಯೂ ಇಲ್ಲ
...ುಟರಿಕೆ ವಾಚಾಳಿಯೂ ಅಲ್ಲ
...-ಸಹದೇವರಂಥ ಸಾಮಾನ್ಯ ಆಳಿ.
...ಕೆಳಗಷ್ಟೆ ಉಡುವ ಹರಳಯ್ಯ ದಟ್ಟಿಪಂಚೆ
...ು ಗುಂಡಿ ಬಿಳಿಶುಭ್ರ ಅಂಗಿ
ಮೇಲೆ ಹಾಲುಕೆನೆ ದುಪ್ಪಟಿ
...ೇಲೆ ನಾಟ ಮೈಸೂರು ರುಮಾಲುಪೇಟ
ಸೋಮವಾರ ಒಪ್ಪತ್ತಿನೂಟದ ರುದ್ರಪೂಜೆ
...ೂರ ಮುಂಗೋಳಿಪ್ರಿಯನಾಗಿ
... ಪರಿಪಾಟಲ ಬರಿಗಾಲ ಈ ಸಂತ
...ಚುಮು ನಸುಕಿನಲಿ
...ಸ್ ಬೀಡಿಯ ಕಚ್ಚಿ
...ೆದು, ಕೆಮ್ಮುತ್ತ
...ರು ಹೊಳೆಕಡೆ ಹೊರಟನೆಂದರೆ
...ರತಿಯರ ಮದ ಇಳಿಯುತಿತ್ತು,
... ನದಿಯಾಗಿ ಹರಿಯುತ್ತಿರುವ
...ುಲ್ಲಿ ಮುಖಮಜ್ಜನ ಮಾಡಿ
...ಪ್ಪನಿಗೊಪ್ಪಿಸಿ ನಮಿಸಿ
...ಿ ಶಿಲಿಸಿರ ಕುಡಿದು
...ಂಡೆತ್ತಿ ಬರುವಾಗ
...ುರ ಕೃತಜ್ಞತೆಯ ರಂಗೋಲಿ ಸ್ವಾಗತ.
...ರ ಬಳಕ,
... ...ರಿ ...ರಿದ್ದಗೆ

ಆಪ್ತ ಪಿಸುಮಾತು, ಸಂಗಾತಿ ಎತ್ತು ಹಸುಗಳೊಡನೆ
ಅರವುವ ತುಂಬಿದಮವಾಸೆ ಚುಕ್ಕಿರಸಗೊಬ್ಬರ
ಒಟ್ಟುವ ಗುಪ್ಪು ಗುಡ್ಡೆಕೋಣವೆಗಳು
ಕಲಾಮೀಮಾಂಸೆಗೂ ಸಿಗದ ಜಾರುನವಿಲುಗಳು.
ಕೈಕೆಸರಾದರೆ ಬಾಯಿಮೊಸರೆಂಬುದ
ತಪಸ್ವಿನಂತಾಚರಿಸುತ
ದುಃಖವೂ ಇಲ್ಲದ, ದುರಾಸೆಯೂ ಇಲ್ಲದ
ಹಳೆರಾಗಿ ಹುಳಿಮಜ್ಜಿಗೆಯ ನಿರುಮ್ಮಳ ಬದುಕು.
ಪರರ ವಸ್ತುಕಂಡರೆ, ಥೂ ಎಂದುಗಿದು
ಕಣ್ಣೆತ್ತಿಯೂ ನೋಡದೆ ದಾಟಬರಬೇಕೆಂಬ
ಕಟ್ಟುನಿಟ್ಟು ಮಾರ್ಗದರ್ಶನ ಹೆತ್ತ ಕುಡಿಗಳಿಗೆ.
ನ್ಯಾಯಕ್ಕೆ ಕೂತರಂತೂ ತಣ್ಣನೆಯ
ನಾಕು ಮಾತಿಗೂ ಮುತ್ತು ರತ್ನಬೆಲೆ
ಹಳ್ಳಸಾಲು ಹೊಳೆಸಾಲು ಮಕ್ಕಸಾಲುಗಳ
ನೂರು ಮುದಿಕಟ್ಟುವ ಮಾಡುಮನೆ
ಮೂರಂಕಣ ಹೀರೊ. ಜಿರಕಿ ಜೋಡಮುಚ್ಚ
ಕೇರಿಗೊಬ್ಬಳಂತೆ ಇಟ್ಟುಕೊಂಡು ಅಂಡಲೆಯುವ
ಉರಿಮೀಸೆ ಪಟೇಲನೆ, ಬೆವತು ಕೂರುವ
ತಲುಕು ಬಳುಕು ಮಾತಿಂವಲೆ

ಗೌಡಗಿತ್ತಿಯರ ಗೆಣೆಕಾರನಾಗಿರುವ
ನುಣ್ಣುಮೀಸೆಯ ಕಚ್ಚೆಹರುಕ ಶ್ಯಾನುಭೋಗನೆ
ಕುಳುವಾಡಿ. ಅಪ್ಪನಾಡುವ
ತುಂಬುತೂಕದ ನ್ಯಾಯದ ಮುಂದೆ
ಉಸುರು ಕಟ್ಟುವ ಪರಿಯ ಕಂಡು ಬೆಕ್ಕಸ
ಬೆರಗಾಗಿರುವೆ.


ಸುತ್ತಳ್ಳಿಗೂ ಹಬ್ಬದ ಅಪ್ಪನ ಈ ಖ್ಯಾತಿ
ಹತ್ತಿಸುತಿತ್ತು, ನ್ಯಾಯಗಾರನಾಗಿ
ವಿಳೂರ ಪಂಚಾಯ್ತಿ ನ್ಯಾಯಕಟ್ಟೆಗೆ
ಕನಸು ಮನಸ್ಸಿನಲ್ಲಿಯೂ
ಯಾರಿಗೂ ಎರಡು ಬಗೆಯದ
ಕನ್ನಡಕವೂ ಇಲ್ಲದ
ಊರುಗೋಲು ಇಲ್ಲದ
ಬಿ. ಪಿ. ಡಯಾಬಿಟಿಸ್ಸೂ ಇಲ್ಲದ
ದಿನಕ್ಕೆರಡು ಬುದೀನ್ ಬೀಡಿಯ ಭೂಪ
ಬರಿಗಾಲ ಸಂತನಿಗೆ ಶತಕಸಂಭ್ರಮ

• ಡಾ. ಎಂ.ಎಸ್.ಶೇಖರ್




ನೋಡೋಕೆ ನಾಯಿ ತರವೇ ಬಣ್ಣ. ಆದರೆ ಅದರ ಬಾಲ ದಪ್ಪವಾದ ಕೂದಲಿನಿಂದ ಕೂಡಿದ್ದು ಕುಚ್ಚಿನಂತೆ ಇರುತ್ತೆ. ಸಾಮಾನ್ಯವಾಗಿ ಪ್ರಾಣಿಗಳು ನೀರಿಗೆ ಬರುವ ದಾರಿಯನ್ನು ಕಾಯ್ದುಕೊಂಡು ಹೊಳೆ-ಹಳ್ಳಗಳ ದಡದ ಮರಳುಗುಡ್ಡೆಯಲ್ಲಿ ಮಲಗಿರುತ್ತವೆ. ಬೇಟೆ ಪ್ರಾಣಿ ಕಂಡ ಕೂಡಲೇ ಬಾಲವನ್ನು ನೀರಲ್ಲಿ ನೆನೆಸಿ ಆನಂತರ ಅದನ್ನು ಮರಳಲ್ಲಿ ಹೊರಳಾಡಿಸಿ ಬೇಟೆ ಪ್ರಾಣಿಯನ್ನು ಓಡಿಸುತ್ತಾ ಅವುಗಳ ಕಣ್ಣಿಗೆ ಬಾಲವನ್ನು ಬೀಸುತ್ತವೆ. ಕಣ್ಣಿಗೆ ಮರಳು, ಮಣ್ಣು ತಾಗಿ ಮೊದಲೇ ಕಂಗಾಲಾದ ಪ್ರಾಣಿಗೆ ಕಣ್ಣುಕಾಣದಂತೆ ಮಾಡುತ್ತವೆ. ನೀರಿಲ್ಲದಿದ್ದರೆ ತಮ್ಮ ಬಾಲಕ್ಕೆ ಉಚ್ಚೆಹುಯಿದು ಒದ್ದೆ ಮಾಡಿಕೊಂಡು ಮರಳು ಹಾರಿಸಿ ಬೇಟೆಯಾಡುತ್ತವೆ.

ಮಂಗನ ಬ್ಯಾಟೆ



11



• ಕಲ್ಕುಳಿ ವಿಠ್ಠಲ ಹೆಗ್ಡೆ

ಸಿದ್ದ ಬರ್ತೀನಿ ಅಂತ ಹೇಳಿಹೋದವನು ಬರಲೇ ಇಲ್ಲ, ಹೊತ್ತು ಮೇಲೇರಿತು. ಮಂಗಗಳಿಗೆ ಬೋನು ಅಭ್ಯಾಸ ಅಗಲಿ ಅಂತ ಬೋನೊಳಗೊಂದಿಷ್ಟು, ಹೊರಗೊಂದಿಷ್ಟು ತರಕಾರಿ ಚೆಲ್ಲಿ ಬೋನು ಬಾಯಿ ತೆರೆದಿಟ್ಟು, ಸಣ್ಣ ತಂತಿಯನ್ನು ಮಠದ ಮಾನಸ್ತಂಭಕ್ಕೆ ಸುತ್ತಿ "ನಂಗೊಂಚೂರು ಅರ್ಜೆಂಟ್ ಕೆಲಸ ಇದೆ, ಮಂಗನ್ನ ನೋಡ್ತಾ ಇರಿ" ಅಂತ ಹೇಳಿ ಗಡಿಬಿಡಿಯಲ್ಲಿ ಹೊರಟಿದ್ದ ಸಿದ್ದ ಮಠದ ಮುಂದಿನ ಬಾಗಿಲಲ್ಲಿ ಹೋದರೆ ಪೇಪರ್‌ನವರು, ಜನ ನೋಡ್ತಾರೆ ಅಂತ ಹೊಳೆಬದಿಯ ಕಳ್ಳದಾರಿಯಲ್ಲೇ ಮಿಲ್ಟ್ರಿ ಹೋಟೆಲ್ ತಲುಪಿದ್ದ.

ಬೋನಿನ ಹೊರಗೆ ಬಿದ್ದ ತರಕಾರಿಯನ್ನು ಹೆರಕಿ ಹೆರಕಿ ತಿಂದ ಮಂಗಗಳು ಬೋನೊಳಗಿನ ತರಕಾರಿ ಕಡೆ ಮೊದಮೊದಲು ಕಣ್ಣೆತ್ತಿ ನೋಡಲಿಲ್ಲ, ಹೊರಗಿನದ್ದು ಖಾಲಿಯಾದ ಮೇಲೆ ಒಳಗಡೆ ಹೋಗಿ ಎಲ್ಲವೂ ಸೇರಿ ತಿನ್ನಬೇಕಿತ್ತು, ಆದರೆ ಮಂಗಗಳು ಬುದ್ಧಿವಂತ ಪ್ರಾಣಿಗಳು. ತಮ್ಮ ಸಮೂಹಕ್ಕಾಗಿ ಪ್ರಾಣತ್ಯಾಗ ಮಾಡುವ ಬುದ್ಧಿ ಅವುಗಳದು. ಬೋನೊಳಗೆ ಒಂದು ಮಂಗ ಮಾತ್ರ ಹೋಗಿ, ತರಕಾರಿ-ಬಾಳೆಹಣ್ಣುಗಳನ್ನು ಕಿತ್ತು ಹೊರಗಿದ್ದ ಮಂಗಗಳಿಗೆ ಸರಬರಾಜು ಮಾಡುತ್ತಿತ್ತು, ಹೀಗೆ ನಡೆಯುತ್ತಿರಬೇಕಾದರೆ ಗೋವಿಂದ ಮಂಗಗಳನ್ನ ಬೋನಲ್ಲಿ ಹಿಡಿಯುವುದು ಆಗದ ಕೆಲಸ ಅಂತ ಲೆಕ್ಕ ಹಾಕಿದ. ಇದು ಕಾಲಹರಣ ಎಂದುಕೊಂಡ ಆತ ಹೊರಡಲು ತಯಾರಾಗಬೇಕೆಂಬಷ್ಟರಲ್ಲಿ ಮೂರು ಮಂಗಗಳು ಬೋನೊಳಗೆ ಹೋದವು. ಅದನ್ನು ನೋಡುತ್ತಿದ್ದಂತೆ ಗೋವಿಂದನಿಗೆ ದುರಾಲೋಚನೆ ಹುಟ್ಟಿಕೊಂಡಿತ್ತು, ಸಿದ್ದನ ಅರ್ಜೆಂಟ್ ಕೆಲಸ ಯಾವುದು ಅಂತ ಗೋವಿಂದನಿಗೆ ಅರ್ಥ ಆಗಿತ್ತು, ಸಿದ್ದ ಸಾರಾಯಿ ಅಂಗಡಿಗೆ ಹೋದರೆ ಬಡಪೆಟ್ಟಿಗೆ ವಾಪಸಾಗುವ ಆಸಾಮಿಯಲ್ಲ ಎಂಬುದೂ ಗೊತ್ತಿತ್ತು,

ಅದಲ್ಲದೆ ಹುಲಿ ಹೊಡೆದ ಹಮ್ಮೀರ ಗೋವಿಂದ ಈಗ ಮಂಗ ಹಿಡಿಯೋ ಕಾರ್ಯಾಚರಣೆಯಲ್ಲಿ ಸಿದ್ದನ ಸಹಾಯಕನಾಗಬೇಕಾಯಿತು. "ನೀನು ಸಿದ್ದನ ಸಹಾಯಕ್ಕಿರು" ಅಂತ ವಡೇರು ಒತ್ತಿ ಹೇಳಿದ್ದು ಇವನ ಮರ್ಮಕ್ಕೆ ತಾಗಿತ್ತು, "ಅಲ್ಲಾ, ಸಿದ್ದ ಕೋವಿ ಶಿಕಾರಿಯಲ್ಲಿ ನನ್ನ ಸಹಾಯಕ, ಬಾ ಅಂದ್ರೆ ಬರ್‍ತಾನೆ, ಕೂತ್ಕೊ ಅಂದ್ರೆ ಕೂರುತ್ತಾನೆ. ಅವನೇನು ಜಾತಿವಂತನಾ? ಆಸ್ತಿವಂತನಾ? ಆಳಿಗೆ ಆಳಲ್ಲ, ಊರಿಗೆ ಒಡೆಯನಲ್ಲ, ಹಾಗಿದ್ದವನ ಸಹಾಯಕ್ಕಿರು ಅಂತ ಹೇಳಿದ್ರಲ್ಲ, ಬೋನೊಳಗೆ ಮಂಗನ್ನ ಹಾಕಕ್ಕೆ ಸಿದ್ದನೇ ಬೇಕಾ? ಬೋನಿಗೆಲ್ಲಾ ವ್ಯವಸ್ಥೆ ಮಾಡಿ ರಾಘವಾಚಾರಿ ಹತ್ರ ವ್ಯವಹಾರ ಕುದುರಿಸಿದವ ನಾನು..." ಹೀಗೆ ಗೋವಿಂದನ ಹೊಟ್ಟೆಕಿಚ್ಚಿಗೆ ಆವಪ ಮನುಸ್ಸಿನಲ್ಲೇ ಪ್ರೋತ್ಸಾಹ ಸಿಕ್ಕುತ್ತಾ ಹೋಯಿತು.

ಸಿದ್ದ ರಾಘವಾಚಾರಿ ಹತ್ರ ಮಾತಾಡುವಾಗ ಮಧ್ಯೆ ಬಾಯಿ ಹಾಕಿ "ಆಚಾರ್ರೆ, ಮಂಗ ಹಳೆಕಾಲದವು. ಒಂದು ಸಾರಿ ಒಳಹೋದವು ತಪ್ಪಿಸಿಕೊಂಡರೆ ಮತ್ತವನ್ನು ಬೋನಿಗೆ ಸೇರಿಸುವ ಮಾತಿಲ್ಲ, ಕೆಲಸ ಕೆಟ್ಟುಹೋಗ್ತದೆ. ನೀವು ನೋಡಿ ಜಬೂದಾರಿಯಿಂದ ಮಾಡಬೇಕು" ಅಂದಿದ್ದ ಗೋವಿಂದ.

ರಾಘವಾಚಾರಿ "ನೋಡ್ ಸಿದ್ದ ನನ್ನ ಕೆಲಸ ಏನು ಎತ್ತ ಅಂತ ನಿಂಗೊತ್ತು, ಆ ವಡೇರ ಕಥೆ ಬಿಡು, ದೊಡ್ಡವರಾದೊ ಸಣ್ಣ ಮಾತಿಗೆ ನಾನು ತಲೆಕೆಡಿಸಿಕೊಳ್ಳೋನಲ್ಲ, ಮಂಗ ಒಂದು ಸಾರಿ ಬೋನೊಳಗೆ ಹೋಗಲಿ ನೀನಿಲ್ದೆ ಅವು ಹ್ಯಾಂಗ್ ಹೊರ ಬತ್ತವೆ ನಾನ್ ನೋಡ್ತೀನಿ" ಅಂತ ವಿಶ್ವಾಸದಿಂದ ಮಾತಾಡಿ "ಸಾಯಂಕಾಲ ಬಂದೊಗು" ಅಂತ ಎಲೆಅಡಿಕೆ ಉಗಿಯುತ್ತ ಹೇಳಿದ್ದ ನೀನಲ್ದೆ ಮತ್ಯಾರಿಗೂ ಬೋನಿನ ಬಾಗಿಲು ತೆಗೆಯಲು ಸಾಧ್ಯ ಇಲ್ಲ ಅಂತ ಹೇಳಿದ್ದು ಗೋವಿಂದ ಗಮನಿಸಿರಲಿಲ್ಲ, ವಡೇರಿಗೂ ಆಚಾರಿಗೂ ಇದ್ದ ವೈಮನಸ್ಸಿನಿಂದ ಆಚಾರಿ ಜೊತೆ ಸಲುಗೆಯಿಂದ ವರ್ತಿಸುವುದು ಸರಿಯಲ್ಲ ಅಂತ ಮುಗುಮ್ಮಾಗೆ ಇದ್ದ.

ಮೂರು ಮಂಗಗಳು ಬೋನೊಳಗೆ ಹೋಗುತ್ತಿದ್ದಂತೆ ಇನ್ನೇನು ಎಲ್ಲಾ ಮಂಗಗಳು ಸರತಿಯಂತೆ ಹೋಗ್ತವೆ. ಒಳಹೋದವನ್ನು ಹಿಡಿದು, ಆದಷ್ಟು ಮಂಗಳನ್ನು ಹಿಡಿದರೆ ಅಮ್ಯಾಲೆ ಸಿದ್ದನನ್ನು ಯಾರು ಕೇಳ್ತಾರೆ? ಅಂತ ಸುಲಭಕ್ಕೆ ಲೆಕ್ಕಾಚಾರ ಹಾಕಿದ್ದ, ಇತ್ತಿತ್ತಲಾಗಿ ಗೋವಿಂದ ಯಾವ ಕೆಲಸಕ್ಕೆ ಹೋದರೂ ಏನಾರು ಅಡ್ಡಿ ಬರುತ್ತಿತ್ತು, ಮಂಗಗಳು ಒಳಗೆ ಹೋಗುತ್ತಿದ್ದಂತೆ ಸಣ್ಣ ತಂತಿ ಎಳೆದ; ಎದುರಿನ ಬಾಗಿಲು ದಢಾರ್ ಅಂತ ಮುಚ್ಚಿಕೊಳ್ತು, ಎರಡನೇ ತಂತಿ ಎಳೆದ, ಮಧ್ಯದ ಬಾಗಿಲು ತೆರೆಯಿತು. ಆ ತಂತಿಯನ್ನು ಮಾನಸ್ತಂಭಕ್ಕೆ ಸುತ್ತಿಟ್ಟು, ಕೋಲು ತಗಂಡು ಮಂಗಗಳನ್ನು ಹಿಂದಕ್ಕೆ ಓಡಿಸಿದ. ಎರಡು ಮಂಗಗಳು ಮೂಲೆಗೆ ಸರಿದವು. ಇನ್ನೇನು ಬಾಗಿಲು ಬಿಡಬೇಕು ಅನ್ನುವಷ್ಟರಲ್ಲಿ ಮರಿಮಂಗ ಚಂಗನೆ ಮುಂದಕ್ಕೆ ನೆಗೆಯಿತು. ಎರಡು ಮೂರು ಸಾರಿ ಮರಿಮಂಗನನ್ನು ಮೂಲೆಗೆ ಸೇರಿಸುವುದಕ್ಕೆ ನೋಡಿದ. ಅದು ಪ್ರತಿ ಸಾರಿ ಅದೇರೀತಿ ಮಾಡುತ್ತಿತ್ತು, ಇದರ ಮನೆ ಹಾಳಾಗ ಅಂತ ಎದುರಿನ ಬಾಗಿಲೆತ್ತಿ ಒಳಗೆ ಹೋಗಿ ಮರಿಮಂಗನನ್ನು ಓಡಿಸಿ ಮಧ್ಯದ ಬಾಗಿಲನ್ನು ಒಳಗಿನಿಂದಲೇ ಎಳೆದು ಬಂದ್ ಮಾಡಿದ. ಎದುರಿನ ಬಾಗಿಲು ದಢಾರ್ ಅಂತ ಮುಚ್ಚಿಕೊಂಡಿತು. ಗೋವಿಂದ ಅಚಾನಕ್ಕಾಗಿ ಬೇಟೆಗಾರನ ಬಲೆಗೆ ಸಿಕ್ಕಿದ ಪ್ರಾಣಿಯಂತಾಗಿದ್ದ, ಹರಸಾಹಸ ಮಾಡಿದರೂ ಬಿಡಿಸಿಕೊಳ್ಳಲು ಆಗಲೇ ಇಲ್ಲ, ಕಂಗಾಲಾದ, ಕೈಚೆಲ್ಲಿ ಕುಳಿತು ಸಿದ್ದನನ್ನು ಜೋರಾಗಿ ಕೂಗಿದ. ಎಲ್ಲಿ ಹಾಳಾಗಿ ಹೋದ್ನೊ ಕುಡುಕ ಮುಂಡೆಗಂಡ, ಆ ದಗಲ್ಬಾಜಿ ಆಚಾರಿ ಅದೆಂಥ ಬಾಗಿಲು ಮಾಡಿ ಸತ್ತಿದಾನೊ ಅಂತ ಸಿದ್ದಂಗೂ ಆಚಾರಿಗೂ ಮನಸಾರ ಶಾಪಹಾಕಿ ಬಾಗಿಲೆತ್ತಲು ಪ್ರಯತ್ನಿಸಿ ಸುಸ್ತಾದ.

ರಾಘವಾಚಾರಿ ಮನೆ ಬಾಗಿಲು, ಪೆಟ್ಟಿಗೆ ಮುಚ್ಚಳ ಏನೇ ಮಾಡಿದರೂ ಅದಕ್ಕೆ ತಾಳ ತಯಾರು ಮಾಡಿ ಅದಕ್ಕೊಂದು ಕಳ್ಳ ಚಿಲಕ ಇಡೋದು ಅವನ ಹವ್ಯಾಸ. ಅದು ಸಿದ್ದನಿಗೆ ಗೊತ್ತಿತ್ತು, ಗೋವಿಂದ ಅಂತಹ ಚಿಲ್ಲರೆ ವಿಷಯದ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ, ಚಿಲಕ ತೆಗೆಯದೆ ತಾಳ ಜಾರುತ್ತಿರಲಿಲ್ಲ, ಗೋವಿಂದ ತನ್ನ ಗತಿ ನಗಾಡುವವನ ಮುಂದೆ ಎಡವಿ ಬಿದ್ದಂಗಾಯಿತಲ್ಲ ಅಂತ ಯೋಚಿಸಿ, ಈಗೇನು ಮಾಡುವುದು ಅನ್ನುವಷ್ಟರಲ್ಲಿ ಕತ್ತಲಾಗೇ ಬಿಡ್ತು, ಸಿದ್ದಂಗೆ ಹೀನಾಮಾನ ಬೈಯುವುದು ಗೋವಿಂದನ ಚಾಳಿಯಾಗಿತ್ತು, ಸಿದ್ದನನ್ನು ತುಂಡುಗಂಬಳಿ ಅಂತ್ಲೆ ಆತ ಕರೆಯುತ್ತಿದ್ದುದು. "ಹಳೆಹೆಂಡ್ತಿ ಬಿಟ್ಟು ಹಕ್ಕಿಪಿಕ್ಕಿಯವಳನ್ನು ಕಟ್ಟಿಕೊಂಡು ತಿರುಗ್ತಾನೆ, ಕುಲಗೆಟ್ಟವ" ಅಂತೆಲ್ಲ ಹಂಗಿಸಿ "ವಡೇರ ಅತ್ರ ಹೇಳಿ ನಿನಗೊಂದು ಗತಿ ಕಾಣಿಸ್ತೀನಿ" ಅಂತಲೂ ಬೆದರಿಸಿದ್ದ. ಇದನ್ನು ಮನಸ್ಸಲ್ಲಿಟ್ಟುಕೊಂಡು ಸಿದ್ದ ಏನಾದರೂ ಮಾಡಿದಾನೆಂದು ಆತನಿಗೆ ಸಿದ್ದನ ಮೇಲೆ ಅನುಮಾನ ಬಂತು.

ಗೋವಿಂದ ಏನೇ ಬೈದರೂ, ಸಿದ್ದ ಗೋವಿಂದ ಅಂದ್ರೆ ಜೀವ ಬಿಡ್ತಿದ್ದ, ಮುಂಚೆ ಸಿದ್ದನ ಕಷ್ಟಕ್ಕೆಲ್ಲ ಅವ ಆತುಕೊಳ್ಳುತ್ತಿದ್ದನಂತೆ. ಹಾಗಾಗಿ ಸಿದ್ದನಿಗೆ ಗೋವಿಂದ ಗುರು ಸಮಾನ. ಆತನ ಬಗ್ಗೆ ಕನಸು ಮನಸಲ್ಲೂ ಕೇಡುಬಯಸಿದವನಲ್ಲ, ಸಿದ್ದ-ಗೋವಿಂದ ಕಾಡಿಗೆ ಶಿಕಾರಿ ಹೋಗುವುದನ್ನು ಕಂಡವರು 'ಚೋರ್ ಗುರು, ಚಂಡಾಲ ಶಿಷ್ಯ' ಅಂತ ತಮಾಷೆ ಮಾಡ್ತಿದ್ರು. ಇವರ ಜೋಡಿ ಕಾಡಿಗೆ ಹೋಯ್ತು ಅಂದ್ರೆ ಬರಿಗೈಲಿ ಬರ್‍ತಿರಲಿಲ್ಲ, ಅವರು ಹಂಗೇನಾದರೂ ಬರಬೇಕು ಅಂದ್ರೆ ಮದ್ದುಗುಂಡೊ, ಬ್ಯಾಟರಿ ಶೆಲ್ಲೊ ಖರ್ಚಾಗಬೇಕಷ್ಟೆ.

ಬಿಡುಗಡೆಯ ದಾರಿ ಕಾಣದೆ ಯಾರಾದರೂ ಬಂದು ಬೋನು ಬಾಗಿಲು ತೆಗೆದು ಬಿಡಿಸಿಕೊಳ್ಳಬಹುದು ಅಂತ ಕಾಯುತ್ತಾ ರಾತ್ರಿ ಕಳೆದರೆ ಬೆಳಗು ಬಂದೇ ಬರುತ್ತೆ ಅನ್ನುವ ಗಾದೆ ಮಾತು ಗೋವಿಂದನಿಗೆ ನೆನಪಾಯ್ತು, ನಿರಪರಾಧಿಯೊಬ್ಬ ಲಾಕಪ್‌ನಲ್ಲಿ ಹೊತ್ತುಕಳೆಯುವಂತೆ ಅವಮಾನ, ಹಿಂಸೆ, ನಾಳೆಯ ಚಿಂತೆ ಎಲ್ಲವೂ ಒಟ್ಟೊಟ್ಟಿಗೆ ಬಂ... ತಲೆ ಕಲಸುಮೇಲೋಗರವಾಯಿತು. ಕುಳಿತುಕೊಂಡೇ ರ... ಕಳೆಯೋಣ ಅಂದ್ರೆ ಬಂದವು ನೋಡಿ ಬಾಣದಂತೆ ಸೊ... ಸೊಳ್ಳೆಗಳು! ಎಲ್ಲಾ ಸಂಗೀತ ವಿದ್ವಾಂಸರೇ. ಅ... ಸೊಳ್ಳೆಗಳೋ, ಸೀಳ್ ನಾಯಿಗಳೋ! ಮಠದವರು ಅದೇ... ಗಲೀಜು ಮಾಡ್ತರೋ? ಸುಮ್ನೆ ರಕ್ತ ಕುಡುಕ್ಕೊಂ... ಸಾಯ್ಲಿ ಅಂದ್ರೆ ಸಂಗೀತ ಬೇರೆ ಕೇಡು. ಗೋವಿಂ... ಕೈಸಾರಿಸಿದ, ಬಡಿದುಕೊಂಡ. ಸೊಳ್ಳೆಗಳು ಕ್ಯಾರೇ ... ಇವು ನನ್ನ ಬೆಳಗಾಗೋವರೆಗೆ ಉಳಿಸ್ತಾವಾ? ಎಂ... ಚಿಂತಿಸಿದ.

ನಮ್ಮ ಕಾಡಲ್ಲಿ ಕೆಪ್ಪನ ಹಿಂಡು ಅಂತ ನಾಯಿ... ಇರೊ ಪ್ರಾಣಿಗಳಿವೆ. ಅವು ಕಾಡುನಾಯಿಗಳೇ. ನರಿಗಿ... ದೊಡ್ಡದಾಗಿ ಗುಂಪುಗುಂಪಾಗಿರುತ್ತವೆ. ಒಂದೊಂ... ಗುಂಪಲ್ಲಿ ಮೂವತ್ತು-ನಲ್ವತ್ತು ಇರೋದನ್ನ... ನೋಡಿದವರಿದ್ದಾರೆ. ಅವೇನು ಅಷ್ಟೊಂದು ಇರಬೇಕಾಗಿ... ಮೂರ್‍ನಾಲ್ಕು ಇದ್ರೂ ಸಾಕು ಕಡವೆ, ಕುರಿ, ಕಾಡ... ಹಿಡಿತಾವೆ. ಜೋರು ಅಂತಂದ್ರೆ ಹುಲಿಗಿಂತ ಜೋರು... ಹುಲಿ ಬೇಟೆ ಮಾಡಿ ಇಟ್ಟುಕೊಂಡ ಪ್ರಾಣಿಗಳ ದೇಹವ... ದಬಾಯಿಸಿ ಕಿತ್ತುಕೊಳ್ತವೆ. ಹುಲೀನ ಹೆದರಿಸಿ ಮರಹತ್ತುಸ್ತ... ಹುಲಿನಾದ್ರು ಯಾವುದಾದರೂ ಪ್ರಾಣಿಯನ್ನು ಬೇಟೆಯಾ... ದರೆ ಮೊದಲು ಕುತ್ತಿಗೆ ಕಚ್ಚಿ ಸಾಯಿಸಿ, ನಂತರ ... ಕುಡಿದು ಹಸಿವಾದಂತೆಲ್ಲಾ ತಿನ್ನುತ್ತವೆ. ಇವು ಹಾಗ... ಇವಕ್ಕೆ ಹಸಿವಾದರೆ ಕಣ್ಣಿಗೆ ಬಿದ್ದ ಕಡವೆ, ಜಿಂಕೆ, ಕ... ಇತ್ಯಾದಿ ಪ್ರಾಣಿಗಳನ್ನು ಓಡಿಸಿ ಓಡಿಸುತ್ತಲೇ ಕಿತ್ತು ತಿನ್ನುತ್ತ... ಬೇಟೆಯಾಡಿದ ಪ್ರಾಣಿಯ ಜೀವ ಹೋಗುವುದ... ಮುಂಚೆಯೇ ಅರ್ಧ ಇವುಗಳ ಹೊಟ್ಟೆ ಸೇರಿರುತ್ತದೆ.

ನೋಡೋಕೆ ನಾಯಿ ತರವೇ ಬಣ್ಣ, ಆದರೆ ಅದ... ಬಾಲ ದಪ್ಪವಾದ ಕೂದಲಿನಿಂದ ಕೂಡಿದ್ದು ಕುಚ್ಚಿನಂ... ಇರುತ್ತೆ, ಸಾಮಾನ್ಯವಾಗಿ ಪ್ರಾಣಿಗಳು ನೀರಿಗೆ ಬರು... ದಾರಿಯನ್ನು ಕಾಯ್ದುಕೊಂಡು ಹೊಳೆ-ಹಳ್ಳಗಳ ದಡದ ಮರಳುಗುಡ್ಡೆಯಲ್ಲಿ ಮಲಗಿರುತ್ತವೆ. ಬೇಟೆ ಪ್ರಾಣಿ ಕಂಡ ಕೂಡಲೇ ಬಾಲವನ್ನು ನೀರಲ್ಲಿ ನೆನೆಸಿ ಆನಂತರ ಅದನ್ನು ಮರಳಲ್ಲಿ ಹೊರಳಾಡಿಸಿ ಬೇಟೆ ಪ್ರಾಣಿಯನ್ನು ಓಡಿಸುತ್ತಾ ಅವುಗಳ ಕಣ್ಣಿಗೆ ಬಾಲವನ್ನು ಬೀಸುತ್ತವೆ. ಕಣ್ಣಿಗೆ ಮರಳು, ಮಣ್ಣು ತಾಗಿ ಮೊದಲೇ ಕಂಗಾಲಾದ ಪ್ರಾಣಿಗೆ ಕಣ್ಣುಕಾಣದಂತೆ ಮಾಡುತ್ತವೆ. ನೀರಿಲ್ಲದಿದ್ದರೆ ತಮ್ಮ ಬಾಲಕ್ಕೆ ಉಚ್ಚೆಹುಯಿದು ಒದ್ದೆ ಮಾಡಿಕೊಂಡು ಮರಳು ಹಾರಿಸಿ ಬೇಟೆಯಾಡುತ್ತವೆ.

ಕಾಡಿನಲ್ಲಿರುವ ಯಾವುದೇ ಪ್ರಾಣಿ ಹುಲಿ ಹಾಗೂ ಮನುಷ್ಯರನ್ನು ಕಂಡ... ಜಾಗ ಖಾಲಿ ಮಾಡುತ್ತವೆ. ಹುಲಿಯನ್ನು ರಾಷ್ಟ್ರೀಯ ಪ್ರಾಣಿ ಅಂತ ಅದ್ಯಾರು ಮಾಡಿದರೊ ಗೊತ್ತಿಲ್ಲ, ಹುಲಿ ಎಲ್ಲಾ ಕಾಡಲ್ಲೂ ಇರಲ್ಲ, ಅವಕ್ಕೆ ಸುಲಭಕ್ಕೆ ಶಿಕಾರಿ ಆಗಬೇಕು. ಸೀಳು ನಾಯಿ ಇದ್ದಲ್ಲಿ ಹುಲಿಗೆ ಉಪವಾಸ. ಹುಲಿಗಳನ್ನು ಚಿರತೆಗಳೂ ಹೆದರಿಸುತ್ತದೆ. ಆದರೆ ಈ ಸೀಳು ನಾಯಿಗಳು ಚಿರತೆಯನ್ನೂ ಓಡಿಸುತ್ತವೆ.

ಸಾಮಾನ್ಯವಾಗಿ ಸೀಳುನಾಯಿಗಳು ಮನು... ನಿಗೆ ಎದುರಾಗುವುದಿಲ್ಲ, ಒಂದು ವೇಳೆ ಎದು... ರಾದರೆ ಬೊಬ್ಬೆ ಹೊಡೆದರೂ, ಬಡಿಗೇ... ಬಡಿದರೂ ಅತ್ತ ತಿರುಗಿಯೂ ನೋಡುವುದಿಲ್ಲ, ಪ್ರಕೃತಿಯನ್ನ... ಜಯಿಸಿ, ಸಕಲ ಚರಾಚರಗಳಿಗೂ ಅಧಿಪತಿಯಾದ ಮನುಷ್ಯ... ರನ್ನೇ ಗಮನಿಸದೆ ಇರುವುದರಿಂದ ಅವಕ್ಕೆ ಕಿವಿ ಕೇಳುವುದಿ... ಅಂದುಕೊಂಡು ಕೆಪ್ಪ ಅಂತ, ಹಿಂಡುಹಿಂಡಾಗಿ ಇರುವ... ದರಿಂದ ಕೆಪ್ಪನ ಹಿಂಡು ಅಂತ ಹೆಸರು ಬಂದಿರಬಹುದು.

ಇವುಗಳ ವಿಶೇಷವೇನೆಂದರೆ ಯಾರ ವಿರೋಧವನ್ನೂ... ಲೆಕ್ಕಿಸದೆ ಬಿಜೆಪಿ ಸರ್ಕಾರದ ಥರ ಬೇಟೆಯನ್ನು ಜೀವಂ... ತಿನ್ನುವುದು. ಹೊಟ್ಟೆ ತುಂಬಿದ ಮೇಲೆ ಯಥಾಪ್ರಕಾ... ಹೊಳೇಲಿ ನೀರು ಕುಡಿದು ಮರಳುದಡದಲ್ಲಿ ಸತ್ತಂ... ಬಿದ್ದುಕೊಳ್ಳುತ್ತವೆ. ಗೋವಿಂದ ಸ್ವತಃ ಸೀಳು ನಾಯಿಗಳ... ಕಂಡವನು. ಮಠದ ಸೊಳ್ಳೆಗಳ ದಾಳಿ ಸೀಳು ನಾಯಿಗಳನ್ನ... ನೆನಪಾಗಿಸಿದವು.

ಈ ಸಂದಿಗ್ಧಗಳ ನಡುವೆಯೂ ಇದ್ದಕ್ಕಿದ್ದಂತೆ ಸಿದ್ದ... ಮೇಲೆ ಪ್ರೀತಿಹುಟ್ಟಿ ಗೋವಿಂದನ ಕಣ್ಣಲ್ಲಿ ನೀರು ಬಂತು... "ಸಿದ್ದ ನೀನು ಎಷ್ಟಾದರೂ ಬುದ್ಧಿವಂತ. ನಿನಗೆ ದ್ರೋಹ... ಮಾಡೋಕೆ ಹೋಗಿ ನನಗೆ ಹೀಗಾಯ್ತು" ಅಂತ... ಆಂಜನೇಯನಿಗೆ ಮತ್ತೆ ಕೈ ಮುಗಿದ. ವಡೇರ ಮ... ದೇವಸ್ಥಾನದ ಅರ್ಚಕ ನರಸಿಂಹ ಭಟ್ಟರನ್ನು ತರ್ಕದ... ಸೋಲಿಸಿದ ಮೇಲೆ ಸಿದ್ದನ ಬಗ್ಗೆ ಗೋವಿಂದನಿಗೆ ವಿಶೇ... ಪ್ರೀತಿ ಉಂಟಾಗಿತ್ತು,

(ಮುಂದುವರೆಯಲಿದೆ)

...ೇಶ ಕಟ್ಟಬೇಕಾದರೆ ಸಾಬರ ದೇಹಕ್ಕೆ ಹಿಂದೂ ತಲೆ ಇರಬೇಕಂತೆ

...ಯುಗಾದಿ ಹಬ್ಬ ವರುಷ ತೊಡಕನ್ನೆಲ್ಲಾ ಸಾಂಗವಾಗಿ ...ಿದ ಕಾಳಮಾವ ಸೀರ ಹೊಟ್ಟೆ ಕಿಡಿಸಿಕೊಂಡು ...ರ್ಯವಾಗಿ ಬಹಿರ್ದೆಸೆ ಕ್ರಿಯೆಗೆ ತುತ್ತಾಗಿ, ಸುಧಾರಿಸಿ ... ಕೂತಿದ್ದರು. ಆಗ ಕಾಳಮಾವ,

...ನಯಿಸಾದ ಮ್ಯಾಲೆ ಜಾಸ್ತಿ ಉಣ್ಣಕ್ಕೋಗಬಾರ್ದು ... ಎಂದ.

...ನಮ್ಮನಿಯೋಳು ವಬ್ಬಟ್ಟಿನ ಜ್ವತೆಗೆ ಬೊಂಡಾನೂ

...ಯ ಲು ಸೀ ಮೆ ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

...ನ್ನು, ಬೊಂಡಾಕೆ ಅದೇನಾಕಿದ್ದೊ ಏನೊ, ವಟ್ಟೆ ...ಟ್ಟು ತಾರಾಡಿಬುಟ್ಟೆ" ಎಂದ ಸೀರ.

...ವಬ್ಬಟ್ಟು, ಬೊಂಡಾ ಯಲ್ಲ ಕಡ್ಡೆ ಸಾಮಾನಲವೇನೊ ...? ಬ್ಯಾಸಗೆಲಿ ಅವುನ್ನಲ್ಲ ಜಾಸ್ತಿ ತಿನ್ನಬಾರ್ದು" ...ು ಜುಮ್ಮಿ.

...ಅದರಲ್ಲೂ ಯಣ್ಣೆ ಪದಾರ್ಥ ವಳ್ಳೆದಲ್ಲ" ಎಂದ ...ಾವ.

...ಾಡಿನೆಸರು ಮುದ್ದೆ ಬುಟ್ಟ ಮ್ಯಾಲಲ್ಲ" ಎಂದ

...ಹಬ್ಬಕ್ಕೆ ಅದ್ನೆ ಮಾಡಸಿವೆ. ವಬ್ಬಟ್ಟು ತಿಂದು ...ಪಡದಕಿಂತ ಅದೇ ಚನಾಗಿತ್ತಲವೆ" ಎಂದಳು ಜುಮ್ಮಿ.

...ಊರ್‍ನಲ್ಲ ಉಗಾದಿ ಮಾಡಿದ್ರೆ ಅಡ್ನಾಡಿ ಅಮಾಸೆ ...ತ್ತು ಅಂತ, ನಿನ್ನ ಮಾತ ಕೇಳಿ ಬಾಡ ತರದಿದ್ರೆ ...ೋಗದು ನಂದೆಯ."

...ನಾನ್ಯಾಕೋದತೊ ಸೀರಮಾವ? ನಮ್ಮ ಸುಳೇಕಾಗದ ...ಕಂಡು ತಿಂದವಿ ಅಂದ್ರಾಯ್ತು, ಉಗಾದಿಗೇನು ... ಕರಿಬೇಕೆ?"

...ನಂಟ್ರು ಬರದೆಯಿದ್ರು ನ್ಯರೆ ಹೊರಿಗೆ ಅಂಜಿಕಂಡು ...ೇಕು ಕಂಡ್ಯ."

...ಾಲ ಬದ್ಲಾದಂಗು ನಂಟ್ರು ಬರದೂ ನಿಂತೋಯ್ತಲ್ಲಾ ...ಗೇ?" ಎಂದ ಕಾಳಮಾವ.

...ಾಲ ಅಂಗೇ ಆದೆ ಕಣಮಾವ. ಪರಿಸ್ಥಿತಿಗೆ ಮನುಸರೇ ... ಬುಟ್ಟವರೆ. ಈಗ ನಂಟ್ರು ಬದ್ಲು ಸ್ನೇಯಿತ್ರ ...ೀಯ್ತರೆ. ಮುಂದೆ ಕಳ್ಳು ಸಮಂದನೂ ನಿಂತೋಗ ...ು" ಎಂದ ಉಗ್ರಿ.

...ಈಗ್ಲೆ ನಿಂತಿಲವೇನ್ಲ? ಅದ್ಯಾವಣ ತಮ್ಮ ಅಕ್ಕತಂಗಿರ ...ುಸ್ತಯಿದ್ದನು? ಅಪ್ಪ ಅವ್ವದಿರು ಇರಗುಂಟೈ ಅವುರ ...ಾ."

"ಸದ್ದಿಕೆ ಸಮಂಧ ಹುಡಿಕಂಡು ಬರನು ಅಂದ್ರೆ ಎಡೂರಪ್ಪನೆ ಏನೋ ಶಿಕಾರಿಪುರದಲ್ಲಿದ್ರು ಬೂಕನಕ್ಕರಿಗೆ ಬಂದು ಅಣ್ಣತಮ್ಮದೀರಿಗ್ಯಲ್ಲ ಆಸ್ತಿ ಮಾಡಿಕೊಡ್ತಾಯಿದ್ದನಂತೆ."

"ಏನು ಮಾಡಿದ್ರೂ ಅವುನ್ನ ಇಳಸಕ್ಯಾಗದಿಲವಂತಲ್ಲ ಯಾಕ್ಲ?" ಎಂದ ಕಾಳಮಾವ.

"ಇಳಸದಾದ್ರೆ ಅವುರ ಪಾರ್ಟಿಯೋರೆ ಇಳಸಬೇಕು ಕಣಮಾವ. ವರಿಗಿನ ಜನಗಳಿಂದ ಸಾಧ್ಯವಿಲ್ಲವಂತೆ."

"ಜಡಜಿಗಳಿಗ್ಯಲ್ಲ ಮನೆಕಟ್ಟಿಸಿಕೊಟ್ಟು ಅವುನ ಮ್ಯಾಗಲ ಕೇಸುಗಳೇ ನ್ಯಡಿದಂಗೆ ಮಾಡಿದ್ದನಂತೆ?" ಎಂದು ಸೀರ ಅಚ್ಚರಿಯ ಕಣ್ಣುಬಿಟ್ಟ.

"ಯಾರೋ ಸೀರಮಾವ ಹೇಳಿದೋರು ನಿಂಗೆ?"

"ಊರು ಮುಂದೆ ಮಾತಾಡ್ತಯಿದ್ರು ಕಂಡ್ಯ. ದ್ಯಾವೇಗೌಡ, ಅವುನ ಮಕ್ಕಳು, ಲಾಯರುಗಳು ಯಲ್ಲ ಸೇರಿ ಎಡೂರಪ್ಪನ ಮ್ಯಾಲೆ ಕೇಸು ಮಾಡಿದ್ರು. ಆ ಕೇಸುಗಳೇ ನ್ಯಡಿದಂಗೆ ಜಡಜಿಗಳು ಆದ್ರು ಮಾಡಿದ್ದರಂತೆ. ಇದ್ಯಾಕಿಂಗಾ ಯ್ತಲ್ಲಾ ಅಂತ ನೋಡಿದ್ರೆ ಎಡೂರಪ್ಪ ಜಡಜಿಗಳಿಗ್ಯಲ್ಲ ಮನೆ ಕಟ್ಟ ಕೊಡ್ತಾಯಿದ್ದನಂತೆ. ಅಂಗಾದ್ರೆ ಇನ್ನೆಲ್ಲಿ ಕೇಸು ನ್ಯಡದವ್ವೂ?"

"ಥೂ, ಥೂ, ಅದಕು ಇದುಕು ಸಮಂದಿಲ್ಲ ಕಣೊ. ಜಡಜಿಗಳಿಗೆ ಕ್ವಾಟ್ರಸ್ ಕಟ್ಟದಕ್ಯೂ, ಎಡೂರಪ್ಪನ ಕೇಸಿಗೂ ಸಮಂದಿಲ್ಲ, ಎಡೂರಪ್ಪನ ಮ್ಯಾಗಲ ಕೇಸಿಗೆ ತಾತ್ಕಾಲಿಕ ತಡೆ ಸಿಕ್ಕದಂತೆ, ಅಂದ್ರೆ ಸ್ಟೇ ಕೊಟ್ಟವುರೆ."

"ಟೇ ಸುಮಸುಮ್ಮನೆ ಕೊಟ್ಟರೆ?"

"ಕಾನೂನಲ್ಲಿ ಅವುಕಾಸ ಇದ್ರೆ ಕೊಡ್ತರೆ. ಸುಮ್ಮಸುಮ್ಮನೆ ಸ್ಟೇಕೊಟ್ಟರೆ?"

"ಇಲ್ಲಿ ಕುಂತಿರೊ ನೀವ್ಯಾರು ಎದ್ದೊಗದಂಗೆ ಸ್ಟೇ ತರ್ಲ" ಎಂದುಕೊಂಡು ವಾಟಿಸ್ನೆ ಬಂದ.

"ತಗಂಬಾರ್ಲ ನೋಡನ" ಎಂದಳು ಜುಮ್ಮಿ.

"ನೋಡಕ್ಕ, ನಮ್ಮ ಕಾನೂನಿನ ಗೋಜಲದಲ್ಲಾ ಅದು ಒಂತರಾ ಬಲೆಗಾಕಿದ್ದಂಗೆ. ಅದ ಬಿಡಿಸಿದೋನು ಸ್ಟೇ ಕೊಡುಸ್ತನೆ. ಸಿಗಾಯ್ಕಂಡಿರೋನು ಅಲ್ಲೇ ಇದ್ದು ವದ್ದಾಡ್ತನೆ. ಸದ್ದಿಕೆ ಎಡೂರಪ್ಪನ ವಿರುದ್ಧ ಕೋರ್ಟ್ ಮುಖಾಂತರ ಹೋರಾಡೋರಿಗೆ ಹಿನ್ನಡೆಯಾಗ್ಯದೆ. ಅಂದಮಾತ್ರಕೆ ಎಡೂರಪ್ಪ ತಪ್ಪಿಸಿಕೊಂಡವುನೆ ಅಂತ ಅಲ್ಲ, ಕುತ್ಗೆಲಿದ್ದ ಚಿಮುರಿಕೆ ಕಾಲಿಗೆ ಬಂದು ಬೇರಿಕಂಡದೆ ಅಷ್ಟೆಯ."

"ಅಂತೂ ಯಾರೂ ಅವುನ್ನ ಅಲ್ಲಾಡಸಕ್ಯಾಗದಿಲ್ಲ ಅನ್ನು" ಎಂದು ಕಾಳಮಾವ.

"ಅಲ್ಲಾಡಸಬವುದು ದ್ವಡಪ್ಪ ಅಂಗೆ ನೋಡಿದ್ರೆ ಅವುನು ಪವರ್‍ಗೆ ಬಂದಾಗ್ನಿಂದ ಅಲ್ಲಾಡುಸ್ತನೆ ಅವುರೆ. ಅವುನು ಬೇರು ಬುಟಗತ್ಲೇ ಅವುನೆ."

"ಬೇರಿನ ಬಡ್ಡಿಗೆ ನೀರು ಬುಡೋರು ಸರಿಯಾಗಿ ಬುಡಬೇಕಾಗಿತ್ತು ಕಣೊ."

"ಮಿಸ್ಟರ್ ಉಗ್ರಿ, ಏನೇ ಬುಟ್ರು ನೆಟ್ಟರೋರು ಜುಟ್ಟಿಡ ಕಂಡು ರಕ್ಷಣೆ ಕೊಟ್ರೆ ಏನು ಮಾಡಕ್ಯಾಯ್ತದೊ? ಎಡೂರಪ್ಪ ಕೇಂದ್ರದಲ್ಲಿರೋರು, ರಾಜ್ಯದಲ್ಲಿರೋರು ಯಲ್ಲಾರ್‍ನು ಕೊಂಡಾಕಿದ್ದನಂತೆ. ಇದ್ದಷ್ಟು ದಿನ ಇರ್ಲಿ ಬುಡು. ನಮ್ಮ ಸಾಯಿ ಬಾಬುನ ಸುದ್ದಿ ಎಲ್ಲಗಂಟ ಬತ್ತು ಹೇಳು?"

"ಅವುನೇನೊ ತೀರೇ ಹೋದ ಅಂತ ಟಿವಿಯೋರು ಬಡುಕೊಂಡ್ರು. ಇಲ್ಲ ಇನ್ನೂ ಉಸುರಾಡ್ತ ಅವುನೆ ಏನಾರ ಮಾಡಿ ಬದುಕಿಸಿಗೊಬೇಕು ಅಂತ ಭಕ್ತಾದಿಗಳು ಭಜನೆ ಮಾಡ್ತ ಅವುರೆ. ಇದೊಂತರ ದೇವರ ಉಳಿಸಿಗಳಕ್ಕೆ ಭಕ್ತರೆ ಪೂಜೆ ಮಾಡಿದಂಗಾಯ್ತಾ ಅದೆ."

"ಸಾಯಿಬಾಬ ತೀರ್ಕೋಯ್ತಾ ಅವುರೆ ಅಂತ ಯಾರು ಅಳದು ಬೇಕಾಗಿಲ್ಲ ಕಣೊ. ಇದೇ ನಮ್ಮ ಮಂಡ್ಯಾ



ಜಿಲ್ಲೇಲಿ ಆದೂ ಮದ್ದೂರು ಹುಟ್ಟಿ ಬತ್ತನಂತೆ. ಆದಷ್ಟು ಬೇಗ ತೀರಿಕೊಂಡು ಕಾಣಿಸಿಗಳದು ವಳ್ಳೆದಪ್ಪ."

"ನೀನೇಳೊ ಮಾತು ನಿಜವೇನ್ಲ?" ಎಂದಳು ಜುಮ್ಮಿ.

"ಸಾಯಿಬಾಬನಾಣೆ ಕಣಕ್ಕ. ಅವುರೆ ಅನವುನ್ಸ್ ಮಾಡ್ಯವುರೆ. ಮುಂದೆ ನಾನು ಯಂಗಿರತಿನಿ ಅನ್ನೊ ಫೋಟಾನೂ ಬಿಡುಗಡೆ ಮಾಡ್ಯವುರೆ. ನಾನು ನೋಡಿದ್ದಿನಿ."

"ಯಂಗಿದ್ದರ್ಲ?"

"ಯಂಗೆ ಅಂದ್ರೆ ಮನುಸುರ ತರನೇ ಅವುರೆ. ತಲೆ ಕಾರೆಮೆಳೆ ತರ ಇಲ್ಲಾ ಉಗ್ರಿ ತಲೆ ತರ ಆದೆ. ನೋಡಬೇಕು ಯಾರೊಟ್ಟೆಲಿ ಹುಟ್ಟತರೆ, ಯಂಗುಟ್ಟರೆ ಅಂತ."

"ಅಂತೂ ಮದ್ದೂರು ಕಡೆ ಹುಟ್ಟದವುಕೆ ಸಾಯಿಬಾಬನ ತಲೆ ಕೂದ್ಲಿದ್ರೆ ಅವೇ ಸಾಯಿ ಬಾಬ ಅಂತ ಪುರುಸ್ತರೆ."

"ಅದ್ಯಾಕಿಲ್ಲಿ ಬಂದು ಹುಟ್ಟತಾಯಿದ್ದರ್ಲ?"

"ಅದವುರಿಷ್ಟ ಕಣಕ್ಕ, ನೀನು, ನಾಗ್ಲಿ, ಚಲುವೆಗೌಡ್ರು ಮನೆಯ ಯಂಗೆ ಸೆಲೆಕ್ಟ್ ಮಾಡಿಕಂಡು ಹುಟ್ಟದೊ, ಅಂಗೆ ಅವುರ ಮದ್ದೂರ ಸೆಲೆಕ್ಟ್ ಮಾಡಿಕಂಡವುರೆ. ಮಹಾ ಪುರುಸುರು ಎಲ್ಲುಟ್ಟತರೆ ಅಂದ್ರೇ, ಯಾವ ಜಾಗ ಕೆಟ್ಟು ಕುಲಾಕರ್ಮದ್ದಿರತದೊ ಅಲ್ಲೇ ಹುಟ್ಟತರೆ. ಪರಿಗ್‌ಜಾಂಪಲ್ ಗಾಂಧಿ ಮಾತ್ಮ ಗುಜರಾತಲ್ಲುಟ್ಟಬೇಕಾದ್ರೆ, ಅಲ್ಲಿ ಅಸ್ಪೃಸ್ಯತೆ, ಜಾತಿಯತೆ ಮುಟ್ಟು ಮೈಲಿಗೆ ಜಾಸ್ತಿ ಮಾಡತಿದ್ರು. ಅಲ್ಲಿ ಜನಕೆ ಹರಿಜನರ ಕಂಡ್ರೆ ಆಯ್ತಿರಲಿಲ್ಲ, ಸಾಬ್ರು ಕಂಡ್ರೆ ಆಯ್ತಿರಲಿಲ್ಲ, ಅದ್ಕೆ ಗಾಂಧಿ ಅಲ್ಲುಟ್ಟ ಬಂದ್ರು."

"ಅಂಗರೆ ಗಾಂಧೀಜಿ ಹುಟ್ಟ ಬಂದ ಜಾಗ ಅಂಗಿತ್ತೇ?"

"ಊ ಮತ್ತೆ ಮೊನ್ನೆ ದಿನ ನಮ್ಮ ದೇಸದೋರು ಕ್ರಿಕೆಟ್ ಮ್ಯಾಚಲ್ಲಿ ಗೆದ್ದಾಗ ಒಂದು ದೃಸ್ಯ ನೋಡಿ ನನಿಗೆ ವಿವೇಕಾನಂದರು ಹೇಳಿದ್ದ ಮಾತು ಗೆಪ್ತಿಗೆ ಬತ್ತು ಕಣೊ ಉಗ್ರಿ."

"ವಿವೇಕಾನಂದರ ಮಾತ ನೀನ್ಯಾವಾಗ ಕೇಳಿಸಿಗಂಡಿದ್ದೆ?"

"ಅವುರು ಬರದಿರದ ಓದಿದ್ದೆ ಕಣೊ. ಅವುರೇನಂದವುರೆ ಗೊತ್ತೆ? ಇಂಡಿಯಾ ದೇಸ ಕಟ್ಟಬೇಕಾದ್ರೆ ಮುಸ್ಲಿಂ ದೇಹ, ಹಿಂದೂ ತಲೆ ಸೇರಿಕಂಡು ಕಟ್ಟಬೇಕಂತೆ. ಆಗ ದೇಶವ ಯಾರೂ ಅಲ್ಲಾಡಸಕ್ಯಾಗದಿಲ್ಲ, ಅಷ್ಟು ಬಲಿಷ್ಟವಾಗಿರತದಂತೆ. ಯಂತ ಮಾತೇಳ್ಯವುರೊ ಉಗ್ರಿ."

"ಚನಾಗೇಳ್ಯವುರೆ, ಆ ಮಾತು ನಿನಿಗೆ ಗೆಪ್ತಿಗೆ ಬಂದಿದ್ದು ಯಾಕೆ ಅಂತ?"

"ಭರತಮಾತೆ ಕಾಲಕ್ಯಳಗಲ ಶ್ರೀಲಂಕಾ ದೇಸದ ಕ್ರಿಕೆಟ್ ಪ್ಲೇಯರ್ಸ್ ನಮ್ಮೋರೆದ್ರಿಗೆ ಸೋತರಲ್ಲಾ ಆಗ ಸಚಿನ್ ತೆಂಡೂಲ್ಕರ್ ಸ್ಟೇಡಿಯಂ ಒಳಗಡೆಗೆ ಓಡಿಬಂದ. ಅವುನು ಬಂದೇಟಿಗೆ ಯೂಸುಫ್ ಪಠಾಣ್ ಅನ್ನೋನು ತೆಂಡ್ಯೂಲ್ಕರ್‍ನ್ನ ಕುರಿಮರಿ ಎತ್ತಿದಂಗೆ ಎತ್ತಿ ಹ್ಯಗಲಮ್ಯಾಲೆ ಕೂರಿಸಿಗಂಡು ಹ್ವಂಟ ಕಣೊ ಉಗ್ರಿ. ಆ ದೃಸ್ಯ ನೋಡಿದಾಗ, ನನಗೆ ವಿವೇಕಾನಂದರು ಹೇಳಿದ ಮಾತು ನೆನಪಿಗೆ ಬಂತು. ಆಗ ನನ್ನಂಥ ನಾನೆಯ ಯುವರಾಜ್, ಹರಿಭಜನ್ ಜೊತೆ ಅತ್ತುಬುಟ್ಟೆ ಕಣೊ ಉಗ್ರಿ."

"ಆಣ್ಣಾಗಿ ಯಣ್ಣೆ ಹಾಕಿದ್ದೇನೋ?"


"ಅದು ಸೆಕೆಂಡ್ರಿ ಕಣೊ. ಆದ್ರೆ ಯೂಸೂಫ್ ಪಠಾಣ್ ತೆಂಡೂಲ್ಕರ್‌ನ ಹೆಗಲ ಮೇಲೊತ್ಯಗಂಡು ತಿರುಗಿದಾಗ ನನಗೆ ವಿವೇಕಾನಂದರ ಮಾತು ಗೆಪ್ತಿಗೆ ಬತ್ತಲ್ಲ, ಆ ಮಾತನ್ನ ಮೋದಿ, ಅಧ್ವಾನಿಯಿಂದ ಹಿಡಿದು ಲೋಕಲ್ ಯಡ್ಡಿ ಈಶ್ವರಿಗಂಟ ಎಲ್ಲಾರಿಗೂ ಹೇಳ್ಕೊಡಬೇಕು. ಮುಂಡೇ ಮಕ್ಕಳಾ ಸಾಬರ ದ್ವೇಷ ಮಾಡಿದ್ರೆ ಅವರು ದೇಶನೇ ನಾಶ ಮಾಡ್ತರೆ. ಅದು ಬುಟ್ಟು ಅವರ ಶಕ್ತಿಯ ದೇಶ ಕಟ್ಟಕ್ಕೆ ಬಳಸಿಕೊಳ್ಳಿ ಅಂತವಾ."

"ಬಿಜೆಪಿಗಳು ವಿವೇಕಾನಂದರ ನಿನಗಿಂತ ಚೆನ್ನಾಗಿ ಓದಿಕೊಂಡವರೆ ಕಣೊ."

"ಆದ್ರೂ ಅರ್ಥವಾಗಿಲ್ಲ ನೋಡು" ಎಂದ ವಾಟಿಸ್ನೆ. ●

ನೀವಾಗಿ ಹೆಲ್ಮೆಟ್ ಬಳಸಿ

...ಈಗ ಹೆಲ್ಮೆಟ್ ಬಳಸುವುದನ್ನು ಜನರ ಇಷ್ಟಕ್ಕೇ ಬಿಟ್ಟಿರುವುದರಿಂದ ಹೇಳುತ್ತಿದ್ದೇನೆ- ಜನ ತುಂಬ ...ಕೆಗೇಡಿಗಳು. ನಾನು ಮೊನ್ನೆ ರಸ್ತೆಯಲ್ಲಿ ನಿಂತು ಮೋಟಾರ್ ಸೈಕಲ್, ಸ್ಕೂಟರ್ ಓಡಿಸುವ ಎಷ್ಟು ಜನ ...ಟ್ ಹಾಕಿದ್ದಾರೆ ಎಂದು ನೋಡಿದೆ. ಹತ್ತಕ್ಕೆ ಒಬ್ಬ ಮಾತ್ರ ಹಾಕಿದ್ದ, ಕ್ರಮೇಣ ಈ ಹತ್ತರಲ್ಲೊಬ್ಬ ಕೂಡ ...ವುದಿಲ್ಲ ಎಂಬುದು ನನಗೆ ಗೊತ್ತಿತ್ತು, ಆದರೆ ಈ ಹೆಲ್ಮೆಟ್ ಬಳಕೆ ಪ್ರಾಣಾಪಾಯದಿಂದ ಪಾರಾಗುವುದರಲ್ಲಿ ... ಮುಖ್ಯ ಎಂಬುದನ್ನು ನಿಮ್ಹಾನ್ಸ್, ಸಂಜಯಗಾಂಧಿ ಆಸ್ಪತ್ರೆಯ ವೈದ್ಯರು ಬಲ್ಲರು; ಹೃದಯವಿದ್ರಾವಕ ...ಾತಗಳನ್ನು ಬಲ್ಲ ಪೊಲೀಸರು ಹೆಲ್ಮೆಟ್‌ಗಳ ಉಪಯುಕ್ತತೆ ಬಲ್ಲರು. ಜನಕ್ಕೆ ಗೊತ್ತಾಗುವುದಿಲ್ಲ, ದಿನಕ್ಕೆ ... ಜನ ತಲೆಯೊಡೆದುಕೊಂಡರೆ ರಸ್ತೆಯಲ್ಲಿರುವವರಿಗೆ ಸುದ್ದಿಯಲ್ಲ, ಆಸ್ಪತ್ರೆಯಲ್ಲಿ ಅದು ನರಕ. ಡಾಕ್ಟರುಗಳಿಗೆ ...ು 'ಶಾಕ್'. ಇದನ್ನರಿತವರು ಇತ್ತ ಗಮನಕೊಡಬೇಕು. ಸರ್ಕಾರದವರು ಕಾನೂನು ಮಾಡಿ ಹೆಲ್ಮೆಟ್ ಹಾಕಿಸುವುದು ದೊಡ್ಡದಲ್ಲ, ಪೊಲೀಸರು ಇಂಥ ಕಾನೂನಿಗಾಗಿ ಕಾಯುತ್ತಿರುತ್ತಾರೆ. ಜನ ಜವಾಬ್ದಾರಿ ಅರಿತು ನಡೆಯಬೇಕು. ಹೆಲ್ಮೆಟ್ ಬಳಸಬೇಕು. ಹತ್ತರಲ್ಲಿ ಐದು ಸಂದರ್ಭಗಳಲ್ಲಿ ಹೆಲ್ಮೆಟ್ ತಲೆಯನ್ನು ರಕ್ಷಿಸಿ ಜೀವ ಉಳಿಸಿದರೂ ಒಳ್ಳೆಯದು; ಗೆಳೆಯರಿಗೆ, ಕುಟುಂಬದವರಿಗೆ ಸಹನಾಗರಿಕರಿಗೆ ಒಳ್ಳೆಯ ಸುದ್ದಿ.



ವೈದ್ಯರು, ಪೊಲೀಸರು, ನರ್ಸ್‌ಗಳು ಒತ್ತಾಯ ಮಾಡಿ ಹೆಲ್ಮೆಟ್ ಹೇರುವ ಮುನ್ನ ಜನರು ತಾವೇ ಅವನ್ನು ಬಳಸುವಂತಾಗಬೇಕು. ಯಾರೋ ಒಬ್ಬ ಬಳಸದಿರಬಹುದು; ಆತನ ದಾರಿ ಸರಿ ಇದ್ದು ಮನಸ್ಥಿತಿ ಚೆನ್ನಾಗಿದ್ದು ಅಪಘಾತ ಆಗದಿರಲಿ. ಎಲ್ಲರೂ ಹಾಗಿರುವುದಿಲ್ಲ, ಬೆಂಗಳೂರಿನ ರಸ್ತೆಗಳಂತೂ ನರಕದಂತಿದೆ. ಹೆಲ್ಮೆಟ್ ಬಳಸಿ.

...ಲ್ಮೆಟ್ ಸಂಕೋಚದ ಒಳ್ಳೆಯವರಿಗೆ ಅನುಕೂಲ. ಇಷ್ಟವಿಲ್ಲದವರು ಸಿಕ್ಕರೆ ಹೆಲ್ಮೆಟ್ ನಮಗೆ ...ೇಷ ಒದಗಿಸುತ್ತದೆ; 'ನೀವು ರಮೇಶ್ ಅಲ್ವಾ?' ಎಂದು ಅನಗತ್ಯ ಪ್ರಶ್ನೆ ಕೇಳುತ್ತಿದ್ದಂತೆಯೇ ... ನಾನವನ ಅಲ್ಲ ಎಂದು ತಪ್ಪಿಸಿಕೊಳ್ಳಬಹುದು. ಅಲ್ಲದೆ ಹೆಲ್ಮೆಟ್ ನಿಮ್ಮನ್ನು ಅಸ್ಟ್ರೊನಾಟ್, ...್ ಇತ್ಯಾದಿಯಾಗಿ ಮಾಡಬಲ್ಲದು. ಹುಡುಗಿಯರ ಮೋಹಕ ಕೂದಲು, ಕಿವಿ ಮುಂತಾದವನ್ನು ... ಪಾಳು ಮಾಡಲೆತ್ನಿಸುತ್ತದೆ, ನಿಜ; ಬದುಕಿನ ಬೇರೆ ಹಿಂಸೆಗಳನ್ನು ನೆನೆದರೆ ಹೆಲ್ಮೆಟ್‌ನ ...ನ ಹೊಸ್ತೆ ಎಂದೇ ಹೇಳಬಹುದು. ಅಪಘಾತವಾಗಿ ಮೂರ್ಖ ವೈದ್ಯರೆದುರು ಅಸಹಾಯಕರಾಗಿ ...ನ ಬದಲು ಹೆಲ್ಮೆಟ್ ಹಾಕಿ ಸ್ಕೂಟರು, ಮೋಟೈಕ್ ಬಿಟ್ಟು ಮಿಂಚಿನಂತೆ ಸಂಚರಿಸುವುದು ...ದು.

ಸಂತೋಷಕೂಟದಲ್ಲಿ ಅಸಂತೋಷದ ಅಲೆ

ಮೊನ್ನೆ ಡಿಸೆಂಬರ್ 31 ರಂದು ಹೊಸ ವರ್ಷದ ಮುನ್ನಾದಿನ ಗೆಳೆಯರೊಂದಿಗೆ ಸಂತೋಷದಿಂದ ಒಂದೆರಡು ಗಂಟೆ ಕಳೆಯಲು ಮೈಸೂರಿಗೆ ಹೋದೆ. ಗೆಳೆಯ ರಾಮದಾಸ್ 'ಯಾರ್‍ಯಾರನ್ನು ಕರೆಯೋಣ?' ಅಂದಿದ್ದರು. 'ನಿಮ್ಮಿಬ್ಬರಿಗೆ ಪರಿಚಯ ಇರುವ ಒಳ್ಳೆಯವರನ್ನೆಲ್ಲ ಕರೆಯಿರಿ, ದೊಂಬಿಯಾಗುವಷ್ಟು ಜನ ಬೇಡ. ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸದಂತೆ ಕೂಗಾಡುವವರು ಬೇಡ' ಅಂದಿದ್ದೆ. ನಮ್ಮ ಇಷ್ಟಕ್ಕೆ ಸರಿಯಾಗಿ ಹತ್ತಿಪ್ಪತ್ತು ಜನ ಬಂದಿದ್ದರು. ವಯಸ್ಸಿನಲ್ಲಿ ಇಪ್ಪತ್ತರಿಂದ ಎಂಬತ್ತು ವಯಸ್ಸಿನವರೆಗೆ; ಹುಮ್ಮಸ್ಸಿನಲ್ಲಿ ಎಲ್ಲ ಎಳೆಯರು. ಕೆಲವರು ತೀರಾ ವಯಸ್ಸಾದವರು ಬಂದಿದ್ದರು. ಅಂಥವರೆಂದರೆ ನನಗೆ ಭಯ; ಮಾತಾಡುತ್ತಲೇ ಕುಸಿದುಬಿಡಬಹುದೆಂಬ ಆತಂಕ. ಅದೆಲ್ಲ ನಿರಾಧಾರವಾದ ಶಂಕೆ ಎಂಬುದನ್ನು ನೀವು ಬಲ್ಲಿರಿ. ಮನುಷ್ಯ ಅಷ್ಟು ಬೇಗ ಕುಸಿಯುವುದಿಲ್ಲ, ಈ ದೇಹ ಪಿಂಗಾಣಿ ಪಾತ್ರೆಯಂತಲ್ಲ; ಆದರೆ ಮನುಷ್ಯನ ಮನಸ್ಸು ಮಾತ್ರ ಜಟಿಲ. 'ಸರ್, ಹ್ಯಾಗಿದ್ದೀರೀ?' ಎಂದು ಒಬ್ಬ ನನ್ನನ್ನು ಕೇಳಿದ. ನಾನು ಹೇಳಿದೆ, "ಅದಕ್ಕೆ ನಿರೀಕ್ಷಿತ ಉತ್ತರ 'ಚೆನ್ನಾಗಿದ್ದೇನೆ', 'ಸುಖವಾಗಿದ್ದೇನೆ'. ಆದರೆ ನಿಜ ಹೇಳಬೇಕೆಂದರೆ ನಾನು ಅಷ್ಟು ನೆಮ್ಮದಿಯಾಗಿಲ್ಲ



ಆದನ್ನೆಲ್ಲ ಈಗ ಚರ್ಚಿಸುವುದು ಬೇಡ" ಅಂದೆ. ಆದರೆ ಅಷ್ಟರಲ್ಲಿ ವೈದ್ಯರೊಬ್ಬರು ತಮ್ಮ ಕಾಯಿಲೆಗಳ ಬಗ್ಗೆ ಹೇಳತೊಡಗಿದ್ದರು. ತಮ್ಮ ಹರ್ನಿಯಾ ಕೆರಳಿರುವುದು, ಮೂರು ನಾಲ್ಕು ಸಲ ಶಸ್ತ್ರಚಿಕಿತ್ಸೆಯಾಗಿರುವುದು, ಹಲ್ಲಿನ ನೋವು, ಕಣ್ಣು ಈಚೆಗೆ ಮಂಜಾಗಿರುವುದು... ಇದನ್ನೆಲ್ಲ ಮುಗಿಸಿದ ಈತ ತನ್ನ ಸೊಸೆಯ ಗರ್ಭಕೋಶದ ತೊಂದರೆಯವರೆಗೆ, ಇನ್ನೊಬ್ಬಳು ಅವಳಿಗೆ ಆಪರೇಷನ್ ಮಾಡಿದ ವೈದ್ಯ ನಿರ್ಲಕ್ಷ್ಯದಿಂದ ಹೊಲಿಗೆ ಸರಿಯಾಗಿ ಹಾಕದಿದ್ದುದು, ಮರಿಮಗಳ ಬಲಗಣ್ಣಿನ ಆಪರೇಷನ್ ಮಾಡಬೇಕಾಗಿದ್ದ ಡಾಕ್ಟರು ಎಡಗಣ್ಣಿನ ಆಪರೇಷನ್ ಮಾಡಿ ಈಗ ಆಕೆ ಪೂರ್ತಿ ಕುರುಡಿಯಾಗಿರುವುದು ಮುಂತಾದ್ದರ ಬಗ್ಗೆ ತಡೆರಹಿತವಾಗಿ ಕೊರೆಯತೊಡಗಿದರು. ಇದನ್ನು ನಿಜಕ್ಕೂ ಸಂತೋಷಕೂಟವನ್ನಾಗಿ ಹೇಗೆ ಪರಿವರ್ತಿಸುವುದು-ಮುಂತಾಗಿ ಯೋಚಿಸತೊಡಗಿದೆ. ಅಷ್ಟರಲ್ಲಿ ಎಂಟುಗಂಟೆ ಹೊಡೆದಿತ್ತು. ಎದ್ದು 'ಯಾರಾದ್ರೂ ಒಂದು ಒಳ್ಳೆಯ ಪ್ರೇಮಗೀತೆ ಹಾಡಿ' ಎಂದು ಹೇಳಬೇಕೆಂದಿದ್ದೆ. ಅಷ್ಟರಲ್ಲಿ ವೃದ್ಧರು ಎದ್ದು ಎಲ್ಲರಿಗೆ ನಮಸ್ಕರಿಸಿ ಹೊರಟರು. ಅಲ್ಲಿದ್ದವರು ಕಳೆದ ವರ್ಷದ ತಮ್ಮ ಅನುಭವ ಹೇಳಿಕೊಂಡು ಪುಳಕಿತರಾಗತೊಡಗಿದರು..... ಪ್ರೇಮಗೀತೆಯನ್ನು ಯಾರೂ ಶುರುಮಾಡಲಿಲ್ಲ, ಸದ್ಯ!

ಅವರನ್ನು ಹೇಗೆ ಸುಮ್ಮನಾಗಿಸುವುದು,

–ಮಾರ್ಚ್ 1, 1995



ಕ್ಯಾಶ್ ಕೊಡಂಗಿಲ್ಲ ಸಾರೂ

ವಿಶ್ವದ ಎಲ್ಲೆಡೆ ಕ್ರಿಕೆಟ್ ಜ್ವರ ಬಡಿದಿತ್ತಲ್ಲ ಅದು ಕೆಲವರ ಹತ್ತಿರಾನೂ ಸುಳಿದಿರಲಿಲ್ಲವಂತೆ. ಅಲ್ಲ ಕ್ರಿಕೆಟ್ ಅಂದರೆ ಭಾರತೀಯರ ಧರ್ಮ ಅಂತಾರೆ. ಕ್ರಿಕೆಟಿಗರು ದೇವರು ಅಂತಾರೆ. ಅಂತಹದ್ದರಲ್ಲಿ ಕ್ರಿಕೆಟ್ ಜ್ವರಾನೆ ಸುಳಿದಿಲ್ಲ ಅಂದರೆ ಅವರೆಲ್ಲೋ ನಾಸ್ತಿಕ ಮುಂದೇವು ಇರಬೇಕು. ಹಾಳಾಗ್ಲಿ, ಅವು ಪತ್ರಿಕೆ ಓದೋ, ಟಿವಿ ನೋಡೋ ಹವ್ಯಾಸಾನೂ ಬೆಳೆಸಿಕೊಂಡಿಲ್ಲ ಅಂತ ಕಾಣುತ್ತದೆ. ಟಿವಿ ಆ್ಯಂಕರ್‌ಗಳು ಮುಖಕ್ಕೆ ತಿರಂಗ ಬಳಿಸಿಕೊಂಡು, ಆಟ ಆಡಲಾರದ ಸ್ವಯಂಘೋಷಿತ ತಜ್ಞರನ್ನು ಎಲ್ಲೆಲ್ಲಿಂದಲೋ ಹೆಕ್ಕಿತೆಗೆದು ಅವರ ಬಾಯಿಂದ ಹಂಗಾಡಿದ್ರೆ ಹಿಂಗಾಯ್ತದೆ, ಹಿಂಗಾಡಿದ್ರೆ ಹಂಗಾಯ್ತದೆ ಅಂತೆಲ್ಲ ದಿನ ಎಲ್ಲ ಬಡಕೊಂಡಿದ್ದು ಕಿವೀನೆ ತಲುಪಿರಲಿಲ್ಲವೇನೋ... ಪತ್ರಿಕೆಗಳಂತೂ ತಮ್ಮನ್ನು ಕ್ರಿಕೆಟ್ ದೇವರುಗಳಿಗೆ ಸಮರ್ಪಿಸಿಕೊಂಡಿದ್ವೊ. ಪತ್ರಿಕಾಧರ್ಮ ಅಂತ ಒಂದು ಇದೆಯಲ್ಲ ಅಂತ ಸಂಪಾದಕೀಯದಲ್ಲಿ ಕ್ರಿಕೆಟ್ ಎಂಬ ಸಮೂಹ ಸನ್ನಿಯಿಂದ ಆಗುವ ಅನಾಹುತಗಳನ್ನು ಕುರಿತು ಬರೆಯೋ ಶಾಸ್ತ್ರ ಮಾಡಿದರೂ ಪತ್ರಿಕೆಯನ್ನು ಕ್ರಿಕೆಟ್‌ಮಯ ಮಾಡಿದ್ದರು. 'ಕಾರ್ಗಿಲ್ ಯುದ್ಧದ ಪುನರಾವರ್ತನೆ', 'ಲಂಕಾದಹನ' ಎಂಬ ರೋಚಕ ತಲೆಬರಹಗಳಿಂದ ಜ್ವರ ತಾರಕಕ್ಕೇರಲು ವೇಗವರ್ಧಕವಾಗಿ ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದವು. ಇಷ್ಟೆಲ್ಲ ನಡೀತಾ ಇದ್ದರೂ ಕ್ರಿಕೆಟ್ ಜ್ವರ ಕಾಡಲೇ ಇಲ್ಲ ಅಂದರೆ ಏನು ಹೇಳಾನ. 'ಹೋಗಲಪ್ಪ ಲತಾ ಮಂಗೇಶ್ಕರ್ ಆದ ಲತಾ ಮಂಗೇಶ್ಕರ್ ಅವರೇ ಭಾರತ ವಿಶ್ವಕಪ್ ಗೆಲ್ಲಲಿ ಅಂತ ಉಪವಾಸ ಇದ್ದರಲ್ಲ ಅದಾದರೂ ಗೊತ್ತಾ' ಅಂದರೆ 'ಭಾರತ ಗೆಲ್ಲುವುದಕ್ಕೂ ಈಯಮ್ಮ ಉಪವಾಸ ಮಾಡುವುದಕ್ಕೂ ಏನು ಸಂಬಂಧ' ಅಂತ ಕೇಳ್ತವೆ. 'ಹಂಗಾರೆ ಕ್ರಿಕೆಟ್ ಮ್ಯಾಚ್ ನೋಡ್ಲೇ ಇಲ್ವ. ಅಂತ ರೇಗಿದರೆ ಕೂಲಾಗಿ 'ನೋಡಿದೊ' ಅಂತಾವೆ. ಕ್ರಿಕೆಟ್ ಆಟ ಟಿವಿಲಿ ತೋರಿಸೋ ಬದಲು ಪ್ರೇಕ್ಷಕರ ಗ್ಯಾಲರೀನೆ ತೋರಿಸುತ್ತಾ ಇದ್ದರೆ ಬಲೇ ಪಸಂದಾಗಿರುತ್ತಿತ್ತು; ಆಧುನಿಕ ವೇಷಭೂಷಣಗಳಿಂದ ಅಲಂಕೃತರಾಗಿದ್ದ ದೋರಗಾಯಿಗಳು ಕುಣಿದು ಕುಪ್ಪಳಿಸೋದು ಕಣ್ಣಿಗೆ ಬಲೇ ಹಿತವಾಗಿರುತ್ತಿತ್ತು ಅಂತೆಲ್ಲ ಪೋಲಿಪೋಲಿ ಮಾತಾಡ್ತವೆ. ಅಂತ ಮಾತ ಬಿಸಾಕಿ ಅತ್ಲಾಗಿ. ಒಬ್ಬ ರೂಪದರ್ಶಿ ಭಾರತ ವಿಶ್ವಕಪ್ ಗೆದ್ದರೆ ತನ್ನ ದೇಹ ಸಿರೀನ ಧೋನಿ ಹುಡುಗರಿಗೆ ಹಂಚ್ತೀನಿ ಅಂದವ್ಳೆ. ಹೆಂಗಪ್ಪ ಮಾಡ್ತಾಳೆ ಅಂದ್ರೆ ಅವರ ಮುಂದೆ ಬೆತ್ತಲೆ ಆಗ್ತಾಳಂತೆ. ರಾಷ್ಟ್ರಪ್ರೇಮ ಅಂದರೆ ಇದಕ್ಕೆ ಅನ್ನಬೇಕು-ಬೆತ್ತಲೆ ರಾಷ್ಟ್ರಪ್ರೇಮ! ಅಂತೂಇಂತೂ ಭಾರತೀಯರು ವಿಶ್ವಕಪ್ ಒಡೆಯರಾದರು. ಇದು ಮುಖ್ಯ

ಇದು ಆಯಿತಲ್ಲ, ಗೆದ್ದ ಕ್ರಿಕೆಟ್ ದೇವರುಗಳ ದೇವಸ್ಥಾನ ಅಂತ ಪಾಳುಗುಡಿಗೆ ತಳ್ಳಿದರೆ ಬಿಡ್ತಾರಾ ಅಭಿಮಾನಿ ದೇವರುಗಳು, ತನಗೆ ಅತೀವ ಸಂತೋಷ ಆಗಿದೆ ಅನ್ನೋದನ್ನ ತೋರಿಸೋಕೆ ರಾಷ್ಟ್ರಾಭಿಮಾನಿಗಳೆ ಮಧ್ಯರಾತ್ರಿ ಮೆರವಣಿಗೇಲಿ ಸೋನಿಯಾ ಗಾಂಧಿ ತರಹ ಪಾಲ್ಗೊಂಡರೆ ಆಗೋಯ್ತಾ, ಹೂದ ಹೋಳೀನೆ ಹರಿಸಬೇಕು. ರಾಷ್ಟ್ರಪ್ರೇಮದ ಆಳತೆಗೋಲೇ ಅದು. ರಾಜ್ಯ ಸರ್ಕಾರಗಳು ಮೇಲೆ ಬಿದ್ದು ಹಣ ಸುರಿಯೋಕೆ ಮುಂದಾದ್ವೊ. ಕೊಡುಗೈದೊರೆ ಇದ್ದಾರಲ್ಲ ನಂ ಯಡ್ಯೂರಪ್ನೋರು ಯಾಕೋ ಏನೋ ಹಿಂದೇಟು ಹಾಕಿದರು. ಪಾಪ ಬೊಕ್ಕಸ ಬರಿದಾಗಿತ್ತೋ



ಏನೋ. ಯಾರಾದರೂ ಬುದ್ಧಿವಂತರು 'ಕ್ಯಾಶ್ ಕೊಡಂಗಿಲ್ಲ ಸಾರೂ, ಬರೀ ಚೆಕ್ ಕೊಟ್ಬರೆ ಸಾಕು' ಅನ್ನೋದನ್ನ ನೆನಪಿಗೆ ತಂದಿದ್ದರೆ, ನೆರೆ ಸಂತ್ರಸ್ತರಿಗೆ ಚೆಕ್ಕ ಕೆರೆದು ಕೆರೆದು ಬಿಸಾಕ್ದಂಗೆ ಇವರಿಗೂ ಬಿಸಾಕ್ತಿದ್ದರೋ ಏನೋ. ಅದು ಯಾಕೋ ಈ. ಪ್ರಕ್ರಿಯೆ ನಡೆಯಲಿಲ್ಲ, ಇರಲಿ.

ಆದರೂ ಮನಸ್ಸು ಅಂತ ಒಂದು ಇದೆಯಲ್ಲ, ಅದು ರಾಷ್ಟ್ರಭಕ್ತನ ಮನಸ್ಸಲ್ಲವೆ. ಅದು ತಡೀಲಿಲ್ಲ, ಪ್ರತಿ ಆಟಗಾರನಿಗೂ 50x80 ಅಳತೆಯ ಸೈಟನ್ನ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ನೀಡ್ತೀನಿ ಅಂತ ಹೇಳುವ ಹಾಗೆ ಮಾಡಿತು. ನೆಮ್ಮದಿ ಆಯ್ತು ಯಡ್ಯೂರಪ್ಪನವರ ಮನಸ್ಸಿಗೆ... ಖುಷಿ ಆದರು ಅಭಿಮಾನಿ ದೇವತೆಗಳು.

ಆಮೇಲೆ ಏನಾಯ್ತು ಅಂತೀರಿ.....

ವಿಶ್ವಕಪ್‌ನಲ್ಲಿ ಪ್ರತಿನಿಧಿಸಿದ್ದ ಧಾಂಡಿಗನೊಬ್ಬ ಬೆಂಗಳೂರಿನ ಗೆಳೆಯನನ್ನು ಕೇಳಿದನಂತೆ-'ದಿನ ಬೆಳಗಾದರೆ ಸೈಟು ಹಗರಣದ ಮಾತ ಕೇಳ್ತಿರ್ತೀನಿ. ಇನ್ನೂ ಸೈಟು ಉಳಿದಿದೆಯಾ' ಅಂತ. ಅದ್ಕೆ ಗೆಳೆಯ 'ಸೈಟೇನೋ ಇವೆ ಆದರೆ' ರಾಗ ಎಳದ್ನಂತೆ. 'ಯಾಕೋ ರಾಗ ಎಳೀತೀಯಾ' ಅಂದದ್ಕೆ, 'ಏನೂ ಇಲ್ಲ, ಸೈಟೂಂತ ಕೊಟ್ಬು ಆಮೇಲೆ ಅದನ್ನ ಡಿನೋಟಿಫೈ ಮಾಡಿದ್ರೆ......' ಅದೇ ರಾಗದಲ್ಲಿ ಹಾಡಿದನಂತೆ. ಕ್ರಿಕೆಟಿಗ ಇಂತಹದ್ದರಲ್ಲಿ ಅನುಭವಸ್ಥನಂತೆ. 'ಹಂಗೇನಾರ ನಿಮ್ಮ ಮುಖ್ಯಮಂತ್ರಿ ಮಾಡಿದ್ರೆ ಕೋರ್ಟಿಗೆಳೀತೀನಿ' ಅಂತ ಮೀಸೆ ಮೇಲೆ ಕೈ ಹಾಕಿದವನ ತರಹದ 'ಧ್ವನೀಲಿ ಹೇಳಿದ್ನಂತೆ' ಅದೆಲ್ಲ ನಡೆಯೋಕಿಲ್ಲ ಮರಿ. ನಮ್ಮೋರು ಅಂದ್ರೆ ಏನು ಅನ್ಕೊಂಡಿದೀಯ. ಸ್ಟೇ ಎಕ್ಸ್‌ಪರ್ಟು. ಮೇಲಿನ ಕೋರ್ಟಿನಿಂದ ಸ್ಟೇ ತರ್ತಾರೆ. ಆದ ವಿಕೆಟ್ ಮಾಡಿಸೋ ಅಷ್ಟರಲ್ಲಿ ನೀನೇ ಪ್ರಪಂಚದಿಂದ ವಿಕೆಟ್ ಆಗಿರ್ತೀಯ' ಅಂದನಂತೆ ಬೆಂಗಳೂರ ಗೆಳೆಯ!

ಅಲ್ಲ ಕಟ್ತೀನಿ ಕಟ್ತೀನಿ ಅಂತ ಇಂತ ಕಥೇನ ಕಟ್ಟೋರು....

ಪೋಲಿ ಪಟಾಲಂಗೇ ಮೀಸಲು

ಮಹಿಳೆಯರ ಬುದ್ಧಿ ಮೊಣಕಾಲ ಕೆಳಕ್ಕೆ ಅನ್ನೊ ಮಾತು ಲಾಗಾಯ್ತಿನಿಂದಲೂ ಚಲಾವಣೆಯಲ್ಲಿದೆ. ದೇಶಕ್ಕೆ ಸ್ವತಂತ್ರ ಬಂದು ಅರವತ್ತು ವರ್ಷಗಳೇ ಕಳೆದರೂ ಈ ಮನೋಭಾವ ಬದಲಾಗಿಲ್ಲ, ಕೇಂದ್ರ ಸಚಿವ ಸಂಪುಟದಲ್ಲಿ ಇದುವರೆವಿಗೂ ಸಂಪುಟ ದರ್ಜೆ ಸಚಿವೆಯರಾಗಿದ್ದು ಕೇವಲ ಹದಿನಾಲ್ಕು ಮಂದಿ. ಅದೂ ಅವರಿಗೆ ದಕ್ಕಿದ್ದು ಕೆಲಸಕ್ಕೆ ಬಾರದ ಖಾತೆಗಳು ಮಾತ್ರ. ಸುಸೂತ್ರವಾಗಿ ಮನೆ ನಿಭಾಯಿಸೋ ಮಹಿಳೆಗೆ ಇದುವರೆವಿಗೂ ಕೇಂದ್ರ ಹಣಕಾಸು ಸಚಿವೆ ಸ್ಥಾನ ದಕ್ಕಿಲ್ಲ ಅಂತ ಏನೇನೋ ಪುರಾಣ ಬರೊತಾ ಕುಂತವೆ ಪತ್ರಿಕೆಗಳು. ಮಾರ್ಚ್ ಎಂಟರ ಕಾವು ಇನ್ನೂ ಆರಿಲ್ಲ, ಸಂಪ್ರದಾಯದಂತೆ ಬರ‍್ಕತ್ತವೆ ಅಂತ ನಿರಾಳವಾಗಿ ಇರುವಂತೆಯೂ ಇಲ್ಲ, ಯಾಕೆ ಅಂದರೆ ರಾಜನ ಮಗ ರಾಜ ಆಗ್ತಿದ್ದಂಗೆ, ವಕೀಲನ ಮಗ ವಕೀಲ ಆಗೋಹಂಗೆ, ವೈದ್ಯನ ಸಂತಾನ ವೈದ್ಯ ಆಗೋ ರೀತೀಲಿ ರಾಜಕಾರಣಿಯ ಮಗ ರಾಜಕಾರಣಿ ಆಗ್ತಾನೆ ಅನ್ನೋದನ್ನ ಸಂಪ್ರದಾಯಪ್ರಿಯರೆಲ್ಲ ಒಪ್ತಾರೆ. ಅದೂಇದೂ ಗೀಚೋರ ಪ್ರಕಾರ ಇಲ್ಲೇ ಎಡವಟ್ಟಾಗಿದೆಯಂತೆ. ಅದೆಂದರೆ......

ವೈದ್ಯನ ಮಗ ವೈದ್ಯನಾಗ್ತಾನೆ.... ಮಗಳೂ ವೈದ್ಯೆಯಾಗ್ತಾಳೆ. ಆದರೆ ರಾಜಕಾರಣಿಗಳ ವಂಶದಲ್ಲಿ ಹೀಗೆ ಯಾಕಿಲ್ಲ ಅನ್ನುವುದು ಅವರ ಪ್ರಶ್ನೆ. ರಾಷ್ಟ್ರಮಟ್ಟದಲ್ಲಿ ನೋಡಿದ್ರೆ ಸೋನಿಯಾ ಗಾಂಧಿ ತಮ್ಮ ರಾಜಕೀಯ ಪ್ರತಿನಿಧಿಯಾಗಿ ರಾಹುಲ್ ಗಾಂಧಿನ ಎತ್ತಿ ತೋರಿಸಿದರೆ ಪರಂತು ಪ್ರಿಯಾಂಕ ಗಾಂಧಿಯನ್ನಲ್ಲ, ಜನರೊಡನೆ ಒಡನಾಟ, ಸಂವಹನ ಕೌಶಲ ಇವುಗಳಲ್ಲಿ ಮಗನೇ ಮೇಲು ಅನ್ನೋದು ಅವರ ವಾದ ಅಲ್ಲಿಂದ ಕೆಳಕ್ಕೆ ಇಳಿದು ಬಂದರೆ-ದೇವೇಗೌಡರು ರಾಜ್ಯದ ಮುಂದಿನ ಮುಖ್ಯಮಂತ್ರಿ ತಮ್ಮ ಪುತ್ರರತ್ನ ಅಂದರೇ ಹೊರತು ಹೆಣ್ಣುಮಕ್ಕಳ ಹೆಸರೆತ್ತಲಿಲ್ಲ, ಕುಟುಂಬ ರಾಜಕೀಯವನ್ನ ಹಿಗ್ಗಾಮುಗ್ಗಾ ಜಾಡಿಸುತ್ತಿದ್ದ ಯಡ್ಯೂರಪ್ಪನವರು ಸಂಸದನ್ನ ಮಾಡಿದ್ದೂ ತಮ್ಮ ಕುಮಾರ ಕಂಠೀರವ ರಾಘವೇಂದ್ರನ್ನೇ ಹೊರತು ತಮ್ಮ ಪುತ್ರಿಯರನ್ನಲ್ಲ ಹಿರಿಯ ರಾಜಕಾರಣಿ ಕರುಣಾನಿಧಿ ಉಪಮುಖ್ಯಮಂತ್ರಿ ಸ್ಥಾನ ದಯಪಾಲಿಸಿದ್ದು ಸ್ಟಾಲಿನ್‌ಗೇ ಪರಂತು ಕವಯಿತ್ರಿ ಕನಿಮೋಳಿಗಲ್ಲ, ಹೀಗೆ ಪುಂಖಾನುಪುಂಖವಾಗಿ ಉದಾಹರಣೆ ನೀಡುತ್ತ ಪ್ರಭಾವಿ ರಾಜ್ಯ



ಎಚ್.ಎಲ್. ಕೇಶವಮೂರ್ತಿ

ಅಣಕ

ರಾಜಕಾರಣಿಗಳೂ ಪುರುಷ ಪಕ್ಷಪಾತಿಗಳು ಎಂದು ಕಿಡಿ ಕಾರಿದ್ದಾರೆ.

'ಪುರುಷ ಪಕ್ಷಪಾತಿಗಳು' ಎಂಬ ಮಾತಿಗೆ ನಮ್ಮ ಆಕ್ಷೇಪ ಇದೆ. ರಾಜಕೀಯ ವಿದ್ಯಮಾನಗಳನ್ನು ಸಾವಧಾನವಾಗಿ ವಿಶ್ಲೇಷಿಸಿದರೆ ಈ ಎಲ್ಲ ಹಿರಿಯ ರಾಜಕಾರಣಿಗಳಿಗೂ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಮೇಲೆ ಅತೀವ ಪ್ರೀತಿ, ಮಮತೆ ಇರುವುದು ತಿಳಿಯುತ್ತೆ. ಈ ಕಾರಣಕ್ಕಾಗಿಯೇ ಅವರು ರಾಜಕೀಯದಿಂದ ದೂರ ಇರಿಸಲು ಬಯಸುತ್ತಿದ್ದಾರೆ.

ಯೋಚಿಸಿ ನೋಡಿ. ಇವತ್ತಿನ ರಾಜಕೀಯ ಎಂದರೆ ಹೊಲಸು, ಮೂರನ್ನೂ ಬಿಟ್ಟವರು ಮಾತ್ರ ಇಲ್ಲಿ ನಿಭಾಯಿಸಲು ಸಾಧ್ಯ ಎಂಬುದು ಸರ್ವರಿಗೂ ವೇದ್ಯವಾದ ಸಂಗತಿಯೇ ಆಗಿದೆ. ಅಪ್ಪ ಅಧಿಕಾರದಲ್ಲಿದ್ದಾನೆ ಅನ್ನುವ ಧಿಮಾಕಿನಲ್ಲಿ ಅಪಾಪೋಲಿಗಳ ರೀತಿ ಅಲೆಯುತ್ತಾ ಎಲ್ಲಾ ಕಲ್ಯಾಣಗುಣಗಳನ್ನು ಮೈಗೂಡಿಸಿಕೊಂಡಿರುವವರು ಯಾರು? ನಿಶ್ಚಯವಾಗಿಯೂ ಹೆಣ್ಣುಮಕ್ಕಳಲ್ಲ, ಅವು ಮರ್ಯಾದೆಗೆ ಅಂಜಿ ತಾನಾಯಿತು ತನ್ನ ಲೋಕವಾಯಿತು ಅನ್ನುವ ರೀತೀಲಿ ಬದುಕುತ್ತವೆ. ಅಪ್ಪನ ಅಧಿಕಾರದ ದುರುಪಯೋಗ ಇವರಿಂದ ಅಸಾಧ್ಯ, ಅದೇ ಗಂಡು ಮಕ್ಕಳಾದರೆ ಅಧಿಕಾರ ಇರುವುದೇ ದುರುಪಯೋಗ ಮಾಡಲು ಎಂದು ಲೋಕಾನುಭವದಿಂದ ಕಲಿತಿದ್ದು ಅದನ್ನು ಧಾರಾಳವಾಗಿ ಮಾಡುತ್ತಾರೆ. ಸಭ್ಯರು ರಾಜಕೀಯಕ್ಕೆ ಬರಬಾರದು ಎನ್ನುವ ಈ ದಿನಗಳಲ್ಲಿ ಯಾವ ತಂದೆ ತಾನೆ ತನ್ನ ಮಗಳನ್ನು ಇದಕ್ಕೆ ತಂದಾನು. ಇದಕ್ಕೇನಿದ್ದರೂ ಕೆಟ್ಟು ಕೆರಹಿಡಿದಿರುವ ಗಂಡುಮಕ್ಕಳೇ ಸೂಕ್ತ ಎಂಬುದಾಗಿ ಅವರನ್ನೇ ರಾಜಕೀಯದಲ್ಲಿ ಬೆಳೆಸುತ್ತಾನೆ!

ನಮ್ಮ ದೃಷ್ಟಿಯಲ್ಲಿ ಹಿರಿಯ ರಾಜಕಾರಣಿ ಸ್ತ್ರೀ ಪಕ್ಷಪಾತಿಯೇ ಪರಂತು ಪುರುಷ ಪಕ್ಷಪಾತಿ ಅಲ್ಲ! ●

ನಿಜಕ್ಕೂ ಪ್ರೋತ್ಸಾಹ ಅಗತ್ಯವಿರುವುದು ಕ್ರಿಕೆಟಿಗರಿಗಲ್ಲ

ಭ್ರಷ್ಟಾಚಾರ, ಬಡತನ, ಜಾತಿವಾದ, ಕೋಮುವಾದಗಳಿಂದ ನಲುಗಿರುವ ಭಾರತಕ್ಕೆ ಕ್ರಿಕೆಟ್ ವಿಶ್ವಕಪ್ ವಿಜಯ ಜುಟ್ಟಿಗೆ ಮಲ್ಲಿಗೆ ಹೂವು ಅನ್ನಬಹುದೇನೋ! ನಮ್ಮ ವೀರ ಯೋಧರು ಕಾರ್ಗಿಲ್‌ನಲ್ಲಿ ದೇಶಕ್ಕಾಗಿ ಹೋರಾಡಿ ಹುತಾತ್ಮರಾಗುತ್ತಿದ್ದಾಗ ಅಥವಾ ಮುಂಬೈ ಮೇಲೆ ಉಗ್ರರ ಭೀಕರ ದಾಳಿಯಾದಾಗ ಸಹ ಉಕ್ಕೇರದಿದ್ದ ನಮ್ಮ ಜನರ ಹಾಗೂ ಮಾಧ್ಯಮಗಳ 'ದೇಶಪ್ರೇಮ' ಕೇವಲ ಕ್ರಿಕೆಟ್ ಮ್ಯಾಚ್ ಸಮಯದಲ್ಲಿ ಉನ್ಮಾದವಾಗಿ ಹೊರಹೊಮ್ಮಿದ್ದು ವಿಪರ್ಯಾಸ. ಹಾಕಿ ಆಟದಲ್ಲಿ ನಾವು ವಿಶ್ವಕಪ್ ಗೆದ್ದಿದ್ದರೆ ಇಂತದ್ದೇ (ಹುಚ್ಚು) ದೇಶಪ್ರೇಮದ ಉನ್ಮಾದ ನಮ್ಮ ಜನರು ತೋರಿಸುತ್ತಿದ್ದರೆ?



ಇನ್ನು ನಮ್ಮ ಕರ್ನಾಟಕದ ಮುಖ್ಯಮಂತ್ರಿ ಗಳಿಗೆ ಕಳೆದ ಒಂದೂವರೆ ವರ್ಷದಿಂದ ಬಯಲಲ್ಲಿ ವಾಸಿಸುತ್ತಿದ್ದ ಉತ್ತರ ಕರ್ನಾಟಕದ ನೆರೆಪೀಡಿತರಿಗೆ ಮನೆ ಕಟ್ಟಿಸಿಕೊಡಬೇಕೆಂಬ ತುರ್ತು ಈಗಲೂ ಅರಿವಾಗಲಿಲ್ಲ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದು ಕರ್ನಾಟಕಕ್ಕೆ ಹೆಮ್ಮೆ ತಂದ ಬಡ ಅಶ್ವಿನಿ ಅಕ್ಕುಂಜಿ, ಮಮತಾ ಪೂಜಾರಿ, ಪ್ರಮೀಳಾ ಅಯ್ಯಪ್ಪ ಇವರಿಗೆ ಕರ್ನಾಟಕದ ರಾಜಧಾನಿಯಲ್ಲೊಂದು ಸಣ್ಣ ಸೈಟ್ ಕೊಡಬೇಕೆಂದೂ ಅನ್ನಿಸಲಿಲ್ಲ, ಆದರೆ ಹೊರ ರಾಜ್ಯದವರೇ ತುಂಬಿರುವ ವಿಶ್ವಕಪ್ ಕ್ರಿಕೆಟಿಗರಿಗೆ ಬೆಂಗಳೂರಿನಲ್ಲಿ 50x80 ಸೈಟ್ ಕೊಡುವುದಾಗಿ ಘೋಷಿಸಿ ತಾವೂ ಕ್ರಿಕೆಟ್ ಬೆಳಕಿನಲ್ಲಿ ಮಿಂಚಲು ಯಡಿಯೂರಪ್ಪ ಪ್ರಯತ್ನಿಸಿದ್ದು ಆಶ್ಚರ್ಯ. ಈ ಕ್ರಿಕೆಟ್ ಆಟಗಾರರಿಗೆ ಬಹುಮಾನ ಹಾಗೂ ಜಾಹೀರಾತು ಆದಾಯಗಳೇ ಕೋಟಿ-ಕೋಟಿಯಲ್ಲಿ ಬರುತ್ತಿರುವಾಗ ಒಬ್ಬನೇ ಒಬ್ಬ ಕನ್ನಡಿಗನೂ ಇರದಿದ್ದ ಇದೀ ಕ್ರಿಕೆಟ್ ಟೀಮಿಗೆ ಕನ್ನಡಿಗರ ರಾಜಧಾನಿ ಬೆಂಗಳೂರಿನಲ್ಲಿ ಇಷ್ಟೊಂದು ದೊಡ್ಡ-ದೊಡ್ಡ ಸೈಟುಗಳನ್ನು ಕೊಡುವ ಅಗತ್ಯವಿದೆಯೇ?

ನಿಜವಾಗಿ ಸೈಟು ಹಾಗೂ ಪ್ರೋತ್ಸಾಹಧನದ ಅಗತ್ಯವಿರುವುದು ಇತರ ಕ್ರೀಡೆಗಳಲ್ಲಿ, ತಮ್ಮ ಸ್ವಂತ ಶಕ್ತಿಯಿಂದ ಬೆಳಗುತ್ತಿರುವ ಬಡ ಆಟಗಾರರಿಗೇ ಹೊರತು ಇತರ ಎಲ್ಲಾ ಆಟಗಳನ್ನು ಕೊಲ್ಲುತ್ತಿರುವ ಈ ಕೋಟ್ಯಾಧೀಶರ ಆಟವಾದ ಕ್ರಿಕೆಟಿಗಲ್ಲ! ಈ ಜಗತ್ತಿನಲ್ಲಿ ಕೇವಲ ಒಂಬತ್ತು ದೇಶಗಳು ಕ್ರಿಕೆಟ್ ಆಡುತ್ತಿದ್ದು ಐಸಿಸಿಯ ಶೇ.80ರಷ್ಟು ಆದಾಯ ಕೇವಲ ಭಾರತ ಉಪಖಂಡದಿಂದಲೇ ಹುಟ್ಟುತ್ತಿದೆಯಂತೆ. ಕೇವಲ 9 ದೇಶಗಳು ಆಡುವ ಹಾಗೂ 170 ರಾಷ್ಟ್ರಗಳು ಮೂಸಿಯೂ ನೋಡದ ಈ ಕ್ರಿಕೆಟಿಗೆ 'ವಿಶ್ವ ಕಪ್' ಎಂಬ ಹೆಸರು ಸಮಂಜಸವೇ? ಹಾಗಾದರೆ ಇಷ್ಟೇ ದೇಶಗಳು ಆಡುವ ಕಬಡ್ಡಿ ಅಥವಾ ಕೊಕ್ಕೊ 'ವಿಶ್ವಕಪ್' ಸಹ ಭಾರತವೇ ಯಾಕೆ ಆಯೋಜಿಸಬಾರದು? ಈ ಆಟಗಳಲ್ಲಿ ಕ್ರಿಕೆಟಿನ ಜಾಹೀರಾತು ಆದಾಯದ ಶೇ.5 ಸಹ ಹುಟ್ಟಲಿಕ್ಕಿಲ್ಲ ಎಂಬ ಭಯವೇ? ಅಂದರೆ ಭರ್ಜರಿ ಆದಾಯವಿದ್ದಲ್ಲಿ ಮಾತ್ರ ನಮ್ಮವರಿಗೆ ದೇಶಪ್ರೇಮ, ದೇಶದ ಪ್ರತಿಷ್ಠೆಯ ಹಾಗೂ ಕ್ರೀಡಾಪ್ರೇಮ ಜಾಗೃತವಾಗುವುದು!


-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ವಿಶ್ವಕಪ್ ಕ್ರಿಕೆಟ್ ಎಂಬ ಜೂಜು ಅಂತೂ ಮುಗಿದಿದೆ. ಮೊದಲೇ ಎಲ್ಲಾ ಫಿಕ್ಸ್ ಆಗಿದ್ದಂತೆ ಎಲ್ಲವೂ ಸಾಂಗವಾಗಿ ಸಮಾಪ್ತಿಗೊಂಡಿದೆ. ಪಾಕಿಗಳಿಗೆ ಭಾರತದ ಮೇಲೆ ಗೆಲ್ಲುವುದಕ್ಕಿಂತಲೂ ಸೋಲುವುದರಲ್ಲೆ ಹೆಚ್ಚು ಆರ್ಥಿಕ ಲಾಭವಿದೆಯೇನೋ ಎಂಬ ಸಂಶಯವೂ ಕಾಡುತ್ತಿದೆ!

ಪರರ ಸ್ವತ್ತನ್ನು ತನ್ನದೇ ಎಂಬಂತೆ ದಾನ ಮಾಡುವ ಮುಖ್ಯಮಂತ್ರಿ ಯಡಿಯೂರಪ್ಪನವರು ಭಾರತ ತಂಡದ ಎಲ್ಲ ಆಟಗಾರರಿಗೂ ಬಿಡಿಎ ಸೈಟು ಕೊಡುವುದಾಗಿ ಘೋಷಿಸಿದ್ದಾರೆ. ನಮ್ಮ ದೇಶ ಕಾಯುವುದಕ್ಕೆ ಬದುಕು ಮುಡಿಪಾಗಿಟ್ಟ ಸೈನಿಕರಿಗೆ ಸಿಗದೇ ಇರುವ ಸೌಲಭ್ಯ ನಮ್ಮ ನೆಲದಲ್ಲೇ ಅವರದಲ್ಲದ ತಪ್ಪಿಗೆ ನೆಲ, ಮನೆ, ಜಾನುವಾರು ಕಳೆದುಕೊಂಡ ಬಡಬಗ್ಗರಿಗೆ ಸಿಗದ ಪರಿಹಾರ, ಕನ್ನಡ ಚಿತ್ರರಂಗಕ್ಕಾಗಿ ಜೀವ ತೇಯ್ದು ನಿಲ್ಲಲು ನೆಲೆಯಿಲ್ಲದ ಅಲೆಯುತ್ತಿರುವವರಿಗೆ ಸಿಗದ ಸಾಂತ್ವನ ಕ್ರಿಕೆಟ್ ಎಂಬ ಜೂಜಿನಲ್ಲಿ ಗೆದ್ದವರಿಗೆ ಸುಲಭವಾಗಿ ಸಿಕ್ಕಿರುವುದು ನಿಜಕ್ಕೂ ವಿಕಟ.

ಹಾಗಂತ ನಮ್ಮ ಆಟಗಾರರ ಬಗ್ಗೆ ನಮಗೇನೂ ಅಗೌರವ ಇಲ್ಲ, ಆದರೆ ಸರ್ಕಾರ ಅವರಿಗೆ ಗೌರವ ತೋರಿಸಿದ ಭಟ್ಟಂಗಿತನದ ಬಗ್ಗೆ ಹೇಸಿಗೆಯಿದೆ. ಸರ್ಕಾರದ ಹಣವನ್ನು ಮಠ ಮಾನ್ಯಗಳಿಗೆ ದಾನ ನೀಡುವುದು, ಇದೇ ನೆಲದ ಬಹುತೇಕರು ಅದೆಷ್ಟೋ ಕಾಲದಿಂದ ಸೈಟಿಗಾಗಿ ಅಲೆದಾಡುತ್ತಿದ್ದರೂ ಕಡೆಗಣಿಸಿ ಅದ್ಯಾರಿಗೋ ಪುಗಸಟ್ಟೆ ಸೈಟು ವಿತರಿಸುವುದು-ಇವೆಲ್ಲ ಫ್ಯೂಡಲ್ ಗುಣಗಳ ಹೊಸ ವರಸೆಯಂತೆಯೇ ಗೋಚರಿಸುತ್ತವೆ.

-ಡಾ.ಜೆ.ಸಿ.ಶರತ್, ತರೀಕೆರೆ



ಏಪ್ರಿಲ್ 6, 2011ರ ಸಂಚಿಕೆಯಲ್ಲಿ ಕೆಎಲ್‌ಇ ಇಂಟರ್‌ನ್ಯಾಷನಲ್ ಸ್ಕೂಲ್ ವಿಷಯ, ಅಲ್ಲಿನ ಫೀಜಿನ ಬಗ್ಗೆ ಮತ್ತು ಅಲ್ಲಿ ನಡೆದಿರುವ ಅನ್ಯಾಯದ ಬಗ್ಗೆ ಪತ್ರಿಕೆ ಬರೆದಿರುವುದನ್ನು ಓದಿ ನೊಂದ ತಂದೆತಾಯಿಗಳು ತುಂಬಾ ಸಂತೋಷಿಸಿದ್ದಾರೆ. ಆ ಸಂತೋಷ ನಿರಂತರವಾಗಲೆಂದು ಹಾರೈಸುತ್ತೇನೆ. ಪತ್ರಿಕೆಯ ಲೇಖನವನ್ನು ಓದಿಯಾದರೂ ಕೆಎಲ್‌ಇ ಸೊಸೈಟಿಯವರಿಗೆ ಒಳ್ಳೆ ಬುದ್ಧಿ ಬಂದು ಇನ್ನು ಮುಂದೆಯಾದರೂ ತಿದ್ದಿಕೊಳ್ಳುತ್ತಾರೆಂದು ನಂಬಿದ್ದೇವೆ. ನಮ್ಮ ಮಕ್ಕಳೂ ಸಹ ಅದೇ ಸ್ಕೂಲಿನಲ್ಲಿ ಓದುತ್ತಿದ್ದಾರೆ. ಅವರಿಗೆ ದುಡ್ಡನ್ನು ಹೊಂದಿಸಿ ಹೊಂದಿಸಿ ಸುಸ್ತಾಗಿದ್ದೇವೆ. ನಿಮ್ಮ ಲೇಖನಕ್ಕಾಗಿ ತುಂಬು ಹೃದಯದ ಧನ್ಯವಾದಗಳು.

-ನೊಂದ ತಂದೆ-ತಾಯಿಗಳು, ಬೆಂಗಳೂರು



ಸಂಗೀತದ ಅಭಿಮಾನಿ

...ರೇಗಾದರೂ ಮಾಡಿ ಮ್ಯೂಸಿಕ್ ಡೈರೆಕ್ಟರ್ ...ಬೇಕು ಎಂದು ತೀರ್ಮಾನಿಸಿದ್ದ ಆ ...ಗ... ಮೊದಲನೆ ಪಿಯುಸಿಯಲ್ಲಿ ಚೆನ್ನಾಗಿ ...ರ್ಕ್ಸ್ ಪಡೆದಿದ್ದರೂ ಹೆಚ್ಚಿಗೆ ಓದಿದರೆ ಎಲ್ಲಿ ತನ್ನ ...ನ ದಾರಿ ಬದಲಾಗಿಬಿಡುತ್ತದೋ ಎಂಬ ...ಕ್ಕೆ ದ್ವಿತೀಯ ಪಿಯುಸಿ ಎಕ್ಸಾಂಗೂ ಅಟೆಂಡ್ ... ಕೈಲಿ ಕೀ ಬೋರ್ಡು ಹಿಡಿದು ...ಊರಿಗೆ ಓಡಿಬಂದಿದ್ದ.


...ಊರಲ್ಲಿ ಆರಾಮಾಗಿ ಉಂಡು, ಆಡಿ ಬೆಳೆದ ...ಗನಿಗೆ ಬೆಂಗಳೂರು ಅಷ್ಟು ಸುಲಭಕ್ಕೇನೂ ...ದಲಿಲ್ಲ. ಆರ್ಕೆಸ್ಟ್ರಾ ತಂಡದ ಸ್ನೇಹಿತರೊಬ್ಬರು ...ೋಕೆ ಜಾಗ ನೀಡಿದ್ದರು, ಆಗಾಗ ಊಟ ... ಕೊಡಿಸಿ ಬೆನ್ನು ತಟ್ಟುತ್ತಿದ್ದರು. ಸಂಗೀತ ...ಶಕನಾಗಬೇಕು ಎಂದು ಕನಸು ಹೊತ್ತು ...ದ್ದ ಹುಡುಗನಿಗೆ ಇಷ್ಟು ಸಿಕ್ಕರೆ ಸಾಕೇ?

...ದೇ ಹೊತ್ತಿಗೆ ಆತನ ತಂದೆ ಕೋಲಾರದಲ್ಲಿ ...ಷ್ಟು ಜಮೀನು ಮಾರಿದ್ದರು. ಮಗ ...ದೊಂದು ಕೀಬೋರ್ಡು ಕೊಡಿಸುವಂತೆ ...ಾಲು ಬಿದ್ದ. 'ಆಗಿದ್ದಾಗಲಿ' ಎಂದು ಎರಡು ... ಜಮೀನು ಮಾರಿದ ದುಡ್ಡು ಸೇರಿಸಿ ಎರಡು ...ರೂಪಾಯಿಯ ಕೀಬೋರ್ಡ್ ಒಂದನ್ನು ...ಸಿದರು. ಕೀಬೋರ್ಡ್ ಬಂದ ಮೇಲೆ ...ರಡು ಪ್ರಾಜೆಕ್ಟ್‌ಗಳೂ ದೊರೆತವು. ಸಿಕ್ಕ ...ರನ್ನು ಇನ್ನೇನು ಆರಂಭಿಸಬೇಕು ಎನ್ನುವಷ್ಟರಲ್ಲಿ ...ಪ್ಪನ್ ಡಾ.ರಾಜ್‌ರನ್ನು ಕಿಡ್ನಾಪ್ ಮಾಡಿಬಿಟ್ಟ. ...ನಾಗಬೇಕಿದ್ದ ಕೆಲಸಗಳೆಲ್ಲಾ ಅಲ್ಲಲ್ಲೇ ...ಹೋದವು. ಬದುಕಿನ ಬಾಗಿಲು ತೆರೆಯಿತು ... ಸಂಭ್ರಮದಲ್ಲಿದ್ದ ಹುಡುಗನ ಎದುರಿಗಿದ್ದುದು ...ಶೂನ್ಯ...

... ಹುಡುಗನ ಹೆಸರು ಅಭಿಮನ್.


...ಂದು ಅಭಿಮನ್ ರಾಯ್ ಆಗಿರುವ ಈತ ... ಸಿನಿಮಾಗಳಿಗೆ ಸಂಗೀತ ನಿರ್ದೇಶನ ...ದ್ದಾರೆ. 'ಅಮಾಸ' ಚಿತ್ರದಿಂದ ಸಿನಿಮಾ ...ದ ಕೆಲಸ ಆರಂಭಿಸಿದ ಅಭಿಮನ್ ...ರಿ', 'ತಾಜ್ ಮಹಲ್', 'ರಾವಣ', ...ಯಾ', 'ತವರಿನ ಋಣ', 'ಆಸ್ಕರ್', ..., 'ಕಾಟನ್‌ಪೇಟೆ', 'ಸ್ವಯಂಕೃಷಿ', 'ಮುರಳಿ ... ಮೀರಾ', 'ಎಕೆ 56', 'ಭೀಮಾತೀರದಲ್ಲಿ'... ಹೀಗೆ ಹಲವು ಚಿತ್ರಗಳಿಗೆ ಮ್ಯೂಸಿಕ್ ನೀಡಿದ್ದಾರೆ.

ಹಾಗೆ ನೋಡಿದರೆ ಅಭಿಮನ್‌ಗೆ ಮೊದಲ ಕಮರ್ಷಿಯಲ್ ಬ್ರೇಕ್ ನೀಡಿದ್ದು 'ಪೂಜಾರಿ' ಸಿನಿಮಾ. 'ಕಣ್ಣಲ್ಲೇ ನನ್ನ ಚಿತ್ರ ಬರೆದನು...', 'ಇಳಿಬೇಡ ಮಗ ಇಳಿಬೇಡ ರೌಡಿಸಂಗೆ ಇಳಿಬೇಡ' ಮತ್ತು 'ಕೇಳೆ ತಂಗಾಳಿ..' ಹಾಡುಗಳು ಹೊಸತನದಿಂದ ಮೂಡಿಬಂದಿದ್ದು ಮಾತ್ರವಲ್ಲ ಅಭಿಮನ್‌ಗೆ ಮಾಸ್ ಚಿತ್ರಗಳಲ್ಲಿ ಅನೇಕ ಅವಕಾಶಗಳನ್ನು ಕೊಡಮಾಡಿತ್ತು. ನಂತರ ಬಂದ 'ತಾಜ್ ಮಹಲ್'ನ 'ಖುಷಿಯಾಗಿದೆ ಏಕೋ ನಿನ್ನಿಂದಲೇ' ಸೇರಿದಂತೆ ಎಲ್ಲ ಹಾಡುಗಳೂ ಸೂಪರ್ ಹಿಟ್ ಎನಿಸಿಕೊಂಡವು. ಸಿನಿಮಾ ಗೆಲ್ಲುತ್ತೋ ಬಿಡುತ್ತೋ ಆದರೆ ಅಭಿಮನ್ ಸಂಗೀತ ನೀಡಿದ ಎಲ್ಲ ಚಿತ್ರಗಳ ಆಡಿಯೋಗಳೂ ಸೂಪರ್‌ಹಿಟ್ ಆಗಿವೆ. 'ರಾವಣ' ಚಿತ್ರದಲ್ಲಿ 'ನಿನ್ನಾ ಮನೆವರೆಗೂ ಜೊತೆಯಲಿ ನಾನೂ ಬರಬಹುದೇ' ಮತ್ತು 'ಚಕ್ಲಿನಿಪ್ಪಟ್ ತಿಂದ್‌ಕಂಡು, ಗೋಲಿ ಆಟ ಆಡ್ಕಂಡು...', 'ಮುನಿಯಾ'ದಲ್ಲಿ 'ಓ ಚಂದಮಾಮ', 'ದಾಸಿಯ ಮಾಡಿಕೋ ಎನ್ನ' ಹಾಡುಗಳಿಗೆ ಅಭಿಮನ್ ನೀಡಿರುವ ವೆರೈಟಿ ಟ್ಯೂನ್‌ಗಳು ಅವರ ಕ್ರಿಯಾಶೀಲತೆಗೆ ಸಾಕ್ಷಿ. ಇನ್ನು 'ಅಂಬೇಡ್ಕರ್' ಚಿತ್ರದಲ್ಲಿ ಡಾ. ಸಿದ್ದಲಿಂಗಯ್ಯನವರ 'ಕೂಳಿಲ್ಲದೇ ಸೊರಗಿದವರು ನಾವು' ಎಂಬ ಹೋರಾಟದ ಹಾಡಿಗೆ ಅಭಿಮನ್ ನೀಡಿದ ಸಂಗೀತ ಕೇಳುಗರನ್ನು ಬೆರಗುಗೊಳಿಸಿತ್ತು. 'ತಾಜ್ ಮಹಲ್' ಚಿತ್ರದ ಸಂಗೀತಕ್ಕಾಗಿ ಆ ವರ್ಷದ ರಾಜ್ಯ ಪ್ರಶಸ್ತಿಯೂ ಸಿಕ್ಕಿತು. ಸಂಗೀತ ನಿರ್ದೇಶನದ ಜೊತೆ ಅಭಿಮನ್ ಅನೇಕ ಚಿತ್ರಗೀತೆಗಳನ್ನೂ ಬರೆದಿದ್ದಾರೆ.



ಒಂದು ಕಾಲಕ್ಕೆ ಬೆಂಗಳೂರು ಸೇರಿ ಊಟಕ್ಕೆ ಕಾಸಿಲ್ಲದೆ ಅಲೆದಾಡಿದ್ದ, ಅವಕಾಶಗಳಿಗಾಗಿ ಒದ್ದಾಡಿದ್ದ ಅಭಿಮನ್‌ಗೆ ಇಂದು ಕೈತುಂಬ ಕೆಲಸವಿದೆ. ಓಂ ಪ್ರಕಾಶ್‌ರಂಥ ಕಮರ್ಷಿಯಲ್ ಡೈರೆಕ್ಟರ್ ತಮ್ಮ ನಿರ್ದೇಶನದ ಎಲ್ಲ ಚಿತ್ರಗಳಲ್ಲೂ ಅಭಿಮನ್‌ಗೆ ಅವಕಾಶ ನೀಡಿದ್ದಾರೆ. ಸಿನಿಮಾ-ಸಂಗೀತವನ್ನೇ ಉಸಿರಾಗಿಸಿಕೊಂಡಿರುವ ಅಭಿಮನ್ ಸದ್ಯ ಮಿಂಚುತ್ತಿರುವ ಸ್ಟಾರ್ ಮ್ಯೂಸಿಕ್ ಡೈರೆಕ್ಟರುಗಳಲ್ಲಿ ಒಬ್ಬರು. ಈ 'ತಾಜಾ' ಸಂಗೀತದ ಮಾಂತ್ರಿಕನಿಗೆ ಚಿತ್ರರಂಗ ಮತ್ತಷ್ಟು ಆಸರೆಯಾಗಲಿ....

• ಅರುಣ್



ಶ್ರೀನಿವಾಸರ ನಂಬಿಕೆ ಬರಗೂರರ ಲೆಕ್ಕಾಚಾರ

'ಮಂದಾಕಿನಿ' ಎಂಬ 'ಐತಿಹಾಸಿಕ' ಚಿತ್ರವನ್ನು ನಿರ್ಮಿಸಿದ್ದ ಬಿ.ಕೆ. ಶ್ರೀನಿವಾಸ್ ಈಗ ಪುಸ್ತಕ ಬರೆಯುವ ಕಾಯಕಕ್ಕಿಳಿದಿದ್ದಾರೆ.

ಮೊದಲು ಹಸು ಕಟ್ಟಿ, ಹಾಲು ಮಾರಿ, ಬೆರಣಿ ತಟ್ಟಿ, ಆನಂತರ ಸಿನಿಮಾ ಥಿಯೇಟರಿನಲ್ಲಿ ಟಿಕೆಟು ಹರಿದು, ಪಿಯರ್‌ಲೆಸ್ ಏಜೆಂಟ್ ಆಗಿ, ರಿಯಲ್ ಎಸ್ಟೇಟ್ ಏಜೆಂಟ್ ಆಗಿ... ಇನ್ನೂ ಏನೇನೋ ಬಿಜಿನೆಸ್ಸು ಮಾಡಿಕೊಂಡಿದ್ದ ಶ್ರೀನಿವಾಸ್ ನಿರ್ಮಿಸಿದ ಒಂದೇ ಸಿನಿಮಾದಲ್ಲಿ ಸಿಕ್ಕಾಪಟ್ಟೆ ಹೆಸರು ಮಾಡಿದವರು. ಸದ್ಯ ಮಾಗಡಿ ರಸ್ತೆಯಲ್ಲಿ ಹರ್ಷ ಮಹಲ್ ಎಂಬ ಕಲ್ಯಾಣ ಮಂಟಪ, ಹೋಟೆಲು, ಲೇಔಟುಗಳನ್ನು ಹೊಂದಿರುವ ಶ್ರೀನಿವಾಸ್ ಅತ್ತ ಗದ್ಯವೂ ಅಲ್ಲದ, ಇತ್ತ ಪದ್ಯವೂ ಅಲ್ಲದ ಆದಿಪ್ರಾಸ-ಅಂತ್ಯಪ್ರಾಸದ ಒಂದಷ್ಟು ನುಡಿಗಟ್ಟುಗಳನ್ನು ಬರೆದು ಅದನ್ನು ಪುಸ್ತಕ ರೂಪದಲ್ಲಿ ಹೊರತಂದು 'ನಂಬಿಕೆಯೇ ಜೀವನ' ಎಂದು ಹೆಸರಿಟ್ಟಿದ್ದಾರೆ.

ಶ್ರೀನಿವಾಸ್ ಬರೆದ ಯದ್ವಾತದ್ವಾ ಪುಟಗಳಿಗೆ ಒಂದಿಷ್ಟು ಕಟಿಂಗು, ಶೇವಿಂಗು ಮಾಡಿ ಒಪ್ಪ ಮಾಡಿರುವ ನಾಡೋಜ ಬರಗೂರು ರಾಮಚಂದ್ರಪ್ಪನವರು ಮುನ್ನುಡಿಯನ್ನೂ ಬರೆದಿದ್ದಾರೆ. 'ಸಾಹಿತ್ಯ ರಚಿಸಲು ಅನುಭವ, ಅಧ್ಯಯನ ಶೀಲತೆ ಎರಡೂ ಇರಬೇಕು. ಶ್ರೀನಿವಾಸ್ ಅವರಿಗೆ ಅನುಭವ ಇದೆ. ಅಧ್ಯಯನ ಶೀಲತೆ ಕಡಿಮೆ ಇದೆ. ತನ್ನಗನಿಸಿದ್ದನ್ನು ಬರೆದಿದ್ದಾರೆ. ಶ್ರೀನಿವಾಸ್ ಭ್ರಮೆಯಿಂದ ಹೊರ ಬರುತ್ತಿದ್ದಾರೆ. ಸಾಹಿತ್ಯ ಪ್ರಪಂಚಕ್ಕೆ ಅಂಬೆಗಾಲಿಡುತ್ತಿದ್ದಾರೆ. ಅವರು ಹೀಗೇ ಬರೆಯುತ್ತಲಿರಲಿ' ಎನ್ನುವುದು ಬರಗೂರರ ಬಯಕೆ!




ಲಂಕೇಶ್ ಪ್ರಕಾಶನ

ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ಬೆಂಗಳೂರು-4 ಫೋನ್: 26676427

...ಕೆ	ಬೆಲೆ	ಪ್ರಸ್ತುತ	80.00
... ಕಾವ್ಯ -ಸಂಗ್ರಹ 1	150.00	ಹುಳಿಮಾವಿನ ಮರ	200.00
... ಕಾವ್ಯ -ಸಂಗ್ರಹ 2	150.00	ಮುಸ್ಸಂಜೆಯ ಕಥಾ ಪ್ರಸಂಗ	250.00
... ಕಾವ್ಯ -ಸಂಗ್ರಹ 3	200.00	ಬಿರುಕು	60.00
...ಸಮೂಹ	90.00	ಅಕ್ಕ	80.00
...ಯುವಮುನ್ನ-ಸಂಗ್ರಹ 1	150.00	ಮಂಜು ಕವಿದ ಸಂಜೆ	85.00
...ಯುವಮುನ್ನ-ಸಂಗ್ರಹ 2	150.00	ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
... ಕಾರಂಜಿಯ ಸ್ಪರ್ಶ	150.00	ಕಲ್ಲು ಕರಗುವ ಸಮಯ	125.00
...ರಕ ಈ ಪುಲಕ	125.00	ನಾನಲ್ಲ	70.00
...ಜೂಜು-ಮೋಜು!	150.00	ಕೆರೆಯ ನೀರನು ಕೆರೆಗೆ ಚೆಲ್ಲಿ	60.00
...ಟಿಪ್ಪಣಿ 1	200.00	ಉಲ್ಲಂಘನೆ	80.00
...ಟಿಪ್ಪಣಿ 2	200.00	ಪಾಪದ ಹೂಗಳು	60.00
...ಟಿಪ್ಪಣಿ 3	200.00	ಬಿರುಕು	40.00
...-ಸಾಹಿತ್ಯ	300.00	ಸಂಕ್ರಾಂತಿ	45.00
... ಲೇಖಕರು	70.00	ತೆರೆಗಳು	50.00
[illegible]	125.00	ಈಡಿಪಸ್ ಮತ್ತು ಅಂತಿಗೊನೆ	80.00

ಟಿ. ಪ್ರಸನ್ನನ ಗೃಹಸ್ಥಾಶ್ರಮ	35.00	ಧನ್ವಂತ್ರಿ ಚಿಕಿತ್ಸೆ	50.00
ಗುಣಮುಖ	60.00	ಮುತ್ತುರಾಜನ ಮುತ್ತು	150.00
ಕ್ರಾಂತಿ ಬಂತು ಕ್ರಾಂತಿ	40.00	ವಿಷ್ಣು ನೂರೊಂದು ನೆನಪು	150.00
ಕಪ್ಪು ಮಲ್ಲಿಗೆ	75.00	ಓ ಈಳಂ	250.00
ಕಂಡಹಾಗೆ	125.00	ಖೈರ್ಲಾಂಜಿ	200.00
ದರವೇಶಿ ಕತೆಗಳು	90.00	ಕಮಲಾ ದಾಸ್ ಕಥೆಗಳು	60.00
ಬಸವರಾಜಮಾರ್ಗ	40.00	ಮಾಂಟೊ ಕಥೆಗಳು	80.00
ಬೆನಜೀರ್	25.00	ಕೋಮುವಾದ	60.00
ಆವರಣ ಎಂಬ ವಿ-ಕೃತಿ	100.00	ಜಾತಿ ಪದ್ಧತಿ	125.00
ಜೈಲೆಂಬ ಲೋಕದಲ್ಲಿ	75.00	ರಾಮಾಯಣ ವಿಷವೃಕ್ಷ	75.00
ವೇದಾಂತ ರೆಜಿಮೆಂಟ್	60.00	ಅರೇಬಿಯನ್ ನೈಟ್ಸ್	150.00
ಕಳೆದುಕೊಂಡವಳು	45.00	ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00
ನೂರುಸ್ವರ	60.00	ಚೆಕ್‌ಪೋಸ್ಟ್	100.00
ಟ್ರೇನ್ ಟು ಪಾಕಿಸ್ತಾನ್	125.00	Some-ಪದ	80.00
ಮಿಡತೆಗಳ ಬರವಿಗೆ....	100.00	ಗೋವು ಪವಿತ್ರ ಎಂಬ ಮಿಥ್ಯ	80.00
ಡಿಸೆಂಬರ್ 13	150.00	ಕರ್ಕರೆಯನ್ನು ಕೊಂದವರ್ಯಾರು?	200.00
ಮನುಸ್ಮೃತಿ	20.00	ಅಸ್ಪೃಶ್ಯ ವಸಂತ	200.00
ರೈತರ ಆತ್ಮ-ಹತ್ಯೆ	10.00		
ಆರೋಗ್ಯ ಮತ್ತು ಜೀವನ	125.00		



Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 20-4-2011 RNI No. KARKAN...

ಭೀಮಾತೀರಕ್ಕೆ ಯಾರು ಒಡೆಯರೋ?



ರೀಮಿಕ್ಸ್ ಪ್ರವೀಣ ಓಂ ಪ್ರಕಾಶ್‌ರಾವ್ ಈಗ ಸ್ವಮೇಕ್ ಚಿತ್ರಕ್ಕೆ ಕೈ ಹಾಕಿದ್ದಾರೆ. ಉತ್ತರ ಕರ್ನಾಟಕದ ಭೀಮಾ ತೀರದ ಜನರಿಗೆ ಸಿಂಹಸ್ವಪ್ನವಾಗಿದ್ದ ಡಕಾಯಿತ ಚಂದಪ್ಪ ಹರಿಜನನ ಕಥೆಯನ್ನಿಟ್ಟುಕೊಂಡು 'ಭೀಮಾ ತೀರದಲ್ಲಿ' ಎಂಬ ಚಿತ್ರವನ್ನು ಓಂಪ್ರಕಾಶ್ ನಿರ್ದೇಶಿಸುತ್ತಿದ್ದಾರೆ. ಅಣಜಿ ನಾಗರಾಜ್ ನಿರ್ಮಾಣದಲ್ಲಿ ಮೊನ್ನೆ ಯುಗಾದಿಯಂದು ಈ ಚಿತ್ರ ಶುರುವಾಗಿದೆ. ಚಂದ್ಯಾನ ಪಾತ್ರದಲ್ಲಿ ನಟ ವಿಜಯ್ ವಿಜೃಂಭಿಸಲಿದ್ದು ಪ್ರಣೀತಾ ಮತ್ತು ಪ್ರಜ್ವಲ್ ಪೂವಯ್ಯ ನಾಯಕಿಯರಾಗಿ ಅಭಿನಯಿಸಲಿದ್ದಾರೆ. ಲಿಕ್‌ಲಾಕ್ ಮಿನಿಸ್ಟರ್ ರೇಣುಕಾಚಾರ್ಯ ಪ್ರಮುಖ ಪಾತ್ರವೊಂದರಲ್ಲಿ ನಟಿಸಲು ಒಪ್ಪಿದ್ದಾನಂತೆ.

1985ರಿಂದ 200ರವರತನಕ ಚಂದಪ್ಪ ಹರಿಜನ ನಡೆಸಿದ ಅಟ್ಟಹಾಸ ಮತ್ತು ದೌರ್ಜನ್ಯದ ಜೊತೆಗೆ ಮನರಂಜನೆಗಾಗಿ ಸ್ವಲ್ಪ ಮಸಾಲೆ ಅಂಶಗಳನ್ನೂ ಸೇರಿಸಿ ಈ ಚಿತ್ರದ ಕಥೆಯನ್ನು ಸಿದ್ಧ ಮಾಡಿಕೊಂಡಿದ್ದಾರೆ ಓಂಪ್ರಕಾಶ್.

ಕಳೆದ ವರ್ಷ ಟಿವಿ ಸಂದರ್ಶನವೊಂದರಲ್ಲಿ "ರವಿ ಬೆಳಗೆರೆ ಬರೆದಿರುವ 'ಭೀಮಾ ತೀರದ ಹಂತಕರು' ಕೃತಿ ನನ್ನನ್ನು ಬಹಳ ಇಂಪ್ರೆಸ್ ಮಾಡಿಬಿಟ್ಟಿದೆ. ಆ ಪುಸ್ತಕವನ್ನು ಆಧರಿಸಿ ಸಿನಿಮಾ ಮಾಡುವುದು ನನ್ನ ಡ್ರೀಮ್" ಎಂದು ರಾವ್ ಹೇಳಿದ್ದರು. ಆದರೀಗ ಅವರ ವರಸೆ ಬದಲಾಗಿದೆ. "ಕಳೆದ ಐದಾರು ವರ್ಷಗಳಿಂದ ಭೀಮಾ ತೀರದ ಜನರನ್ನು ಸಂಪರ್ಕಿಸಿ ಮಾಹಿತಿ ಕಲೆ ಹಾಕಿಕೊಂಡಿದ್ದೇನೆ. ಅಲ್ಲಿನ ಪೊಲೀಸ್ ದಾಖಲೆಗಳು, ಸಾರ್ವಜನಿಕರು, ಪತ್ರಕರ್ತರನ್ನಲ್ಲದೆ ಕಥೆಗೆ ಸಂಬಂಧಪಟ್ಟ ಕೆಲ ಪ್ರತ್ಯಕ್ಷದರ್ಶಿಗಳನ್ನೂ ಸಂಪರ್ಕಿಸಿ, ಅವರಿಂದ ಚಂದ್ಯಾನ ಬಗ್ಗೆ ತಿಳಿದುಕೊಂಡು ಸ್ಕ್ರಿಪ್ಟ್ ಮಾಡಿದ್ದೇನೆ. ಇದರಲ್ಲಿ 30ರಿಂದ 40 ರಷ್ಟು ನೈಜ ಕಥೆ, ಉಳಿದದ್ದು ಕಾಲ್ಪನಿಕವಾಗಿರುತ್ತೆ. ನಿಜವಾಗಲು ಆದದ್ದನ್ನು ತೋರಿಸಿದರೆ ಸಾಕ್ಷ್ಯಚಿತ್ರವಾಗುತ್ತದೆ ಎಂಬ ಕಾರಣಕ್ಕೆ ಬೇರೆ ಅಂಶಗಳನ್ನೂ ಸೇರಿಸಿದ್ದೇನೆ. ರವಿ ಬೆಳಗೆರೆ ಅವರ ಪುಸ್ತಕಕ್ಕೂ ನನ್ನ ಸಿನಿಮಾಕ್ಕೂ ಎಲ್ಲಿಂದೆಲ್ಲಿಯ ಸಂಬಂಧವೇ ಇಲ್ಲ" ಎಂದು ರಾವ್ ಎದೆ ಗುದ್ದಿಕೊಂಡು ಹೇಳುತ್ತಿದ್ದಾರೆ.

ಅದೇನೇ ಇರಲಿ, ಇಂಥದೊಂದು ರಿಯಲಿಸ್ಟಿಕ್ ಸಿನಿಮಾವನ್ನು ಮಾಡಲು ಓಂಪ್ರಕಾಶ್ ಹೇಳಿಮಾಡಿಸಿದ ತಂತ್ರಜ್ಞ. ಈಗಾಗಲೇ 'ಸುಗ್ರೀವ', 'ಗುಬ್ಬಿ', 'ಚೋಕಾಲಿ'ಯಂಥ ಒಂದಷ್ಟು ಸಿನಿಮಾಗಳನ್ನು ನಿರ್ಮಿಸಿ ಖಾಲಿಯಾಗಿರುವ ಅಣಜಿ ಜೇಬು ಭೀಮಾ ತೀರದಿಂದಲಾದರೂ ತುಂಬಲಿ...

ಸೂಪರ್ ಜೊತೆ ಡಬಲ್ ಬೋನಸ್!



'ಸೂಪರ್' ಸಿನಿಮಾ ಮಾಡಿ ಜಾಕ್‌ಪಾಟ್ ಹೊಡೆದ ರಾಕ್‌ಲೈನ್ ವೆಂಕಟೇಶ್ ಅವರಿಗೆ ಈಗ ಎರಡೆರಡು ಬೋನಸ್ ದೊರಕಿದೆ!

ಅವರೀಗ ಅವಳಿ ಮಕ್ಕಳಿಗೆ ಅಜ್ಜನಾಗಿದ್ದಾರೆ. ಕಳೆದ ವರ್ಷವಷ್ಟೇ ರಾಕ್ ತಮ್ಮ ಮಗ ಯತೀಶನನ್ನು ಕಾರ್ಪೋರೇಟರ್ ಕಂ ಪ್ರೊಡ್ಯೂಸರ್ ಮುನಿರತ್ನರ ಮಗಳಿಗೆ ಕೊಟ್ಟು ಮದುವೆ ಮಾಡಿದ್ದರು. ಈಗ ಯತೀಶ್ ಅವರ ಪತ್ನಿ ಸಿಂಧೂರಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಒಟ್ಟಿಗೆ ಜನ್ಮ ನೀಡಿದ್ದಾರೆ. ಅಜ್ಜನಾದ ಖುಷಿಯಲ್ಲಿ "ನನ್ನ ಸೂಪರ್ ಚಿತ್ರ ಬೆಂಗಳೂರಿನಲ್ಲಿ ಮಾತ್ರವಲ್ಲದೆ ಇತರ ಕಡೆಗಳಲ್ಲೂ ಮೂವತ್ತು ಚಿತ್ರಮಂದಿರಗಳಲ್ಲಿ ನೂರು ದಿನ ಓಡಿದೆ. ಇದರ ಬೆನ್ನಲ್ಲೇ ನನ್ನ ಮಗ ಅವಳಿ ಮಕ್ಕಳ ತಂದೆಯಾಗಿದ್ದಾನೆ. ದೇವರು ಕೊಟ್ರೆ ಹೇಗೆ ಮೇಲಿಂದ ಮೇಲೆ ಖುಷಿ ಕೊಡ್ತಾನೆ ನೋಡಿ" ಎಂದು ಸಿಕ್ಕಾಪಟ್ಟೆ ಖುಷಿಯಲ್ಲಿ ಕರಗಿಹೋಗಿದ್ದಾರೆ ರಾಕ್.

ನಿಜ ಹೇಳಬೇಕೆಂದರೆ ರಾಕ್‌ಲೈನ್‌ರ ಪರ್ಸನಾಲಿಟಿ, ಫಿಟ್‌ನೆಸ್ಸು ನೋಡಿದರೆ ಅವರು ಈಗಷ್ಟೇ ಮದುವೆಯಾದ ಮದುಮಗನಂತಿದ್ದಾರೆ. ಇಂಥಾದ್ದರಲ್ಲಿ ಎರಡು ಮೊಮ್ಮಕ್ಕಳ ತಾತ ಎಂದರೆ ಎಂಥವರೂ ನಂಬೋದು ಕಷ್ಟ!



ಸಂಜು ಸೂಪರ್ ಪ್ರಿನ್ಸ್ ಪಾಪರ್!

ಚಾಲೆಂಜಿಂಗ್ ಸ್ಟಾರ್ ಮತ್ತು ಬಾಕ್ಸ್ ಆಫೀಸ್ ಕಿಂಗ್ ಎಂಬ ಬಿರುದುಬಾವಲಿಗಳನ್ನು ಪಡೆದಿರುವ ದರ್ಶನ್ ನಟಿಸಿರುವ, ಓಂ ಪ್ರಕಾಶ್ ರಾವ್ ಎಂಬ ಸ್ಟಾರ್ ನಿರ್ದೇಶಕ ನಿರ್ದೇಶಿಸಿರುವ, ನಿರ್ಮಾಪಕರ ಸಂಘದ ಮಾಜಿ ಅಧ್ಯಕ್ಷ ಹಾಗೂ ಒಂದೇ ಬಾರಿಗೆ ಐದೈದು ಸಿನಿಮಾಗಳನ್ನು ನಿರ್ಮಿಸುವ ತಾಕತ್ತು ಹೊಂದಿರುವ ಸಂದೇಶ್ ನಾಗರಾಜ್ ನಿರ್ಮಿಸಿರುವ 'ಪ್ರಿನ್ಸ್' ಚಿತ್ರ ಮೊನ್ನೆ ಬಿಡುಗಡೆಯಾಯಿತು.



ಈ ಮೂವರು ಅತಿರಥಮಹಾರಥಗಳ ಸಂಗಮವಾದ 'ಪ್ರಿನ್ಸ್' ಬಾಕ್ಸ್ ಆಫೀಸ್‌ನಲ್ಲಿ ಗೆದ್ದೇಗೆಲ್ಲುತ್ತದೆ ಎಂಬುದು ಗಾಂಧಿನಗರ ಪಂಡಿತರ ಲೆಕ್ಕಾಚಾರವಾಗಿತ್ತು, ಇದಕ್ಕೆ ಇನ್ನೊಂದು ಕಾರಣವೂ ಇತ್ತು, ಅದೇನೆಂದರೆ ಹಲವಾರು ಪರಭಾಷಾ ಚಿತ್ರಗಳನ್ನು ಕದ್ದು ರೀಮಿಕ್ಸ್ ಮಾಡುವಲ್ಲಿ ಎತ್ತಿದ ಕೈ ಆಗಿರುವ ಓಂಪ್ರಕಾಶ್ ಮೊದಲ ಬಾರಿಗೆ ತೆಲುಗಿನ ಬಾಕ್ಸ್‌ಆಫೀಸ್‌ನಲ್ಲಿ ಹಿಟ್ ಆಗಿದ್ದ 'ಶಾಕ್' ಎಂಬ ಚಿತ್ರವನ್ನು ಮೊದಲ ಬಾರಿಗೆ ಅಧಿಕೃತವಾಗಿ ಕನ್ನಡಕ್ಕೆ ಭಟ್ಟಿ ಇಳಿಸಿದ್ದರಿಂದ ಈ ಚಿತ್ರ ಖಂಡಿತವಾಗಿಯೂ ಹಿಟ್ ಆಗುತ್ತದೆ ಎಂದು ಎಲ್ಲರೂ ಭಾವಿಸಿದ್ದರು.

ಆದರೂ 'ಪ್ರಿನ್ಸ್' ಚಿತ್ರವನ್ನು ನೋಡಲು ಮೊದಲ ದಿನ ಕೂಡ ಯಾರೂ ಥಿಯೇಟರ್ ಕಡೆಗೆ ಹೋಗಲಿಲ್ಲ! ದರ್ಶನ್‌ನಂತಹ ಚಾರಿಸ್ಮ್ಯಾಟಿಕ್ ಹೀರೋನ ಅಭಿಮಾನಿಗಳೂ 'ಪ್ರಿನ್ಸ್' ನೋಡುವ ಬಗೆ ಆಸಕ್ತಿ ತೋರಿಸಲಿಲ್ಲ, ಹೀಗಾಗಿ ಈ ಚಿತ್ರ ಹಿಟ್ ಆಗುತ್ತದೆ, ನಿರ್ಮಾಪಕರಿಗೆ ಕೋಟ್ಯಂತರ ರೂಪಾಯಿ ಲಾಭ ತಂದು ಕೊಡುತ್ತದೆ ಎಂಬ ಲೆಕ್ಕಾಚಾರಗಳು ಮೊದಲ ದಿನವೇ ನುಚ್ಚುನೂರಾಗಿದೆ.


ಆದರೆ ಇದೇ ಹೊತ್ತಿಗೆ ಯಾರೂ ನಿರೀಕ್ಷಿಸದಿದ್ದಂತಹ ಚಿತ್ರವೊಂದು ಹಿಟ್ ಆಗುವ ಸೂಚನೆಗಳನ್ನು ನೀಡಿದೆ. ಅದು 'ಸಂಜು ವೆಡ್ಸ್ ಗೀತಾ'.

'ಪ್ರಿನ್ಸ್' ಚಿತ್ರದ ಜೊತೆಜೊತೆಗೆ ತೆರೆಕಂಡ 'ಸಂಜು ವೆಡ್ಸ್ ಗೀತಾ' ಎಂಬ ಚಿತ್ರ ಬಾಕ್ಸಾಫೀಸ್‌ನಲ್ಲಿ ಭರ್ಜರಿ ಓಪನಿಂಗ್ ಕಂಡಿದ್ದು ಮಾತ್ರವಲ್ಲ ಕರ್ನಾಟಕದಾದ್ಯಂತ ಒಳ್ಳೆಯ ಪ್ರತಿಕ್ರಿಯೆ ಪಡೆಯುತ್ತಿದೆ.

ಹಾಗೆ ನೋಡಿದರೆ 'ಸಂಜು ವೆಡ್ಸ್ ಗೀತಾ' ಚಿತ್ರದ ಬಗ್ಗೆ ಗಾಂಧಿನಗರದ ಪಂಡಿತರು ಯಾವುದೇ ತರಹದ ನಿರೀಕ್ಷೆಯನ್ನೇ ಹೊಂದಿರಲಿಲ್ಲ, ಅದಕ್ಕೆ ಮುಖ್ಯ ಕಾರಣ ಈ ಚಿತ್ರದ ನಾಯಕ ಶ್ರೀನಗರ ಕಿಟ್ಟಿಯನ್ನು ಗಾಂಧಿನಗರದ ಜನ 'ನತದೃಷ್ಟ ನಾಯಕ'ನೆಂದೇ ಪರಿಗಣಿಸಿರುವುದು. ಹಾಗೆಯೇ ಚಿತ್ರದ ನಾಯಕಿ ರಮ್ಯಾ ಅಸ್ತಂಗತವಾಗುತ್ತಿರುವ ನಟಿ ಎಂದೇ ಸಿನಿಮಾದವರ ಅನಿಸಿಕೆ. ಇನ್ನು ಇದರ ಯುವ ನಿರ್ದೇಶಕ ನಾಗಶೇಖರ್ ಇಲ್ಲಿ ತನಕ ನಿರ್ದೇಶಿಸಿರುವುದು ಒಂದೇ ಒಂದು ಚಿತ್ರವನ್ನು. ಅದಷ್ಟು ಸಾಲದೆಂಬಂತೆ ಈ ಚಿತ್ರದ ನಿರ್ಮಾಪಕ ಪ್ರಮೋದ್ ನಾರಾಯಣ ಗಾಂಧಿನಗರಕ್ಕೆ ಹೊಸಬ. ಹೀಗಾಗಿ 'ಸಂಜು ವೆಡ್ಸ್ ಗೀತಾ' ಚಿತ್ರದ ಬಗ್ಗೆ ಎಲ್ಲೂ-ಯಾವುದೇ ನಿರೀಕ್ಷೆ ಇರಲಿಲ್ಲ,

ಆದರೆ ಈಗ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ದರ್ಶನ್ ಅಭಿನಯದ 'ಪ್ರಿನ್ಸ್' ಚಿತ್ರದ ಗಳಿಕೆಯನ್ನು ಮೊದಲ ದಿನದಿಂದಲೇ ಓವರ್‌ಟೇಕ್ ಮಾಡಿ ಮುನ್ನುಗ್ಗುತ್ತಿದೆ.

ಅದಕ್ಕೇ ಇರಬಹುದು: ಗಾಂಧಿನಗರದಲ್ಲಿ ಒಂದು ಮಾತು ಚಾಲ್ತಿಯಲ್ಲಿದೆ. ಅದೇನೆಂದರೆ 'ಚಿತ್ರದ ಬಿಡುಗಡೆಯ ಕತೆ ಒಂದಾದರೆ, ಬಿಡುಗಡೆಯ ನಂತರ ಮತ್ತೊಂದು ಕಥೆ!" ಸದ್ಯಕ್ಕೆ ಆ ಮಾತು ಸಾಬೀತಾಗಿದೆ!!



ಪಂಚಾಯತಿ ಅಭಿವೃದ್ಧಿ ಅಧಿಕಾರಿ 2011

ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ

ರೂ.350/- ಎಲ್ಲೆಡೆ ಲಭ್ಯ

ಇದು ಗೈಡ್ ಪ್ರಕಾಶನದ ಕೊಡುಗೆ

PDO ನೇಮಕಾತಿ ಪರೀಕ್ಷಾ ತರಬೇತಿ

ಗೈಡ್ ಕೋಚಿಂಗ್ ಸೆಂಟರ್

ಬಸವನಗುಡಿ, ಬೆಂಗಳೂರು

PDO-ಪಂಚಾಯತ್‌ರಾಜ್ ಇಂಗ್ಲಿಷ್ ವ್ಯಾಕರಣ, ಕಂಪ್ಯೂಟರ್ ಪ್ರತ್ಯೇಕ ತರಗತಿಗಳು ಹಾಗೂ ಹೊಸ ಬ್ಯಾಚ್

ಏಪ್ರಿಲ್ 10ರಿಂದ ಆರಂಭ

ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು 4,
ಫೋನ್ ನಂ. 080-26676427/8971330131

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M...